ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 24 ಬುಧವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

46

ಸಂಪುಟ: 46 | ಸಂಚಿಕೆ: 246 | ಪುಟಗಳು: 10
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಕರ್ನಾಟಕ ಜಾನಪದ ಅಕಾಡೆಮಿ ವಿವಿಧ ಪ್ರಶಸ್ತಿಗಳು ಪ್ರಕಟ

ಮೈಸೂರಿನ ಚನ್ನಾಜಮ್ಮ, ಮಂಡ್ಯದ ಹೊನ್ನಯ್ಯ, ಚಾಮರಾಜನಗರದ ಬಸವರಾಜು, ಹಾಸನದ ಯೋಗೇಂದ್ರ ದುದ್ದ, ಕೊಡಗಿನ ಅಮ್ಮಣಿಗೆ ಪ್ರಶಸ್ತಿ

ಬೆಂಗಳೂರು, ಡಿ.23– ರಾಜ್ಯದ 30 ಜಿಲ್ಲೆಗಳ 30 ಕಲಾವಿದರಿಗೆ ವಾರ್ಷಿಕ ಗೌರವ ಪ್ರಶಸ್ತಿ, ಇಬ್ಬರಿಗೆ ಜಾನಪದ ತಜ್ಞ ಪ್ರಶಸ್ತಿ, ಇಬ್ಬರಿಗೆ ಪುಸ್ತಕ ಪ್ರಶಸ್ತಿಯನ್ನು ಕರ್ನಾಟಕ ಜಾನಪದ ಅಕಾಡೆಮಿ ಪ್ರಕಟಿಸಿದೆ.

ಬೆಂಗಳೂರು ನಗರ ಜಿಲ್ಲೆಯ ಸಿದ್ದರಾಜು (ನೀಲಗಾರರ ಪದ, ತಂಬೂರಿ), ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಬಚ್ಚಮ (ಸೋಬಾನೆ), ಬೆಂಗಳೂರು ದಕ್ಷಿಣ ಜಿಲ್ಲೆಯ ಬಿ. ಸಿದ್ದರಾಜಯ್ಯ (ಜಾನಪದ ಗಾಯನ), ಕೋಲಾರ ಜಿಲ್ಲೆಯ ಸೀತಮ್ಮ (ತತ್ವಪದ ಮತ್ತು ಸೋಬಾನೆ), ಚಿಕ್ಕಬಳ್ಳಾಪುರ ಜಿಲ್ಲೆಯ ಕೆ.ಎಂ.ನಾರಾಯಣಸ್ವಾಮಿ (ಕೀಲು ಕುದುರೆ), ತುಮಕೂರು ಜಿಲ್ಲೆಯ ರೇವಣ್ಣ (ಅಲಗು ಕುಣಿತ), ದಾವಣಗೆರೆ ಜಿಲ್ಲೆಯ ಪರಮೇಶ್ವರಪ್ಪ ಕತ್ತಿಗೆ (ಏಕತಾರಿ ಪದಗಳು), ಚಿತ್ರದುರ್ಗ ಜಿಲ್ಲೆಯ ಜಿ.ಎನ್.ವಿರೂಪಾಕ್ಷಪ್ಪ (ಜಾನಪದ ಸಂಗೀತ), ಶಿವಮೊಗ್ಗ ಜಿಲ್ಲೆಯ ಕೆ.ಎಸ್.ಲಿಂಗಪ್ಪ (ಅಂಟಿಕೆ ಪಿಂಟಿಕೆ), ಮೈಸೂರು ಜಿಲ್ಲೆಯ ಚನ್ನಾಜಮ್ಮ (ಸೋಬಾನೆ ಪದ ಮತ್ತು ಜಾನಪದ ಗಾಯನ), ಮಂಡ್ಯ ಜಿಲ್ಲೆಯ ಹೊನ್ನಯ್ಯ (ಕೋಲಾಟ), ಹಾಸನ ಜಿಲ್ಲೆಯ ಯೋಗೇಂದ್ರ ದುದ್ದ (ಗೀಗೀ ಪದ ಮತ್ತು ಲಾವಣಿ, ಭಜನೆ)



ಚನ್ನಾಜಮ್ಮ, ಹೊನ್ನಯ್ಯ, ಬಸವರಾಜು, ಯೋಗೇಂದ್ರ ದುದ್ದ, ಅಮ್ಮಣಿ

ಚಿಕ್ಕಮಗಳೂರು ಜಿಲ್ಲೆಯ ರವಿ (ವೀರಗಾಸೆ), ಚಾಮರಾಜನಗರ ಜಿಲ್ಲೆಯ ಬಸವರಾಜು (ಗೊರುಕನ ನೃತ್ಯ), ದಕ್ಷಿಣ ಕನ್ನಡ ಜಿಲ್ಲೆಯ ಸಮತಿ ಕೊರಗ (ಕೊರಗರ ಡೋಲು), ಉಡುಪಿ ಜಿಲ್ಲೆಯ ಗುಲಾಬಿ ಗೌಡ್ತಿ (ನಾಟಿ ವೈದ್ಯೆ), ಕೊಡಗು ಜಿಲ್ಲೆಯ ಅಮ್ಮಣಿ (ಸೂಲಗಿತ್ತಿ, ಕುಡಿಯ ಜನಾಂಗದ ಹಾಡುಗಾರಿಕೆ), ಬೆಳಗಾವಿ ಜಿಲ್ಲೆಯ ಭೀಮಪ್ಪ ಸಿದ್ಧಪ್ಪ ಮುತ್ನಾಳ್ (ಪುರವಂತಿಕೆ), ಧಾರವಾಡ ಜಿಲ್ಲೆಯ (ಜಾನಪದ ನೃತ್ಯ), ವಿಜಯಪುರ ಜಿಲ್ಲೆಯ ಜ್ಯೋತಿರ್ಲಿಂಗ ಹೊನಕಟ್ಟಿ (ಜಾನಪದ ಗಾಯನ), ಬಾಗಲಕೋಟೆ ಜಿಲ್ಲೆಯ ಚಂದ್ರಲಿಂಗಪ್ಪ (ಪುರವಂತಿಕೆ), ಉತ್ತರ ಕನ್ನಡ ಜಿಲ್ಲೆಯ ಗೌರಿ ನಾಗಪ್ಪ (ಸಂಪ್ರದಾಯದ ಪದಗಳು), ಹಾವೇರಿ ಜಿಲ್ಲೆಯ ಭಿಕ್ಷಾಪತಿ ಸುಂಕಪ್ಪ (ಹಗಲುವೇಷ), ಗದಗ ಜಿಲ್ಲೆಯ ಕಾಶೀಮಸಾಬ ಹುಸೇನಸಾಬ (ಹೆಜ್ಜೆ ಮೇಳ), ಕಲಬುರಗಿ ಜಿಲ್ಲೆಯ ಭಾಗಪ್ಪ (ಜಾನಪದ ಗಾಯನ), ಬೀದರ್ ಜಿಲ್ಲೆಯ ಇಂದ್ರಮ್ಮ (ಮೊಹರಂ ಪದ), ರಾಯಚೂರು ಜಿಲ್ಲೆಯ ಯಂಕನಗೌಡ (ತತ್ವಪದ & ಜಾನಪದ ಗಾಯನ), ಕೊಪ್ಪಳ ಜಿಲ್ಲೆಯ ರಾಮಣ್ಣ (ಹಗಲುವೇಷ), ವಿಜಯನಗರ ಜಿಲ್ಲೆಯ ಕಿಂಡ್ರಿ ಲಕ್ಷ್ಮೀಪತಿ, ಯಾದಗಿರಿ ಜಿಲ್ಲೆಯ ಹನುಮಂತ (ರಿವಾಯತ್ ಪದಗಳು)

ತಜ್ಞ ಪ್ರಶಸ್ತಿ: ಜೀ.ಶಂ.ಪ ತಜ್ಞ ಪ್ರಶಸ್ತಿಗೆ ತುಮಕೂರು ಜಿಲ್ಲೆಯ ಚಿಕ್ಕಣ್ಣ ಯಣ್ಣೆಕಟ್ಟೆ ಹಾಗೂ ಬಿ.ಎಸ್. ಗದ್ದಗಿಮಠ ತಜ್ಞ ಪ್ರಶಸ್ತಿಗೆ ಕಲಬುರಗಿ ಎಚ್.ಟಿ.ಪೋತೆ ಅವರನ್ನು ಆಯ್ಕೆ ಮಾಡಲಾಗಿದೆ.

ಪುಸ್ತಕ ಬಹುಮಾನ: 2024ರ ಸಾಲಿನಲ್ಲಿ ಡಾ.ಇಮಾಮ್ ಸಾಹೇಬ್ ಹಡಗಲಿ ಅವರ ಕನಕಗಿರಿ ಸೀಮೆಯ ಸ್ಥಳ ನಾಮಗಳು, ಡಾ.ಮೀರಾಸಾಬಿಹಳ್ಳಿ ಶಿವಣ್ಣ ಅವರ ಕಾಡುಗೊಲ್ಲರ ಸಂಸ್ಕೃತಿ ಮತ್ತು ಕಾವ್ಯಗಳನ್ನು ಪುಸ್ತಕ ಬಹುಮಾನಕ್ಕೆ ಆಯ್ಕೆ ಮಾಡಲಾಗಿದೆ. ವಾರ್ಷಿಕ ಗೌರವ ಪ್ರಶಸ್ತಿಯು ತಲಾ 25,000, ತಜ್ಞ ಪ್ರಶಸ್ತಿಯು ತಲಾ 50,000, ಪುಸ್ತಕ ಪ್ರಶಸ್ತಿಯು ತಲಾ 25,000 ನಗದು, ಸ್ಮರಣಿಕೆ ಹೊಂದಿರುತ್ತದೆ.

ಮಂಡ್ಯದಲ್ಲಿ ಏಮ್ಸ್ ಮಾದರಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ

ಸ್ಥಾಪನೆಗೆ ಪ್ರಧಾನಿ ಮೋದಿ ಹಸಿರು ನಿಶಾನೆ



10 ಎಕರೆ ಭೂಮಿಗಾಗಿ ರಾಜ್ಯ ಸರ್ಕಾರಕ್ಕೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಪತ್ರ

ಬೆಂಗಳೂರು, ಡಿ.23(ಕೆಎಂಶಿ)– ದೆಹಲಿಯ ಆಲ್ ಇಂಡಿಯಾ ಇನ್ಸ್‌ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ (ಏಮ್ಸ್) ಮಾದರಿಯಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಮಂಡ್ಯ ಜಿಲ್ಲೆಯಲ್ಲಿ ಆರಂಭಿಸಲು ಪ್ರಧಾನಿ ನರೇಂದ್ರ ಮೋದಿ ಹಸಿರು ನಿಶಾನೆ ತೋರಿದ್ದಾರೆ.



ಹೆಚ್.ಡಿ.ಕುಮಾರಸ್ವಾಮಿ

ಮಂಡ್ಯ ಸಂಸದರೂ ಆಗಿರುವ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಕೋರಿಕೆ ಮೇರೆಗೆ ಮೋದಿ ಅವರು, ಪ್ರಧಾನಮಂತ್ರಿ ಸ್ವಾಸ್ಥ್ಯ ಯೋಜನೆಯಡಿ 311 ಕೋಟಿ ರೂ. ವೆಚ್ಚದಲ್ಲಿ ಆಸ್ಪತ್ರೆ ನಿರ್ಮಾಣಕ್ಕೆ ಅನುಮತಿ ನೀಡಿದ್ದಾರೆ.

ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣಕ್ಕೆ ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಂತೆ 10 ಎಕರೆ ಜಾಗ ನೀಡುವಂತೆ ರಾಜ್ಯ ಸರ್ಕಾರಕ್ಕೆ ಕುಮಾರಸ್ವಾಮಿ ಪತ್ರ ಬರೆದಿದ್ದಾರೆ. ಬಹುತೇಕ ಮಂಡ್ಯ ಮತ್ತು ಮದ್ದೂರು ನಡುವೆ ಆಸ್ಪತ್ರೆ ನಿರ್ಮಾಣ ಮಾಡಲು ಚಿಂತನೆ ನಡೆದಿದೆ ಎಂದು ಉನ್ನತ ಮೂಲಗಳು ತಿಳಿಸಿವೆ. ಮಂಡ್ಯ ವೈದ್ಯಕೀಯ ಕಾಲೇಜು ಆಸ್ಪತ್ರೆ ಆವರಣದಲ್ಲೇ ಅತ್ಯಾಧುನಿಕ ಆಸ್ಪತ್ರೆ ನಿರ್ಮಿಸಬಹುದೇ ಎಂದು

■ 6ನೇ ಪುಟಕ್ಕೆ

ಜನವರಿ 29ರಿಂದ ಫೆಬ್ರವರಿ 6ರವರೆಗೆ ಬೆಂಗಳೂರಲ್ಲಿ

ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ

ಪ್ರಕಾಶ್‌ರಾಜ್ ಉತ್ಸವದ ರಾಯಭಾರಿ, 60ಕ್ಕೂ ಹೆಚ್ಚು ದೇಶಗಳ 200 ಚಲನಚಿತ್ರಗಳ 400 ಪ್ರದರ್ಶನ

ಬೆಂಗಳೂರು, ಡಿ.23(ಕೆಎಂಶಿ)– ಬರುವ ಜನವರಿ 29 ರಿಂದ ಫೆಬ್ರವರಿ 6ರವರೆಗೆ 17ನೇ ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ ನಡೆಯಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ತಿಳಿಸಿದ್ದಾರೆ.

ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ಪೂರ್ವಭಾವಿ ಸಭೆ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2025–26ನೇ ಸಾಲಿನ 17ನೇ ಅಂತರರಾಷ್ಟ್ರೀಯ ಚಲನ ಚಿತ್ರೋತ್ಸವಕ್ಕೆ ಅಗತ್ಯವಿರುವ 7 ಕೋಟಿ ರೂ. ಅನುದಾನ ಒದಗಿಸಲಾಗಿದೆ ಎಂದರು.

ಅಂತರಾಷ್ಟ್ರೀಯ ಚಲನಚಿತ್ರೋತ್ಸವದ ಉದ್ಘಾಟನಾ ಕಾರ್ಯಕ್ರಮ ವಿಧಾನ ಸೌಧದ ಭವ್ಯ ಮೆಟ್ಟಿಲುಗಳ ಮೇಲೆ ನಡೆಯಲಿದ್ದು, ಈ ಬಾರಿಯ ಚಲನಚಿತ್ರೋತ್ಸವದ ಧ್ಯೇಯವಾಕ್ಯ 'ಮಹಿಳಾ ಸಬಲೀ ಕರಣ' ಆಗಿರಲಿದೆ. ಅಂತರರಾಷ್ಟ್ರೀಯ ಚಲನ ಚಿತ್ರೋತ್ಸವದ ರಾಯಭಾರಿಯಾಗಿ ಹಿರಿಯ ಕಲಾವಿದ, ನಿರ್ದೇಶಕ ಹಾಗೂ ನಿರ್ಮಾಪಕ ಪ್ರಕಾಶ್ ರಾಜ್ ಅವರನ್ನು ನೇಮಿಸಲಾಗಿದೆ.



17ನೇ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ಪೋಸ್ಟರ್ ಅನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಬಿಡುಗಡೆಗೊಳಿಸಿದರು.

ಚಲನಚಿತ್ರೋತ್ಸವ ಏಷಿಯನ್, ಭಾರತೀಯ ಮತ್ತು ಕನ್ನಡ ಸಿನಿಮಾ ವಿಭಾಗಗಳಲ್ಲಿನ ಸ್ಪರ್ಧೆಗೆ ಚಲನಚಿತ್ರಗಳ ನಿರ್ಮಾಪಕರಿಂದ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಆರಂಭವಾಗಿದ್ದು, ಉತ್ತಮ ಸ್ಪಂದನೆ ದೊರೆತಿದೆ. ಮೂರು ಸ್ಪರ್ಧಾ ವಿಭಾಗಗಳಿಗೆ ಇದುವರೆಗೆ 110ಕ್ಕೂ ಹೆಚ್ಚು ಚಲನಚಿತ್ರಗಳ ಅರ್ಜಿ ಸಲ್ಲಿಕೆಯಾಗಿವೆ. ಅರ್ಜಿ ಸಲ್ಲಿಕೆಗೆ ಡಿಸೆಂಬರ್ 31 ಕಡೆಯ ದಿನವಾಗಿರುತ್ತದೆ.




ಪ್ರಕಾಶ್‌ರಾಜ್

ಸಮಾರೋಪ ಸಮಾರಂಭದಲ್ಲಿ ವಿವಿಧ ವಿಭಾಗಗಳಲ್ಲಿ ಅತ್ಯುತ್ತಮ ಚಲನ ಚಿತ್ರಗಳು ಹಾಗೂ ಕಲಾವಿದರಿಗೆ ಪ್ರಶಸ್ತಿ ಹಾಗೂ ಜೀವಮಾನ ಸಾಧನೆ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದರು. ಚಿತ್ರೋತ್ಸವದಲ್ಲಿ ಪಾಲ್ಗೊಳ್ಳುವ ಚಲನ ಚಿತ್ರಗಳು ರಾಜಾಜಿನಗರದ

■ 6ನೇ ಪುಟಕ್ಕೆ

'ಮಿತ್ರ'ನ ಮಿಂಚು —ಸತೀಶ್ ಆಚಾರ್ಯ



ಇಂದು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಬೇಕಿದ್ದ ಕ್ರಿಕೆಟ್ ಪಂದ್ಯಕ್ಕೆ ಅನುಮತಿ ನಿರಾಕರಣೆ

ಬೆಂಗಳೂರು, ಡಿ.23– ಇಲ್ಲಿನ ಎಂ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಬುಧವಾರ ನಿಗದಿಯಾಗಿದ್ದ ವಿಜಯ್ ಹಜಾರೆ ಟ್ರೋಫಿ ಪಂದ್ಯಗಳನ್ನು ಆಯೋಜಿಸಲು ಅನುಮತಿ ನಿರಾಕರಿಸಲಾಗಿದೆ ಎಂದು ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.



ಆರ್‌ಸಿಬಿ ವಿಜಯೋತ್ಸವದ ಸಂದರ್ಭದಲ್ಲಿ ಕಾಲ್ತುಳಿತದ ಹಿನ್ನೆಲೆಯಲ್ಲಿ ಶಿಫಾರಸು ಮಾಡಲಾದ ಸರಿಪಡಿಸುವ ಕ್ರಮಗಳನ್ನು ಜಾರಿಗೆ ತರಲು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ವಿಫಲವಾಗಿರುವ ಕಾರಣ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

ಇದರ ಪರಿಣಾಮವಾಗಿ ಬುಧವಾರ ನಿಗದಿಯಾಗಿದ್ದ ದೆಹಲಿ ಮತ್ತು ಆಂಧ್ರಪ್ರದೇಶ ನಡುವಿನ ವಿಜಯ್ ಹಜಾರೆ ಟ್ರೋಫಿ ಪಂದ್ಯವನ್ನು ಕ್ರೀಡಾಂಗಣದಲ್ಲಿ ನಡೆಸಲಾಗುವುದಿಲ್ಲ. ಪೊಲೀಸ್, ಅಗ್ನಿಶಾಮಕ ಮತ್ತು ತುರ್ತು ಸೇವೆಗಳು, ಬೆಸ್ಕಾಂ ಮತ್ತು ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಅಧಿಕಾರಿಗಳ ನ್ನೊಳಗೊಂಡ ಸಮಿತಿಯು ಮಂಗಳವಾರ ಕ್ರೀಡಾಂಗಣವನ್ನು ಪರಿಶೀಲಿಸಿದ ನಂತರ ಅನುಮತಿಯನ್ನು ನಿರಾಕರಿಸಲಾಗಿದೆ ಎಂದು

■ 6ನೇ ಪುಟಕ್ಕೆ

ಸಹಾಯದ ಸೋಗಿನಲ್ಲಿ ಗಾಯಾಳುವಿನಿಂದ 80 ಸಾವಿರ ರೂ. ವರ್ಗಾಯಿಸಿಕೊಂಡಿದ್ದ ಇಬ್ಬರ ಬಂಧನ



ನೊಂದ ಗಣೇಶ, ಮನು, ರಮೇಶ

ಮೈಸೂರು, ಡಿ.23 (ಆರ್‌ಕೆ)– ಇತ್ತೀಚಿನ ದಿನಗಳಲ್ಲಿ ಬಹುತೇಕ ರಸ್ತೆ ಅಪಘಾತಗಳು ಸಂಭವಿಸಿದಾಗ ಅವಕಾಶವಾದಿಗಳು ಪ್ರಜ್ಞಾಹೀನ ಸ್ಥಿತಿಯಲ್ಲಿರುವ ಗಾಯಾಳುಗಳ ಚಿನ್ನಾಭರಣ, ಬೆಲೆಬಾಳುವ ವಸ್ತುಗಳು ಹಾಗೂ ಹಣ ಕಸಿದು ಅಮಾನವೀಯವಾಗಿ ವರ್ತಿಸುವ ಪ್ರಕರಣಗಳು ಹೆಚ್ಚಾಗುತ್ತಿವೆ.

ಅಂತಹ ಒಂದು ಘಟನೆ ಮೈಸೂರು ಜಿಲ್ಲೆಯಲ್ಲಿ ಸಂಭವಿಸಿದ್ದು, ದ್ವಿಚಕ್ರ ವಾಹನದಲ್ಲಿ ಬಿದ್ದು ಗಾಯಗೊಂಡಿದ್ದ ವ್ಯಕ್ತಿಗೆ ಸಹಾಯ ಮಾಡುವ ನೆಪದಲ್ಲಿ ಆತನ ಮೊಬೈಲ್‌ನಿಂದ 80 ಸಾವಿರ ರೂ. ಹಣ ವರ್ಗಾವಣೆ ಮಾಡಿಕೊಂಡು ಆಸ್ಪತ್ರೆಗೂ ಸೇರಿಸದೆ ಕೊರೆಯುವ ಚಳಿಯಲ್ಲಿ ಮುಂಜಾನೆ ನಡುರಸ್ತೆಯಲ್ಲಿ ಬಿಟ್ಟು ಆಗಂತುಕರಿಬ್ಬರು ಪರಾರಿಯಾಗಿರುವ ಅಮಾನವೀಯ ಘಟನೆ ಡಿ.16 ರಂದು ನಡೆದಿದೆ.

ಮೈಸೂರಿನ ಹೊರವಲಯದ ಮಹದೇವಪುರ, 2ನೇ ಕ್ರಾಸ್, ಸಿ ಬ್ಲಾಕ್ ನಿವಾಸಿ ಗೋವಿಂದ ಅವರ ಮಗ ರಮೇಶ (25) ಹಾಗೂ ರಮಾಬಾಯಿನಗರದ ರೈಲ್ವೆ ಲೇಔಟ್, 10ನೇ ಕ್ರಾಸ್ ನಿವಾಸಿ ಮುತ್ತಣ್ಣ ಅವರ ಮಗ ಮನು (25) ಎಂಬುವರೆ ಗಾಯಾಳುವಿನಿಂದ 80 ಸಾವಿರ ರೂ. ಹಣ ವರ್ಗಾಯಿಸಿಗೊಂಡವರಾಗಿದ್ದು ಅವರನ್ನು ಮೈಸೂರು ಜಿಲ್ಲಾ ಸೆನ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ವಿವರ: ಹುಣಸೂರು ತಾಲೂಕು ಬೆಂಕಿಪುರ ಗ್ರಾಮದ ಗಣೇಶ್ ಎಂಬುವವರು ಡಿ. 16 ರ ಮಧ್ಯರಾತ್ರಿ ಕಡಕೊಳ ಸಮೀಪದ ಕಾರ್ಖಾನೆಯೊಂದರಲ್ಲಿ ಕೆಲಸ ಮುಗಿಸಿ ಬೈಕ್‌ನಲ್ಲಿ ಹಿಂತಿರುಗುತ್ತಿದ್ದರು. ಮುಂಜಾನೆ ಸುಮಾರು 1.30 ಗಂಟೆ ವೇಳೆ ಮಾರ್ಗಮಧ್ಯೆ ನಾಯಿಯೊಂದು ಅಡ್ಡ ಬಂದ ಪರಿಣಾಮ ನಿಯಂತ್ರಣ ತಪ್ಪಿದ ಗಣೇಶ್ ಕೆಳಗೆ ಬಿದ್ದು ಗಾಯಗೊಂಡರು.

ಪ್ರಜ್ಞಾಹೀನ ಸ್ಥಿತಿಯಲ್ಲಿದ್ದ ಆತನನ್ನು ಗಮನಿಸಿದ ಮನು, ರಮೇಶ್ ಎಂಬುವರು ಹತ್ತಿರ ಬಂದು ಆತನಿಗೆ ನೀರು ಕುಡಿಸಿ ತುಸು ಎಚ್ಚರಗೊಂಡಾಗ ತಾವು ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸುತ್ತೇವೆಂದು ಭರವಸೆ ನೀಡಿದ್ದರಲ್ಲದೇ ನಿಮ್ಮ ಜೇಬಿನಲ್ಲಿ ಹಣವಿದ್ದರೆ ಕೊಡಿ ಎಂದಿದ್ದಾರೆ. ನನ್ನ ಬಳಿ ಹಣವಿಲ್ಲವೆಂದು ರಮೇಶ್ ಹೇಳಿದಾಗ ಆತನ ಮೊಬೈಲ್ ಪಡೆದುಕೊಂಡ ರಮೇಶ್ ತನ್ನ ಹೆಂಡತಿ ಖಾತೆಗೆ 60 ಸಾವಿರ ರೂಗಳನ್ನು ವರ್ಗಾಯಿಸಿಕೊಂಡ ನಂತರ ಮನು ತನ್ನ ಬ್ಯಾಂಕ್ ಖಾತೆಗೆ 20 ಸಾವಿರ ರೂಗಳನ್ನು ವರ್ಗಾಯಿಸಿಕೊಂಡ.

ಮೊಬೈಲ್‌ನಿಂದ ಹಣ ವರ್ಗಾಯಿಸಿಕೊಂಡ ವಿಷಯ ತಿಳಿಯದ ಗಣೇಶ್, ದಯ ಮಾಡಿ ನನ್ನನ್ನು ಆಸ್ಪತ್ರೆಗೆ ಕರೆದೊಯ್ದು ಪ್ರಾಣ ಉಳಿಸಿ ಎಂದು ಅಂಗಲಾಚಿದರೂ ಲೆಕ್ಕಿಸದ ಮನು ಮತ್ತು ರಮೇಶ್ ಆತನನ್ನು ಕೊರೆಯುವ ಚಳಿಯಲ್ಲಿ ರಸ್ತೆ ಬದಿ

■ 6ನೇ ಪುಟಕ್ಕೆ

ಸಮಾಜಕ್ಕೆ ಇದೊಂದು ಪಾಠ

ಅಪಘಾತಕ್ಕೊಳಗಾಗಿ ಗಾಯಗೊಂಡು ನರಳುತ್ತಿರುವವರಿಗೆ ಸಹಾಯ ಮಾಡುವ ಬದಲು ಮೊಬೈಲ್‌ನಿಂದ ದೃಶ್ಯ ಸೆರೆಹಿಡಿಯುವುದು ಅಥವಾ ಅವರು ಧರಿಸಿದ ಚಿನ್ನಾಭರಣ, ಬೆಲೆಬಾಳುವ ವಾಚು, ಇನ್ನಿತರ ವಸ್ತುಗಳು ಹಾಗೂ ಹಣ ಕಸಿದು ಪರಾರಿಯಾಗುತ್ತಿರುವುದು ಶೋಚನೀಯ ಹಾಗೂ ಅಮಾನವೀಯ ಕೃತ್ಯ. ಗಾಯಗೊಂಡು ರಕ್ತಸ್ರಾವದಿಂದ ಒದ್ದಾಡುತ್ತಿರುವವರನ್ನು ಸಾಧ್ಯವಾದರೇ ಆಸ್ಪತ್ರೆಗೆ ಕರೆದೊಯ್ದು ಪ್ರಾಣ ಉಳಿಸುವ ಸತ್ಕಾರ್ಯ ಮಾಡಬೇಕು. ಸಾಧ್ಯವಾಗದಿದ್ದರೆ ಸುಮ್ಮನಾದರೂ ಇರುವುದು ಒಳಿತು. ಆದರೆ ಸಾವು–ಬದುಕಿನ ನಡುವೆ ಒದ್ದಾಡುತ್ತಿದ್ದವರಿಂದ ಅಮೂಲ್ಯ ವಸ್ತುಗಳನ್ನು ಕಸಿಯುವುದು ನಾಗರೀಕ ಸಮಾಜ ತಲೆತಗ್ಗಿಸುವಂತ ಕೃತ್ಯ. ಇಂತಹ ಅಮಾನವೀಯ ಘಟನೆಯೊಂದು ಜಿಲ್ಲೆಯಲ್ಲಿ ನಡೆದಿದ್ದು ತಕ್ಷಣ ನಾವು ಆರೋಪಿಗಳನ್ನು ಬಂಧಿಸಿ ಅವರಿಂದ 80 ಸಾವಿರ ರೂಗಳನ್ನು ವಶಪಡಿಸಿಕೊಂಡಿದ್ದೇವೆ. ಸಹಾಯ ಮಾಡುವ ನೆಪದಲ್ಲಿ ಹಣ ಕಸಿದು ತಲೆಮರೆಸಿ ಕೊಂಡಿದ್ದ ಇಬ್ಬರು ಈಗ ಜೈಲಿನಲ್ಲಿದ್ದಾರೆ ಈ ಘಟನೆ ಇತರರಿಗೂ ಸಹ ಪಾಠವಾಗಬೇಕು. -ಎನ್. ವಿಷ್ಣುವರ್ಧನ, ಮೈಸೂರು ಎಸ್ಪಿ



ವರದಕ್ಷಿಣೆ ಕಿರುಕುಳದಿಂದ ಪತ್ನಿ ಸಾವು: ಪತಿಗೆ 10 ವರ್ಷ ಜೈಲುಶಿಕ್ಷೆ



ಮೈಸೂರು,ಡಿ.23(ಎಂಕೆ)–ವರದಕ್ಷಿಣೆ ಕಿರುಕುಳ ನೀಡಿ, ಪತ್ನಿಯ ಸಾವಿಗೆ ಕಾರಣನಾದ ಪತಿಗೆ 10 ವರ್ಷಗಳ ಕಠಿಣ ಶಿಕ್ಷೆ ಹಾಗೂ 1.35 ಲಕ್ಷ ರೂ. ದಂಡ ವಿಧಿಸಿ ಮೈಸೂರಿನ 5ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಆದೇಶಿಸಿದೆ.

ನಂಜನಗೂಡು ತಾಲೂಕಿನ ದೇವಿರಮ್ಮನಹಳ್ಳಿಯ ಚೈತ್ರಾನಂದ ಮತ್ತು ಸೌಮ್ಯಶ್ರೀ ಪರಸ್ಪರ ಪ್ರೀತಿಸಿ ಮದುವೆಯಾಗಿದ್ದು, ಮದುವೆಯಾದ ಬಳಿಕ ಚೈತ್ರಾನಂದ ಹೊಸದಾಗಿ ಬಟ್ಟೆ ಅಂಗಡಿ ಮಾಡಬೇಕೆಂಬ ದುರಾಸೆಯಿಂದ ವರದಕ್ಷಿಣೆಗಾಗಿ ಪತ್ನಿ ಸೌಮ್ಯಶ್ರೀಯನ್ನು ಪೀಡಿಸಿದ್ದಾನೆ. ನಂತರ 100 ಗ್ರಾಂ ಚಿನ್ನಾಭರಣಗಳನ್ನು ಕೊಟ್ಟ ಬಳಿಕವೂ ಸಾಕಾಗುವುದಿಲ್ಲ. ನಿಮ್ಮಪ್ಪನ ಮನೆಯ ಜಮೀನು ಮಾರಿ 10 ಲಕ್ಷ ರೂ. ತರುವಂತೆ ನೀಡಿದ ಮಾನಸಿಕ ಮತ್ತು ದೈಹಿಕ ಹಿಂಸೆ ತಾಳಲಾರದೆ ಸೌಮ್ಯಶ್ರೀ, 2016ರ ಡಿ.27ರಂದು ನೇಣು ಹಾಕಿಕೊಂಡು ಮೃತಪಟ್ಟಿದ್ದರು.

ಈ ಸಂಬಂಧ ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಚೈತ್ರಾನಂದನ ವಿರುದ್ಧ ತನಿಖೆ ನಡೆಸಿದ ಅಂದಿನ ತನಿಖಾಧಿಕಾರಿ, ಎಸಿಪಿ ಮಹಮ್ಮದ್ ಸುಜೀತ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ ಮೈಸೂರಿನ 5ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಶ್ರೀಮತಿ ಕೆ.ಎನ್.ರೂಪ ಅವರು ಚೈತ್ರಾನಂದನಿಗೆ 10 ವರ್ಷಗಳ ಕಠಿಣ ಶಿಕ್ಷೆ ಹಾಗೂ 1.35 ಲಕ್ಷ ರೂ. ದಂಡ ವಿಧಿಸಿ ಆದೇಶಿಸಿದ್ದಾರೆ. ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕರಾದ ಬಿ.ಯೋಗೇಶ್ವರ ವಾದ ಮಂಡಿಸಿದ್ದಾರೆ.

ಭವಿಷ್ಯನಿಧಿ ಕ್ಷೇತ್ರೀಯ ಕಚೇರಿಯಲ್ಲಿ ರಾಜ್ಯೋತ್ಸವ



ಭವಿಷ್ಯನಿಧಿ ಕ್ಷೇತ್ರೀಯ ಕಚೇರಿಯಿಂದ ಏರ್ಪಡಿಸಿದ್ದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಆಯುಕ್ತ–1 ವಿನೀತ್‌ಕುಮಾರ್, ಆಯುಕ್ತ–2 ಸುಮನ್‌ಗೌರ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಉಪಸ್ಥಿತರಿದ್ದರು.

ಮೈಸೂರು, ಡಿ. 23– ಭವಿಷ್ಯನಿಧಿ ಕ್ಷೇತ್ರೀಯ ಕಚೇರಿ, ಭವಿಷ್ಯನಿಧಿ ಮನೋರಂಜನ ಸಂಘವು ಸಂಯುಕ್ತವಾಗಿ ಕನ್ನಡ ರಾಜ್ಯೋತ್ಸವ ಹಾಗೂ ಕ್ಲಬ್ ದಿನಾಚರಣೆ ಏರ್ಪಡಿಸಿದ್ದವು.

ಅಧ್ಯಕ್ಷತೆ ವಹಿಸಿದ್ದ ಮೈಸೂರಿನ ಗಾಯತ್ರಿಪುರಂನಲ್ಲಿರುವ ಭವಿಷ್ಯನಿಧಿ ಕ್ಷೇತ್ರೀಯ ಕಚೇರಿಯ ಆಯುಕ್ತ–1 ವಿನೀತ್‌ಕುಮಾರ್ ಕನ್ನಡದಲ್ಲಿಯೇ ಭಾಷಣ ಆರಂಭಿಸಿ, ಶುಭಾಶಯ ಕೋರಿದರು. ಅಲ್ಲದೇ ಎಲ್ಲರ ಭವಿಷ್ಯ ಸಮೃದ್ಧವಾಗಿರಲಿ ಎಂದು ಹಾರೈಸಿದರು.

ಕಳೆದ ನಾಲ್ಕೂವರೆ ವರ್ಷಗಳಿಂದ ನಾನು ಮೈಸೂರಿನಲ್ಲಿ ಕೆಲಸ ಮಾಡುತ್ತಿದ್ದೇನೆ. ಇತ್ತೀಚೆಗೆ ರಾಂಚಿ ವಿಮಾನ ನಿಲ್ದಾಣದಲ್ಲಿ ಕನ್ನಡ ಮಾತನಾಡುವ ಮಹಿಳೆಯನ್ನು ಕಂಡು 'ಓಹೋ ನಮ್ಮ ರಾಜ್ಯದವರು ಎಂಬ ಉದ್ಗಾರ ಬಂದಿತು. ಅಷ್ಟರ ಮಟ್ಟಿಗೆ ಕನ್ನಡ ಭಾಷೆ, ನಾಡು ಶ್ರೀಮಂತವಾಗಿದೆ' ಎಂದು ಸಂತಸ ವ್ಯಕ್ತಪಡಿಸಿದರು.

ಕ್ಷೇತ್ರೀಯ ಭವಿಷ್ಯನಿಧಿ ಆಯುಕ್ತ–2 ಸುಮನ್ ಸೌರವ್ ಮಾತನಾಡಿ, ಕನ್ನಡ ರಾಜ್ಯೋತ್ಸವ ಆಚರಿಸುತ್ತಿರುವುದಕ್ಕೆ ಹರ್ಷ ವ್ಯಕ್ತಪಡಿಸಿದರು.

ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನಗಳನ್ನು ವಿತರಿಸಿದರು. ಸರಿತಾ ಕಾರ್ಯಕ್ರಮ ನಿರೂಪಿಸಿದರು. ವೀಣಾ ಸಿ.ಶೇಖರ್ ಸ್ವಾಗತಿಸಿದರು. ನಂಜುಂಡಸ್ವಾಮಿ, ಕೆ.ಪಿ. ಪ್ರಕಾಶ್, ರಮೇಶ್, ಅತುಲ್ಯಾ ಮೊದಲಾದವರು ಇದ್ದರು. ನಂತರ ನೌಕರರು ಹಾಗೂ ಮಕ್ಕಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

ಕಲ್ಬುರ್ಗಿ ಕರ್ನಾಟಕ ಕೇಂದ್ರೀಯ ವಿವಿ ಸ್ನಾತಕೋತ್ತರ ಕೋರ್ಸ್‌ಗಳಿಗೆ ಅರ್ಜಿ ಆಹ್ವಾನ

ಮೈಸೂರು,ಡಿ.23(ಎಂಟಿವೈ)– ಕಲ್ಬುರ್ಗಿ ಕರ್ನಾಟಕ ಕೇಂದ್ರೀಯ ವಿಶ್ವ ವಿದ್ಯಾಲಯದಲ್ಲಿ 2026–27ನೇ ಸಾಲಿನ ಸ್ನಾತಕೋತ್ತರ ಕೋರ್ಸ್‌ಗಳಿಗೆ ಅರ್ಜಿ ಆಹ್ವಾನಿಸಲಾಗಿದ್ದು, ಆಸಕ್ತರು ಜ.14ರೊಳಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವಂತೆ ಕಲ್ಬುರ್ಗಿ ಕರ್ನಾಟಕ ಕೇಂದ್ರೀಯ ವಿಶ್ವ ವಿದ್ಯಾಲಯದ ಡೀನ್ ಎನ್.ಸತ್ಯನಾರಾಯಣ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಲ್ಬುರ್ಗಿ ಕರ್ನಾಟಕ ಕೇಂದ್ರೀಯ ವಿಶ್ವ ವಿದ್ಯಾಲಯದಲ್ಲಿ ಪ್ರಸಕ್ತ ಶೈಕ್ಷಣಿಕ ಸಾಲಿಗೆ ಬಿಎಡ್, ಎಂಎಡ್ ಕೋರ್ಸ್ ಸೇರಿದಂತೆ ವಿವಿಧ ವಿಷಯಗಳ ಎಂಎ, ಎಂಎಸ್ಸಿ, ಎಂಕಾಂ, ಎಂಬಿಎ, ಸಮಾಜ ಕಾರ್ಯ, ಎಂಸಿಎ, ಎಲ್‌ಎಲ್‌ಎಂ, ಎಂಟೆಕ್, ಎಂಪಿಎ ಹಿಂದುಸ್ತಾನಿ ಗಾಯನ, ಮಾಸ್ಟರ್ ಆಫ್ ವಿಶುವಲ್ ಆರ್ಟ್ಸ್ ಸೇರಿದಂತೆ ಸುಮಾರು 35 ವಿವಿಧ ಕೋರ್ಸ್‌ಗಳಿದ್ದು, ಆ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಮಾಡಲಿಚ್ಛಿಸುವವರು ಅರ್ಜಿ ಸಲ್ಲಿಸಬಹುದಾಗಿದೆ. ಇದು ಕೇಂದ್ರೀಯ ವಿವಿ ಆಗಿರುವುದರಿಂದ ಎಲ್ಲೆಡೆ ಹೆಚ್ಚಿನ ಮಾನ್ಯತೆ ಸಿಗಲಿದೆ ಎಂದರು

ಯಾವುದೇ ಸಂಬಂಧಪಟ್ಟ ಪದವಿ ಪಡೆದಿರುವವರು ತಮ್ಮ ಇಚ್ಛೆಯ ಕೋರ್ಸ್‌ಗೆ ಪ್ರವೇಶ ಪಡೆಯಲು ಅರ್ಜಿ ಸಲ್ಲಿಸಬಹುದಾಗಿದೆ. ಆನ್‌ಲೈನ್ ಮೂಲಕವೇ ಅರ್ಜಿ ಸಲ್ಲಿಬೇಕಾಗಿದ್ದು, ಜ. 14ರ ರಾತ್ರಿ 11.50 ರವರೆಗೆ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿದೆ. ರಾಜ್ಯದ ಏಕೈಕ ಕೇಂದ್ರೀಯ ವಿವಿ ಆಗಿದೆ. ಆದರೂ ರಾಜ್ಯದ ವಿದ್ಯಾರ್ಥಿಗಳು ಹೆಚ್ಚಿನ ಪ್ರಮಾಣದಲ್ಲಿ ಪ್ರಯೋಜನ ಪಡೆಯುತ್ತಿಲ್ಲ. ಪ್ರವೇಶಾಗಿ ಹೇಗೆ ಇರುತ್ತದೆ ಎಂಬ ಮಾಹಿತಿ ಕೊರತೆ ಇದಕ್ಕೆ ಕಾರಣವಾಗಿರಲೂ ಬಹುದಾಗಿದೆ. ಈ ನಡುವೆ ನೆರೆ ರಾಜ್ಯದ ವಿದ್ಯಾರ್ಥಿಗಳಷ್ಟೇ ಅಲ್ಲ, ದೂರದ ಕಾಶ್ಮೀರದಿಂದಲೂ ವಿದ್ಯಾರ್ಥಿಗಳು ವಿದ್ಯಾಭ್ಯಾಸಕ್ಕಾಗಿ ಇಲ್ಲಿಗೆ ಬರುತ್ತಿದ್ದಾರೆ. ಹೀಗಾಗಿ ಇಲ್ಲಿನವರು ಸಹಾ ಅನುಕೂಲ ಪಡೆಯಬೇಕೆಂದು ಕೋರಿದರು. ಹೆಚ್ಚಿನ ಮಾಹಿತಿಗೆ ಸಹಾಯವಾಣಿ ದೂ. ಸಂಖ್ಯೆ 011 4075 9000 ಅಥವಾ 011 69227700 ನ್ನು ಸಂಪರ್ಕಿಸಬಹುದಾಗಿದೆ ಎಂದು ಸಲಹೆ ನೀಡಿದರು.

ಮಹೇಶ್‌ನಾಯಕ್‌ಗೆ ಸನ್ಮಾನ...



ಮೈಸೂರಿನ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಸಭಾಂಗಣದಲ್ಲಿ ಸುವರ್ಣ ರಾಜ್ಯ ಶಿವಾರ್ಚಕ ಪ್ರಗತಿಪರ ಸಂಘದ ವತಿಯಿಂದ ನಡೆದ ಕನ್ನಡ ರಾಜ್ಯೋತ್ಸವದ ಕಾರ್ಯಕ್ರಮದಲ್ಲಿ ಮೈಸೂರು ಜಿಲ್ಲಾ ಗ್ರಾಮಾಂತರ ಮೀನುಗಾರರ ಪ್ರಕೋಷ್ಠದ ಸಂಚಾಲಕ ಡಿ.ಮಹೇಶ್ ನಾಯಕ್ ಅವರನ್ನು ಸನ್ಮಾನಿಸಲಾಯಿತು. ಹಾಸ್ಯ ನಟ ಬಿರಾದಾರ್, ನಟ ಪ್ರಭು ಸೂರ್ಯ, ಶಿವ ಅರ್ಚಕರ ಸಂಘದ ಅಧ್ಯಕ್ಷ ಬನ್ನೂರ್ ನಾಗರಾಜ್, ನಂಜುಂಡಸ್ವಾಮಿ, ಗೋವಿಂದರಾಜ್ ಇದ್ದರು.

ನಿಧನ

ರಹೀಂ ಬೇಗ್



ಮೈಸೂರು,ಡಿ.23–ಕೊಳ್ಳೇಗಾಲದ ಹೊಸ ಕುರುಬಗೇರಿ ನಿವಾಸಿ ಹಾಗೂ ಪಿಡಬ್ಲ್ಯುಡಿ ಕಂಟ್ರಾಕ್ಟರ್ ರಹೀಂ ಬೇಗ್(80) ಡಿ.21ರಂದು ನಿಧನರಾದರು. ಮೃತರು ಪತ್ನಿ, ಮೂವರು ಪುತ್ರಿಯರು, ಮೊಮ್ಮಕ್ಕಳು, ಡಿಸಿಸಿ ಅಲ್ಪಸಂಖ್ಯಾತ ವಕ್ತಾರ ಮಿರ್ಜಾ ಜಂಷೀದ್ ಬೇಗ್ ಅಶ್ರಫಿ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಈ ಸಂಬಂಧ ಡಿ.22ರಂದು ಝೋಹರ್ ಸಲಾತ್ ನಂತರ ಅಮೀನಾ ಮಸೀದಿ, ಈದಿಗಾ ಮೊಹಲ್ಲಾದಲ್ಲಿ ನಮಾಜ್–ಎ–ಜನಾಜಾ ಬಳಿಕ ಕೊಳ್ಳೇಗಾಲದ ಈದಿಗಾ ಮೊಹಲ್ಲಾದಲ್ಲಿರುವ ಮುಸ್ಲಿಮರ ರುದ್ರಭೂಮಿಯಲ್ಲಿ ಅಂತ್ಯ ಸಂಸ್ಕಾರ ನೆರವೇರಿತು.

ಡಿ.26ಕ್ಕೆ ಅಹಿಂದ ಒಕ್ಕೂಟದಿಂದ ರಾಜ್ಯೋತ್ಸವ

ಮೈಸೂರು,ಡಿ.23(ಎಂಟಿವೈ)–ಮೈಸೂರಿನ ಪುರಭವನದ ಸಭಾಂಗಣದಲ್ಲಿ ಡಿ.26ರ ಬೆಳಗ್ಗೆ 8.30ರಿಂದ ಸಂಜೆ 5.30 ರವರೆಗೆ ರಾಜ್ಯ ಅಹಿಂದ ಒಕ್ಕೂಟದ ಪ್ರಥಮ ವರ್ಷದ ಕನ್ನಡ ರಾಜ್ಯೋತ್ಸವ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ರಾಜ್ಯ ಅಹಿಂದ ಒಕ್ಕೂಟದ ರಾಜ್ಯಾಧ್ಯಕ್ಷ ದ್ಯಾವಪ್ಪ ನಾಯಕ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಅಂದು ಬೆಳಗ್ಗೆ 8.30ಕ್ಕೆ ಶಾಸಕ ತನ್ವೀರ್ ಸೇಠ್ ಧ್ವಜಾರೋಹಣ ನೆರವೇರಿಸಲಿದ್ದಾರೆ. 9ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಕೆಪಿಸಿಸಿ ಮೀನುಗಾರಿಕಾ ಘಟಕದ ರಾಜ್ಯಾಧ್ಯಕ್ಷ ಮಂಜುನಾಥ್ ಬಿ.ಸುಣ್ಣಗಾರ್ ಚಾಲನೆ ನೀಡಲಿದ್ದಾರೆ. ಬೆಳಗ್ಗೆ 11ಕ್ಕೆ ಸಭಾ ಕಾರ್ಯಕ್ರಮವನ್ನು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಉದ್ಘಾಟಿಸಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಸಕ ಕೆ. ಹರೀಶ್‌ಗೌಡ ವಹಿಸಲಿದ್ದು, ಶಾಸಕ ಜಿ.ಡಿ.ಹರೀಶ್‌ಗೌಡ ತಾಯಿ ಭುವನೇಶ್ವರಿ ಮೂರ್ತಿಗೆ ಪುಷ್ಪಾರ್ಚನೆ ಮಾಡಲಿದ್ದಾರೆ. ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಭುವನೇಶ್ವರಿ ವರ್ಣಚಿತ್ರ ಅನಾವರಣಗೊಳಿಸಲಿದ್ದಾರೆ. ಉದ್ಯಮಿ ಡಾ.ಎ.ಪಿ. ನಾಗೇಶ್ ವಿವಿಧ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಿಸುವರು. ಈ ವೇಳೆ 100 ಮಂದಿ ಮನೆಗೆಲಸದ ಮಹಿಳೆಯರಿಗೆ ಸೀರೆ, ಆಟೋ ಚಾಲಕರಿಗೆ ಸಮವಸ್ತ್ರ ವಿತರಿಸಲಾಗುತ್ತದೆ ಎಂದು ವಿವರಿಸಿದರು.

ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಎಸ್.ರಾಜೇಶ್, ಬಿ.ಜಿ.ಲೋಕೇಶ್, ನಾಗರಾಜು, ಡಾ. ಶಾಂತರಾಜೇ ಅರಸ್, ಆರ್.ಕೆ.ರವಿ, ಮಹೇಶ್, ಮೀನಾಕ್ಷಿ, ಲಕ್ಷ್ಮಿ, ಸರಸ್ವತಿ ಹಾಗೂ ಇನ್ನಿತರರು ಇದ್ದರು.

ಕೇಂದ್ರದ 4 ಹೊಸ ಕಾರ್ಮಿಕ ಸಂಹಿತೆಗಳು ಕಾರ್ಮಿಕರ ಜೀವನ ಗುಣಮಟ್ಟ ಸುಧಾರಿಸಲಿವೆ

ಕಾರ್ಯಾಗಾರದಲ್ಲಿ ಹೈಕೋರ್ಟ್ ಹಿರಿಯ ವಕೀಲ ಎಸ್.ಎನ್.ಮೂರ್ತಿ ಅಭಿಪ್ರಾಯ



ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಮಂಗಳವಾರ ಎನ್‌ಐಪಿಎಂ ಮೈಸೂರು ಚಾಪ್ಟರ್ ವತಿಯಿಂದ ಆಯೋಜಿಸಿದ್ದ ಕಾರ್ಯಾಗಾರದಲ್ಲಿ ಹೈಕೋರ್ಟ್ ಹಿರಿಯ ವಕೀಲ ಎಸ್.ಎನ್.ಮೂರ್ತಿ ಮಾತನಾಡಿದರು.

ಮೈಸೂರು, ಡಿ.23(ಎಂಕೆ)–ಕೇಂದ್ರ ಸರ್ಕಾರ ಜಾರಿಗೊಳಿಸಿರುವ ನಾಲ್ಕು ಹೊಸ ಕಾರ್ಮಿಕ ಸಂಹಿತೆಗಳು ಕಾರ್ಮಿಕರ ಜೀವನ ಗುಣಮಟ್ಟವನ್ನು ಸುಧಾರಿಸಲಿವೆ ಎಂದು ಹೈಕೋರ್ಟ್ ಹಿರಿಯ ವಕೀಲ ಎಸ್.ಎನ್. ಮೂರ್ತಿ ಅಭಿಪ್ರಾಯಪಟ್ಟರು.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ನ್ಯಾಷನಲ್ ಇನ್ಸಿಟಿಟ್ಯೂಟ್ ಆಫ್ ಪರ್ಸನ್ಸ್ ಮ್ಯಾನೇಜ್‌ಮೆಂಟ್ (ಎನ್‌ಐಪಿಎಂ) ಮೈಸೂರು ಚಾಪ್ಟರ್ ವತಿಯಿಂದ ಆಯೋಜಿಸಿದ್ದ ಕಾರ್ಯಾಗಾರದಲ್ಲಿ 'ಕೈಗಾರಿಕಾ ಕಾನೂನು ನವೀಕರಣ' ಕುರಿತು ಮಾತನಾಡಿದ ಅವರು, ಹಳೆಯ 29 ಕಾರ್ಮಿಕ ಕಾಯ್ದೆಗಳನ್ನು ಬದಲಿಸಿ, ಸರಳೀಕರಿಸಲಾಗಿದೆ. ಹೊಸ ಕಾರ್ಮಿಕ ಸಂಹಿತೆಯಿಂದ ಕಾರ್ಮಿಕರಿಗೆ ಬೋನಸ್ ಮತ್ತು ಗ್ರಾಚ್ಯುಟಿ ಅಮೌಂಟ್ ಹೆಚ್ಚಾಗಲಿದೆ ಎಂದು ತಿಳಿಸಿದರು.

ವರ್ಷದಿಂದ ವರ್ಷಕ್ಕೆ ಗುತ್ತಿಗೆ ನೌಕರರ ಸಂಖ್ಯೆ ಹೆಚ್ಚಾಗುತ್ತಿದೆ. ಕಾರ್ಖಾನೆಯೊಂದು ಶೇ.30ರಷ್ಟು ಕೆಲಸವನ್ನು ಖಾಯಂ ನೌಕರರಿಂದ ಮಾಡಿಸಿಕೊಂಡರೆ, ಉಳಿದ ಶೇ.70ರಷ್ಟು ಕೆಲಸಕ್ಕೆ ಹೊರಗುತ್ತಿಗೆ ನೀಡುತ್ತದೆ. ಗುತ್ತಿಗೆ ಪಡೆದ ಸಂಸ್ಥೆಯವರು ಬಡವರನ್ನು ಕರೆತಂದು ಕಡಿಮೆ ಸಂಬಳಕ್ಕೆ ಕೆಲಸ ಮಾಡಿಸಿಕೊಂಡು ಲಾಭ ಮಾಡುತ್ತಾರೆ. ಇದರಿಂದ ಖಾಯಂ ಹಾಗೂ ಹೊರಗುತ್ತಿಗೆ ಕಾರ್ಮಿಕರಲ್ಲಿ ಅಸಮಾನತೆ ಹೆಚ್ಚಾಗುತ್ತದೆ. ವಿಪರ್ಯಾಸವೆಂದರೆ ಖಾಯಂ ನೌಕರರು ಮಾಡುವಷ್ಟೇ ಕೆಲಸವನ್ನು ಹೊರ ಗುತ್ತಿಗೆ ನೌಕರರು ಮಾಡಿದರೆ ಸಮಾನ ವೇತನ ನೀಡಬೇಕು ಎಂಬ ಕಾನೂನು ಇದೆ. ಆದರೆ, ಇದನ್ನು ಯಾರೂ ಪಾಲಿಸುತ್ತಿಲ್ಲ. ಕೇಳುವವರು ಇಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಕೆಎಸ್‌ಆರ್‌ಟಿಸಿ, ಬಿಎಂಟಿಸಿ ನೌಕರರು ಎಲ್ಲೆಂದರಲ್ಲಿ ಬಸ್ ನಿಲ್ಲಿಸಿ ಪ್ರತಿಭಟನೆ ಮಾಡುತ್ತಾರೆ. ನೋಟಿಸ್ ಕೊಟ್ಟು ಪ್ರತಿಭಟನೆ ಮಾಡಬೇಕು ಎಂದಿದ್ದರೂ ಅನುಸರಿಸುವುದಿಲ್ಲ. ರಾಜ್ಯ ಸರ್ಕಾರ ಶಕ್ತಿ ಯೋಜನೆ ಮೂಲಕ ಉಚಿತ ಬಸ್ ಪ್ರಯಾಣವನ್ನೇ ಮಾಡಿಸುತ್ತಿದೆ. ಆದರೆ, ಕೆಎಸ್‌ಆರ್‌ಟಿಸಿಗೆ ಯೋಜನೆ ಮೊತ್ತ ನೀಡದಿರುವುದೇ ಪ್ರತಿ ಭಟನೆಗೆ ಕಾರಣ. ಹಾಗಾಗಿ ಇದು ಸರ್ಕಾರದ ತಪ್ಪೇ ಹೊರತು ಸಾರಿಗೆ ನೌಕರರದ್ದಲ್ಲ ಎಂದರು.

ಸರ್ಕಾರವೇ ಭ್ರಷ್ಟಾಚಾರದಿಂದ ಕೂಡಿದ್ದು, ದೇಶದ ಕಾನೂನು ವ್ಯವಸ್ಥೆ ಹದಗೆಟ್ಟಿದೆ. ನೂರು ಮೋದಿಗಳು ಬಂದರೂ ದೇಶದಲ್ಲಿ ಭ್ರಷ್ಟಾಚಾರ ನಿಯಂತ್ರಿಸಲಾಗದು. ಭ್ರಷ್ಟಾಚಾರ ಮುಕ್ತ ಸಮಾಜ ನಿರ್ಮಾಣಕ್ಕೆ ಜನರೇ ಬದಲಾಗಬೇಕು. ಲಂಚ ಕೊಡುವುದನ್ನು, ಸ್ವೀಕರಿಸುವುದನ್ನು ಬಿಡಬೇಕು ಎಂದು ಸಲಹೆ ನೀಡಿದರು.

ಬಳಿಕ ಎಸ್‌ಇಜಿ ಆಟೋಮೋಟಿವ್ ಇಂಡಿಯಾ ಪ್ರೈ.ಲಿ. ಕಾನೂನು ಸಲಹೆಗಾರ ಕೆ.ನಾಗಭೂಷಣ, 'ಪ್ರಸ್ತುತ ವಹಿವಾಟು' ಕುರಿತು ತಿಳಿಸಿಕೊಟ್ಟರು. ನ್ಯಾಷನಲ್ ಇನ್ಸಿಟಿಟ್ಯೂಟ್ ಆಫ್ ಪರ್ಸನಲ್ ಮ್ಯಾನೇಜ್‌ಮೆಂಟ್(ಎನ್‌ಐಪಿಎಂ) ರಾಷ್ಟ್ರೀಯ ಅಧ್ಯಕ್ಷ ಪಿ.ಆರ್.ಬಸವರಾಜು, ಮಾಜಿ ಅಧ್ಯಕ್ಷ ಡಾ.ಎಂ.ಹೆಚ್.ರಾಜ, ಮೈಸೂರು ಚಾಪ್ಟರ್‌ನ ಅಧ್ಯಕ್ಷ ಶ್ರೀನಿವಾಸನ್, ಉಪಾಧ್ಯಕ್ಷ ಡಾ.ಬಸವರಾಜು ಆರ್.ಶ್ರೇಷ್ಠ, ಕಾರ್ಯದರ್ಶಿ ಎನ್.ದೇವರಾಜ, ಸಹ ಕಾರ್ಯದರ್ಶಿ ಎಂ.ಪುಟ್ಟರಾಜು, ಖಜಾಂಚಿ ವಿ.ಚಂದ್ರಶೇಖರ್, ಸದಸ್ಯರಾದ ಹೆಚ್.ಆರ್. ಸಚಿನ್, ಎಂ.ಎಸ್. ರಾಮಕೃಷ್ಣ, ರಚನಾ ಮಹೇಶ್, ಡಾ.ಜಗದೀಶ್, ಜೆ.ಜಯರಾಮು, ಎಸ್.ಸುರಕ್ಷಾ, ಎಸ್.ಮಧುಶ್ರೀ, ಅರುಣ್ ಸೇನ್ ಮತ್ತಿತರರಿದ್ದರು.



ಚುಂಚನಕಟ್ಟೆ ಶ್ರೀರಾಮ ದೇವರ ಬ್ರಹ್ಮ ರಥೋತ್ಸವ

ಮೈಸೂರು,ಡಿ.23–ಸಾಲಿಗ್ರಾಮ ತಾಲ್ಲೂಕು ತಹಸೀಲ್ದಾರ್ ಕಾರ್ಯಾಲಯದ ವತಿಯಿಂದ ಸಾಲಿಗ್ರಾಮ ತಾಲೂಕು ಚುಂಚನಕಟ್ಟೆ ಶ್ರೀರಾಮ ದೇವರ ಜಾತ್ರೆಯು ಜನವರಿ 10ರಿಂದ 21ರವರೆಗೆ ನಡೆಯಲಿದ್ದು, ಜನವರಿ 16ರಂದು ಬ್ರಹ್ಮರಥೋತ್ಸವ ನಡೆಯಲಿದೆ ಎಂದು ಸಾಲಿಗ್ರಾಮದ ತಾಲೂಕು ತಹಸೀಲ್ದಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರ ಮೈಸೂರು ಜಿಲ್ಲಾ ಪ್ರವಾಸ



ಮೈಸೂರು,ಡಿ.23–ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮೀ ಚೌಧರಿ ಅವರು ಡಿಸೆಂಬರ್ 24ರಂದು ಮೈಸೂರು ಜಿಲ್ಲಾ ಪ್ರವಾಸವನ್ನು ಕೈಗೊಂಡಿದ್ದಾರೆ. ಅಂದು ಬೆಳಗ್ಗೆ 9.30 ಗಂಟೆಗೆ ಮೈಸೂರಿಗೆ ತಲುಪಲಿದ್ದು, ಮೈಸೂರು ಕೆ.ಆರ್ ಆಸ್ಪತ್ರೆಗೆ ಭೇಟಿ ನೀಡುವರು ನಂತರ 10 ಗಂಟೆಗೆ ಮೈಸೂರು ಸ್ಕೇಟಿಂಗ್ ಗ್ರೌಂಡ್, ಲಕ್ಷ್ಮೀಕಾಂತನಗರ ವಾರ್ಡ್, ಹೆಬ್ಬಾಳದಲ್ಲಿ ಕರುನಾಡು ರೈತ ರಕ್ಷಣಾ ಪಡೆ ಹಮ್ಮಿಕೊಂಡಿರುವ ರೈತರ ಹಬ್ಬದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

24.12.2025 ಬುಧವಾರ, ಮಳೆ ನಕ್ಷತ್ರ: ಮೂಲ, 16.12.2025 ರಿಂದ 28.12.2025 ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಪುಷ್ಯ ಮಾಸ, ಶುಕ್ಲ ಪಕ್ಷ, ತಿಥಿ: ಚೌತಿ, ನಕ್ಷತ್ರ: ಧನಿಷ್ಠ, ರಾಹುಕಾಲ: ಮಧ್ಯಾಹ್ನ 12 ರಿಂದ 1.30 ರವರೆಗೆ

- **ಶಬರಿಮಲ ಶ್ರೀ ಅಯ್ಯಪ್ಪ ಪೂಜಾ ಸಮಿತಿ :** 65ನೇ ವಾರ್ಷಿಕ ಪೂಜಾ ಮಹೋತ್ಸವ, ಬೆಳಗ್ಗೆ 5 ರಿಂದ ಮಹಾಗಣಪತಿ ಹೋಮ, ಉಷಾ ಪೂಜಾ, ಶೀವೇಲಿ–ವಾದ್ಯದೊಂದಿಗೆ ದೇವರಿಗೆ ಉತ್ಸವ, ಶ್ರೀ ಅಯ್ಯಪ್ಪನಿಗೆ ನವಗಂ, ಪಂಚಗವ್ಯಂ ಅಭಿಷೇಕ, ಉಚ್ಚಪೂಜಾ, ಸಂಜೆ 4 ರಿಂದ ದೀಪಾರಾಧನೆ, ಯಾತ್ರೆ ಬಲಿ, ಯಾತ್ರೆ ಹೋಮ, ಹೊರಗಡೆ ದೇವರಿಗೆ ವಾದ್ಯದೊಂದಿಗೆ ಉತ್ಸವ, ದೀಪಾರಾಧನೆ, ತಾಲಪೊಲಿ ಸಮೇತ ಅರಾಟ್ಟು ಉತ್ಸವ, ಅರಾಟ್ಟು ಪೂಜಾ, ಧ್ವಜಾವರೋಹಣ, ಬಾಣಬಿರುಸು ಕಾರ್ಯಕ್ರಮ, ಅತ್ತಾಳ ಪೂಜಾ, ಕಳಶಾಭಿಷೇಕಂ, ಶೀವೇಲಿ, ಪ್ರಸಾದ ವಿನಿಯೋಗ, ಸ್ಥಳ: ಶ್ರೀ ಅಯ್ಯಪ್ಪಸ್ವಾಮಿ ದೇವಾಲಯ, ಚಾಮುಂಡಿಬೆಟ್ಟದ ಪಾದ.
- **ಪಾಳ್ಯಂ ಶ್ರೀ ಶಾಸ್ತಾ ಪೀಠಂ, ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ :** ಧನುರ್ಮಾಸದ ವಿಶೇಷ ಪೂಜಾ, ಲಕ್ಷಾರ್ಚನಾ, ವಾರ್ಷಿಕ ಕುಂಭಾಭಿಷೇಕ ಪೂಜಾ ಮಹೋತ್ಸವ, ಮಹತೋಭಾರ ಶ್ರೀ ಧರ್ಮಶಾಸ್ತಾ ಸ್ವಾಮಿಯವರಿಗೆ, ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾನಿವೇದನೆ, ಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸ್ಥಳ: ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನ, ರಾಘವೇಂದ್ರನಗರ.
- **ರಾಮ್‌ಸನ್ಸ್ ಬೊಂಬೆ ಮನೆ:** ದಸರೆಯ ಬೊಂಬೆ ಪ್ರದರ್ಶನ 21ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.
- **ತ್ರಯವಿನ್ಯಾಸ್ ಶ್ರೀವಿದ್ಯಾ ಫೌಂಡೇಷನ್, ಓರಿಯೆಂಟಲ್ ರಿಸರ್ಚ್ ಫೌಂಡೇಷನ್ :** ಶ್ರೀವಿದ್ಯಾ ಕುರಿತು ಅಂತರರಾಷ್ಟ್ರೀಯ ವಿಚಾರ ಸಂಕಿರಣ, ಬೆಳಗ್ಗೆ 8.30ಕ್ಕೆ ಹೊನ್ನಾವರದ ಶ್ರೀನಿಧಿ ಭಟ್ ಮತ್ತು ತಂಡದಿಂದ ವೇದಘೋಷಂ, ಬೆಳಗ್ಗೆ 8.55ಕ್ಕೆ ತ್ರಯವಿನ್ಯಾಸ್ ತಂಡದಿಂದ ಪುಷ್ಪಾರ್ಚನೆ, ದೀಪ ಪೂಜಾ, ಶ್ರೀಮಾತಾ ಲಲಿತಾಮಹಾತ್ರಿಪುರ ಸುಂದರಿ, ಬೆಳಕ್ಕೆ 11ಕ್ಕೆ ಉದ್ಘಾಟನೆ : ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಗೌರವ ಅತಿಥಿಗಳು : ಆಯಿಷ್ ನಿರ್ದೇಶಕರಾದ ಡಾ. ಎಂ. ಪುಷ್ಪಾವತಿ, ಡಾ.ಕೆ.ಜೆ.ಪಂಪಾ, ಡಾ. ಶ್ರೀವಿದ್ಯಾ ವರ್ಮಾ, ಜಿಲ್ಲಾ ಮತ್ತು ಸೆಸನ್ಸ್ ಜಡ್ಜ್ ಕೆ.ರೂಪಾ, ಉದ್ಯಮಿ ಸುಪ್ರೀಯಾ ಮಂಜುನಾಥ್, ಸ್ಥಳ: ಶ್ರೀ ಕೃಷ್ಣರಾಜ ಒಡೆಯರ್ ಸೆನೆಟ್ ಭವನ, ಮಾನಸಗಂಗೋತ್ರಿ.
- **ಕರುನಾಡು ರೈತ ರಕ್ಷಣಾ ಪಡೆ :** ರೈತರ ಹಬ್ಬ, ಮುಖ್ಯ ಅತಿಥಿಗಳು : ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸಚಿವರಾದ ಜಮೀರ್ ಅಹ್ಮದ್, ಎನ್. ಚಲುವರಾಯಸ್ವಾಮಿ, ಮಾಜಿ ಸಂಸದ ಪ್ರತಾಪ್ ಸಿಂಹ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ, ಶಾಸಕರಾದ ತನ್ವೀರ್ ಸೇಠ್, ಜಿ.ಟಿ. ದೇವೇಗೌಡ, ಕೆ. ಹರೀಶ್‌ಗೌಡ, ದರ್ಶನ್ ಪುಟ್ಟಣ್ಣಯ್ಯ, ಟಿ.ಎಸ್. ಶ್ರೀವತ್ಸ, ಜಿ.ಡಿ. ಹರೀಶ್‌ಗೌಡ, ಸ್ಥಳ: ಸ್ಕೇಟಿಂಗ್ ಗ್ರೌಂಡ್, ಲಕ್ಷ್ಮೀಕಾಂತನಗರ, ಹೆಬ್ಬಾಳು, ಬೆಳಗ್ಗೆ 10ಕ್ಕೆ.
- **ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು :** ಮುಖ್ಯ ಕಾರ್ಯನಿರ್ವಾಹಕರ ವಾರ್ಷಿಕ ಸಭೆ, ಉದ್ಘಾಟನೆ : ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಅಧ್ಯಕ್ಷತೆ : ಸಹಕಾರಿ ನಿಗಮದ ಬಿ. ಮಹದೇವಸ್ವಾಮಿ, ಮುಖ್ಯ ಅತಿಥಿಗಳು : ಕೆ. ಶ್ರೀಧರ್, ಎಸ್.ಆರ್. ನಾರಾಯಣರಾವ್, ಹೆಚ್.ಎಸ್. ಕೃಷ್ಣಮೂರ್ತಿ, ಸ್ಥಳ: ಹೋಟೆಲ್ ಹರಿಗೋವಿಂದಾಸ್, ಸಿದ್ದಪ್ಪ ಸರ್ಕಲ್, ಬೆಳಗ್ಗೆ 10.30ಕ್ಕೆ.
- **ಭೈರವಿ ಗೌಡತಿಯರ ಬಳಗ :** 3ನೇ ವಾರ್ಷಿಕೋತ್ಸವ, ಉದ್ಘಾಟನೆ : ಶಾಸಕ ಹರೀಶ್‌ಗೌಡ, ಮುಖ್ಯ ಅತಿಥಿಗಳು : ಎಂಎಂಸಿ ಡೀನ್ ಡಾ. ದಾಕ್ಷಾಯಿಣಿ, ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಗಂಗಾಧರ್, ಜಾನಪದ ಕಲಾವಿದರಾದ ಶ್ರೀಮತಿ ಸುಮಾಪ್ರಶಾಂತ್, ಅಧ್ಯಕ್ಷತೆ : ಬಳಗದ ಅಧ್ಯಕ್ಷೆ ಶ್ರೀಮತಿ ರೇವತಿ ಕೃಷ್ಣಪ್ಪ, ಸ್ಥಳ: ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣ, ವಿಜಯನಗರ, ಬೆಳಗ್ಗೆ 10.30ಕ್ಕೆ.
- **ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯ :** ಕನ್ನಡ ರಾಜ್ಯೋತ್ಸವ, ಪ್ರಶಸ್ತಿ ಪ್ರದಾನ ಸಮಾರಂಭ, ಪ್ರಶಸ್ತಿ ಪುರಸ್ಕೃತರು : ಡಾ. ವಸುಂಧರಾ ದೊರೆಸ್ವಾಮಿ (ಭರತನಾಟ್ಯ), ಬಿ. ಸುರೇಶ್ (ರಂಗಭೂಮಿ), ವಿದ್ವಾನ್ ರಾಜಪ್ಪ ಕಿರಗಸೂರು (ರಂಗಭೂಮಿ), ವಿದುಷಿ ಡಾ. ಸುಕನ್ಯಾ ಪ್ರಭಾಕರ್ (ಸಂಗೀತ ಗಾಯಕಿ), ಸ್ಥಳ: ಸಂಗೀತ ವಿವಿ ಆವರಣ, ಬೆಳಗ್ಗೆ 11.30ಕ್ಕೆ.
- **ಅಹಿಂದ, ಮೈಸೂರು, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ :** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಬೆಂಬಲಿಸಿ ಅಹಿಂದ ಸಮಾವೇಶದ ಪೂರ್ವಸಿದ್ಧತಾ ಸಭೆ, ಸ್ಥಳ: ಹೋಟೆಲ್ ಗುರು ರೆಸಿಡೆನ್ಸಿ, ಜೆಎಲ್‌ಬಿ ರಸ್ತೆ, ಬೆಳಗ್ಗೆ 11.30ಕ್ಕೆ.
- **ಪರಂಪರೆ :** ಶ್ರೀ ಮದ್ಭಾಗವತ ಉಪನ್ಯಾಸ ಸರಣಿ, ವಿಜಯ ವಿಠಲ ಶಾಲೆಯ ಮಕ್ಕಳಿಂದ ಭಜನೆ, ಡಾ. ವೀಣಾ ಬನ್ನಂಜೆ ಅವರಿಂದ ಭಾಗವತ ಉಪನ್ಯಾಸ, ಸ್ಥಳ: ನಾದಬ್ರಹ್ಮ ಸಂಗೀತ ಸಭಾಂಗಣ, ಜೆಎಲ್‌ಬಿ ರಸ್ತೆ, ಸಂಜೆ 6 ರಿಂದ.
- **ಗಾಯನ ಸಭಾ ಮೈಸೂರು :** ಕಲಾ ಸಪ್ತಮಿ ವಾರದ ಕಾರ್ಯಕ್ರಮ, ಸಂಜೆ 6 ರಿಂದ ವಿದುಷಿ ಲಹೋರಿ ಬಂಡೋಪಾಧ್ಯಾಯ ಅವರಿಂದ ಗಾಯನ, ಪಂಡಿತ್ ವೀರಭದ್ರಯ್ಯ ಹಿರೇಮಠ–ಹಾರ್ಮೋನಿಯಂ, ರೋಹಿತ್ ಕಳಲೆ–ತಬಲಾ, ಸಂಜೆ 7 ರಿಂದ ಪಂಡಿತ್ ಸಯನ್ ಗೋಷ್ ಅವರಿಂದ ಸಿತಾರ್ ವಾದನ, ರೋಹಿತ್ ಕಳಲೆ–ತಬಲ, ಸ್ಥಳ: ಜಗನ್ನಾಥ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್, ವಿಜಯನಗರ 1ನೇ ಹಂತ.
- **ನೃತ್ಯ ಸ್ವರ ಅಕಾಡೆಮಿ ಆಫ್ ಪರ್ಫಾಮಿಂಗ್ ಆರ್ಟ್ಸ್ :** ವಾರ್ಷಿಕೋತ್ಸವ ಪ್ರಯುಕ್ತ ನೃತ್ಯ ಸಂಭ್ರಮ, ಅಧ್ಯಕ್ಷತೆ : ಶಾಸಕ ಕೆ. ಹರೀಶ್‌ಗೌಡ, ಮುಖ್ಯ ಅತಿಥಿಗಳು : ಸಂಗೀತ ವಿವಿ ಭರತನಾಟ್ಯ ವಿಭಾಗದ ಉಪನ್ಯಾಸಕರಾದ ಡಾ. ಭುವನೇಶ್ವರಿ, ಶಾಂತವೇರಿ ಗೋಪಾಲಗೌಡ ಆಸ್ಪತ್ರೆ ಮುಖ್ಯಸ್ಥ ಶುಶ್ರುತ್‌ಗೌಡ, ನೃತ್ಯ ವಿದ್ಯಾಪೀಠ ಸಂಸ್ಥಾಪಕ ನಿರ್ದೇಶಕರಾದ ವಿದುಷಿ ಸಿ.ಎನ್. ಅನಿತಾ, ನೃತ್ಯ ಸ್ವರದ ಕಾರ್ಯದರ್ಶಿ ಪಿ. ಶೋಭಾ, ಅಧ್ಯಕ್ಷೆ ವಿದುಷಿ ಕೀರ್ತನ, ವಿದುಷಿ ಕೀರ್ತನ ಎನ್. ಹಾಗೂ ಗುರು ವಿದುಷಿ ಸಿ.ಎನ್. ಅನಿತಾ ಅವರಿಂದ ನಟುವಾಂಗ, ಕು. ನಯನ ನಾಗರಾಜ್ ಅವರಿಂದ ಹಾಡುಗಾರಿಕೆ, ವಿದ್ವಾನ್ ಜಿ.ಟಿ. ಸ್ವಾಮಿ–ಮೃದಂಗ, ವಿದ್ವಾನ್ ತಾಂಡವಮೂರ್ತಿ–ಪಿಟೀಲು, ರಾಘವೇಂದ್ರ ಪ್ರಸಾದ್–ರಿದಂಪ್ಯಾಡ್ಸ್, ಸ್ಥಳ: ಕಲಾಮಂದಿರದ ಕಿರುರಂಗ ಮಂದಿರ, ಸಂಜೆ 6ಕ್ಕೆ.
- **ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ :** ವಿದುಷಿ ಡಾ. ಕೆ.ಎಲ್. ಪ್ರಸನ್ನಾಕ್ಷಿ ಅವರಿಂದ ತಿರುಪ್ಪಾವೈ ಪ್ರವಚನ ಕಾರ್ಯಕ್ರಮ, ಸ್ಥಳ: ಶ್ರೀವೇಣುಗೋಪಾಲಸ್ವಾಮಿ ದೇವಸ್ಥಾನ, ತ್ಯಾಗರಾಜ ರಸ್ತೆ, ಸಂಜೆ 6.30 ರಿಂದ.
- **ಶ್ರೀ ಮಹಾಜನ ಸಭಾ ಟ್ರಸ್ಟ್ :** ತಿರುಪ್ಪಾವೈ ಪಾರಾಯಣ, ಡಾ. ಎನ್.ಕೆ. ರಾಮಶೇಷನ್ ಅವರಿಂದ ಶ್ರೀ ಗೋದಾದೇವಿ ವಿರಚಿತ ತಿರುಪ್ಪಾವೈ ಪ್ರವಚನ, ಸ್ಥಳ: ಶ್ರೀ ಮಹಾಜನ ಸಭಾ ಟ್ರಸ್ಟ್ ಆವರಣ, ಶ್ರೀ ರಾಮಮಂದಿರ, ಕಾಂತರಾಜ ರಸ್ತೆ, ಕೃಷ್ಣಮೂರ್ತಿಪುರಂ, ಸಂಜೆ 6.30 ರಿಂದ.
- **ಶ್ರೀ ಕೃಷ್ಣ ಟ್ರಸ್ಟ್, ಶ್ರೀ ಕೃಷ್ಣ ಮಿತ್ರ ಮಂಡಳಿ :** ಪರ್ಯಾಯ ಪೂರ್ವ ಪರಿಕ್ರಮ ಯಾತ್ರೆ ಪ್ರಯುಕ್ತ ಮೈಸೂರಿಗೆ ಆಗಮಿಸುತ್ತಿರುವ ಪರಮಪೂಜ್ಯ ಶ್ರೀ ಶ್ರೀ ವೇದವರ್ಧನತೀರ್ಥ ಶ್ರೀಪಾದಂಗಳವರ ಸ್ವಾಗತ ಸಮಾರಂಭ, ದಿವ್ಯ ಉಪಸ್ಥಿತರು: ಪರಮಪೂಜ್ಯ ಶ್ರೀ ಶ್ರೀ ವೇದವರ್ಧನತೀರ್ಥ ಶ್ರೀಪಾದಂಗಳವರು, ಮುಖ್ಯ ಅತಿಥಿಗಳು : ಶಾಸಕರಾದ ಟಿ.ಎಸ್. ಶ್ರೀವತ್ಸ, ಕೆ. ಹರೀಶ್‌ಗೌಡ, ಸಮಾಜದ ಮುಖಂಡ ಡಿ.ಟಿ. ಪ್ರಕಾಶ್, ಸನ್ಮಾನ : ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಪ್ರೊ. ಕೆ. ರಾಮಮೂರ್ತಿರಾವ್, ಶ್ರೀಗಳಿಗೆ ಅಭಿವಂದನೆ : ಖ್ಯಾತ ಪ್ರವಚನಕಾರ ವಿದ್ವಾನ್ ಬೆ.ನಾ. ವಿಜಯೇಂದ್ರಾಚಾರ್ಯ, ಸ್ಥಳ: ಶ್ರೀ ಕೃಷ್ಣ ಸಭಾ ಭವನ, ಶ್ರೀಕೃಷ್ಣಧಾಮ, ಸಂಜೆ 6.30ಕ್ಕೆ.
- **ರಂಗಾಯಣ :** ಭಾರತೀಯ ರಂಗ ಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳಿಂದ ವಿಗಡ ವಿಕ್ರಮರಾಯ ನಾಟಕ ಪ್ರದರ್ಶನ, ನಿರ್ದೇಶನ : ಸಾಲಿಯಾನ್ ಉಮೇಶ್ ನಾರಾಯಣ, ಸ್ಥಳ: ವನರಂಗ, ರಂಗಾಯಣ, ಸಂಜೆ 6.30ಕ್ಕೆ.

ನಂಜನಗೂಡಿನಲ್ಲಿಂದು

- **ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ತಾಲೂಕು ಶರಣ ಸಾಹಿತ್ಯ ಪರಿಷತ್ತು, ನಂಜನಗೂಡು :** ಪಠ್ಯಾಧಾರಿತ ವಚನಗಳ ಕುರಿತು ದತ್ತಿ ಉಪನ್ಯಾಸ ಕಾರ್ಯಕ್ರಮ, ಉದ್ಘಾಟನೆ : ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಹೆಳವರಹುಂಡಿ ಸಿದ್ದಪ್ಪ, ವಿಶ್ರಾಂತ ಪ್ರಾಧ್ಯಾಪಕ ಪ್ರೊ. ಮೈಸೂರು ಕೃಷ್ಣಮೂರ್ತಿ ಅವರಿಂದ ದತ್ತಿ ಉಪನ್ಯಾಸ, ಪ್ರಾಸ್ತಾವಿಕ ನುಡಿ: ಜಿಲ್ಲಾ ಶರಣ ಸಾಹಿತ್ಯ ಪರಿಷತ್ ನಿಕಟಪೂರ್ವ ಅಧ್ಯಕ್ಷ ಎಂ. ಚಂದ್ರಶೇಖರ್, ಅಧ್ಯಕ್ಷತೆ : ನಂಜನಗೂಡು ಬಾಲಕರ ಸರ್ಕಾರಿ ಪದವಿಪೂರ್ವ ಕಾಲೇಜು ಪ್ರಿನ್ಸಿಪಾಲ್ ಸಿ.ಆರ್. ದಿನೇಶ್, ಮುಖ್ಯ ಅತಿಥಿಗಳು : ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಎಂ.ಎಸ್. ರಾಮಪ್ರಸಾದ್, ಹಿರಿಯ ಉಪನ್ಯಾಸಕ ಎಸ್. ಲಿಂಗಣ್ಣಸ್ವಾಮಿ, ಉಪಸ್ಥಿತರು : ಎಸ್.ಎಂ. ಕೆಂಪಣ್ಣ, ಎನ್. ನಾಗರಾಜು, ಡಾ. ಕೆ. ಮಾಲತಿ, ಸ್ಥಳ: ಬಾಲಕರ ಸರ್ಕಾರಿ ಪದವಿಪೂರ್ವ ಕಾಲೇಜು, ಬೆಳಗ್ಗೆ 11ಕ್ಕೆ.

ಸುತ್ತೂರಿನಲ್ಲಿಂದು, ನಂಜನಗೂಡು ತಾಲೂಕು

- **ಜಗದ್ಗುರು ಶ್ರೀ ವೀರಸಿಂಹಾಸನ ಮಹಾ ಸಂಸ್ಥಾನ ಮಠ:** ಧನುರ್ಮಾಸದ ವಿಶೇಷ ಪೂಜೆ, ಸ್ಥಳ: ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃ ಗದ್ದುಗೆ, ಶ್ರೀ ಮಹೇಶ್ವರ ಸನ್ನಿಧಿ, ಶ್ರೀ ವೀರಭದ್ರೇಶ್ವರ, ಶ್ರೀ ಸೋಮೇಶ್ವರ, ಶ್ರೀ ನಾರಾಯಣ ಸ್ವಾಮಿ ದೇವಸ್ಥಾನ, ಸುತ್ತೂರು ಶ್ರೀಕ್ಷೇತ್ರ, ಬೆಳಗ್ಗೆಯಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಚಂದ್ರಶೇಖರ ದಾಮ್ಲೆ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಅಂಚೆ ದನಿ ಪಾರಿವಾಳದಿಂದ ಡ್ರೋನ್ ವರೆಗೆ ಅಂಚೆ ಪಯಣ – ಬಾನುಲಿ ಸರಣಿ, ಪ್ರಸ್ತುತಿ–ಡಾ. ಅಮ್ಮಸಂದ್ರ ಸುರೇಶ್, 6.40 ಅರಿವಿನ ಶಿಖರ– ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಶಾಂತಲಾ ವಟ್ಟಂ, ವ್ಯಾಖ್ಯಾನ–ಡಾ. ಹೆಚ್.ಎಂ.ಕಲಾಶ್ರೀ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಚಿತ್ರಗೀತೆಗಳು, 9.05 ಕ್ಯಾನ್ಸರ್ ತಪ್ಪು ತಿಳುವಳಿಕೆ ಈ ಕುರಿತ ಪ್ರಾಯೋಜಿತ ಜಾಗೃತಿ ಕಾರ್ಯಕ್ರಮ, ಪ್ರಾಯೋಜಕರು–ಇಂಡಿಯನ್ ಕ್ಯಾನ್ಸರ್ ಸೊಸೈಟಿ, ಕರ್ನಾಟಕ ಛಾಪ್ಟರ್, 9.10 ವೃತ್ತಿ ಮಾರ್ಗದರ್ಶನ–ಸಂಶೋಧನೆ ಮತ್ತು ಬೌದ್ಧಿಕ ಆಸ್ತಿ ಹಕ್ಕುಗಳು ಅಂದರೆ ರಿಸರ್ಚ್ ಅಂಡ್ ಇಂಟಲೆಕ್ಚುಅಲ್ ಪ್ರಾಪರ್ಟಿ ರೈಟ್ಸ್ ಕುರಿತು ಮೈಸೂರಿನ ಜೆಎಸ್‌ಎಸ್ ಅಕಾಡೆಮಿ ಆಫ್ ಹೈಯರ್ ಎಜುಕೇಶನ್ ಅಂಡ್ ರಿಸರ್ಚ್ ಸಂಸ್ಥೆಯ ಐ.ಪಿ.ಆರ್. ಸೆಲ್‌ನ ಡೆಪ್ಯುಟಿ ಡೀನ್ ಡಾ. ಬಾಲಮುರಳೀಧರ ವಿ. ಮತ್ತು ಸಂಶೋಧನಾ ವಿಭಾಗದ ಡೆಪ್ಯುಟಿ ಡೀನ್ ಡಾ. ಚಂದನ್ ಎಸ್. ಅವರೊಂದಿಗಿನ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಎನ್. ಮಂಜುನಾಥ, 10.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹಾಗೂ ಪತ್ರೋತ್ತರ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳು–ಶ್ರೀನಿವಾಸ್, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, 4.00 ಮಹಿಳಾರಂಗ, 4.30 ಹಿಂದಿ ಚಿತ್ರಗೀತೆಗಳು, 4.45 ಹಿಂದಿ ಪಾಠ–ಶಾಂತಾ ಡಿ. ಕಿಣಿ, 5.00 ಕಟ್ಟೋಣ ಬನ್ನಿ ನಿರ್ಮಾಣ ತಾಂತ್ರಿಕತೆಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ. ಪ್ರಾಯೋಜಕರು–ಅಸೋಸಿಯೇಷನ್ ಆಫ್ ಕನ್ಸಲ್ಟಿಂಗ್ ಸಿವಿಲ್ ಇಂಜಿನಿಯರ್ಸ್ ಇಂಡಿಯಾ, ಮೈಸೂರು ಛಾಪ್ಟರ್, ವಿಷಯ–ನಿರ್ಮಾಣದಲ್ಲಿ ಸಾಮಾನ್ಯವಾಗಿ ಬಳಸಲಾಗುವ ಸಾಮಾಗ್ರಿಗಳ ಕುರಿತು ಮಾರ್ಗದರ್ಶನ, ಭಾಗವಹಿಸುತ್ತಾರೆ –ಪ್ರಮೂರ್ ಗ್ರೂಪ್‌ನ ಛೇರ್ಮನ್ ಎಸ್.ಪ್ರಕಾಶ್ ಮತ್ತು ಕಾಂಕ್ರೀಟ್ ತಂತ್ರಜ್ಞರು ಹಾಗೂ ತರಬೇತುದಾರರಾದ ನಾಗೇಶ್ ಪುಟ್ಟಸ್ವಾಮಿ, ಪ್ರಸ್ತುತಿ–ಬೇದ್ರೆ ಎನ್. ಮಂಜುನಾಥ್, 6.50 ಕೃಷಿರಂಗ–ಕೆ.ಆರ್. ಪೇಟೆ ತಾಲೂಕು ಲಕ್ಷ್ಮೀಪುರದಲ್ಲಿ ನಡೆದ ಬಾನುಲಿ ಕೃಷಿ ಬೆಳಗು ಕಾರ್ಯಕ್ರಮದ ಬಾನುಲಿ ವರದಿ. ಪ್ರಸ್ತುತಿ–ಆರ್. ಲೋಕೇಶ್ವರಿ, 7.45 ಕನ್ನಡ ಚಿತ್ರಗೀತೆಗಳು, 8.00 ವಿಶೇಷ ಕಾರ್ಯಕ್ರಮ ಸರಣಿ, ಆಕಾಶವಾಣಿ 90–ನೆನಪುಗಳ ಹೊತ್ತು – ಮಾಲಿಕೆಯಲ್ಲಿ ಭಾಗವಹಿಸುತ್ತಾರೆ ರಾಷ್ಟ್ರಪ್ರಶಸ್ತಿ ಪುರಸ್ಕೃತ ಸಂಸ್ಕೃತ ವಿದ್ವಾಂಸರಾದ ಡಾ. ಹೆಚ್.ವಿ. ನಾಗರಾಜ್ ರಾವ್, ಇವರೊಂದಿಗೆ ಭಾಗವಹಿಸುತ್ತಾರೆ –ಸುಬ್ರಹ್ಮಣ್ಯ .ಎಸ್., 8.30 ಹಿಂದಿ ಚಿತ್ರಗೀತೆಗಳು, 9.30 ಕ್ರೀಡಾಲೋಕ, 10.00 ಜನಪದ ಸಂಗೀತ

ನರೆಡ್ಕೊ ನೂತನ ಪದಾಧಿಕಾರಿಗಳ ಅಧಿಕಾರ ಸ್ವೀಕಾರ

ಅಧ್ಯಕ್ಷ ಡಾ.ಎಂ.ಡಿ.ರಾಘವೇಂದ್ರ ಪ್ರಸಾದ್, ಉಪಾಧ್ಯಕ್ಷ ಎ.ಪಿ.ನಾಗೇಶ ಸೇರಿ ಪದಾಧಿಕಾರಿಗಳ ಪದಗ್ರಹಣ



ಮೈಸೂರಿನ ರಾಜರಾಜೇಶ್ವರಿ ನಗರದ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಪದಗ್ರಹಣ ಸಮಾರಂಭದಲ್ಲಿ ನರೆಡ್ಕೊ ಮೈಸೂರು ಘಟಕದ ಪದಾಧಿಕಾರಿಗಳು ಹಾಗೂ ಅತಿಥಿಗಳನ್ನು ಸನ್ಮಾನಿಸಲಾಯಿತು.

ಮೈಸೂರು,ಡಿ.23(ಪಿಎಂ)– ನ್ಯಾಷನಲ್ ರಿಯಲ್ ಎಸ್ಟೇಟ್ ಡೆವಲಪ್‌ಮೆಂಟ್ ಕೌನ್ಸಿಲ್ (ನರೆಡ್ಕೊ) ಮೈಸೂರು ಘಟಕದ 2025–27ರ ಅವಧಿಗೆ ನೂತನವಾಗಿ ಆಯ್ಕೆಯಾದ ಪದಾಧಿಕಾರಿಗಳು ಹಾಗೂ ಆಡಳಿತ ಮಂಡಳಿ ಸದಸ್ಯರು ಮಂಗಳವಾರ ಅಧಿಕಾರ ಸ್ವೀಕರಿಸಿದರು.

ಮೈಸೂರಿನ ರಾಜರಾಜೇಶ್ವರಿ ನಗರದ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಪದಗ್ರಹಣ ಸಮಾರಂಭದಲ್ಲಿ ನರೆಡ್ಕೊ ಮೈಸೂರು ಘಟಕದ ಅಧ್ಯಕ್ಷರಾಗಿ (ಪ್ರೆಸಿಡೆಂಟ್) ಡಾ.ಎಂ.ಡಿ. ರಾಘವೇಂದ್ರಪ್ರಸಾದ್, ಉಪಾಧ್ಯಕ್ಷರಾಗಿ ಎ.ಪಿ.ನಾಗೇಶ, ಗೌರವ ಕಾರ್ಯದರ್ಶಿಯಾಗಿ ಪಿ.ಎಸ್.ಗಗನ್ ದೀಪ್, ಖಜಾಂಚಿಯಾಗಿ ಡಾ.ಎಸ್.ಹೆಚ್.ಜಗದೀಶ್, ಜಂಟಿ ಕಾರ್ಯದರ್ಶಿಯಾಗಿ ಪಿ.ನಂಜುಂಡಸ್ವಾಮಿ ಹಾಗೂ ಛೇರ್ಮನ್ ಆಗಿ ಔಟ್ ಗೋಯಿಂಗ್ ಪ್ರೆಸಿಡೆಂಟ್ ವಿ.ಸಿ.ರವಿಕುಮಾರ್ ಅಧಿಕಾರ ಸ್ವೀಕರಿಸಿದರು. ಈ ನೂತನ ಪದಾಧಿಕಾರಿಗಳಿಗೆ ನರೆಡ್ಕೊ ರಾಷ್ಟ್ರೀಯ ಘಟಕದ ನಿಕಟಪೂರ್ವ ಅಧ್ಯಕ್ಷ ಜಿ.ಹರಿಬಾಬು ಪ್ರತಿಜ್ಞಾವಿಧಿ ಬೋಧಿಸಿದರು.

ಬಳಿಕ ನರೆಡ್ಕೊ ಮೈಸೂರು ಘಟಕದ ಆಡಳಿತ ಮಂಡಳಿ ಸದಸ್ಯರಾಗಿ ಆಯ್ಕೆಯಾಗಿರುವ ಎನ್.ದಿವ್ಯೇಶ್, ಎಸ್.ಪಣಿರಾಜ್, ಧೀರೇಂದ್ರ ಕುಮಾರ್ ಆರ್. ಮೆಹ್ತಾ, ಎಸ್.ಮೂರ್ತಿ, ಎಂ.ವಿ.ರಾಮ್ ಪ್ರಸಾದ್, ಎಸ್.ಪಿ.ಆದರ್ಶ, ಸಿ.ವೈ.ಗಣೇಶ್ ಲಾಡ್, ಸಿ.ರಾಘವೇಂದ್ರ, ಪಿ.ಶ್ರೀನಿವಾಸ್, ಹೆಚ್.ಎಸ್.ವಿನೋದ್ ರಾಶಿಂಕರ್ ಅವರು ಸಹ ಅಧಿಕಾರ ಸ್ವೀಕಾರ ಮಾಡಿದರು.

ಇದೇ ವೇಳೆ ಮಾತನಾಡಿದ ನರೆಡ್ಕೊ ಕರ್ನಾಟಕ ಘಟಕದ ಅಧ್ಯಕ್ಷ ಮನೋಜ್ ಲೋಧಾ, ನರೆಡ್ಕೊ ಮೈಸೂರು ಘಟಕವು 2016ರಲ್ಲಿ ಪ್ರಾರಂಭವಾಯಿತು. ಬಿಲ್ಡರ್, ಡೆವಲಪರ್, ವಾಸ್ತುಶಿಲ್ಪ ತಜ್ಞರು, ಪಟ್ಟಣ ಯೋಜಕರು ಮೊದಲಾದವರು ನರೆಡ್ಕೊ ಸದಸ್ಯತ್ವ ಹೊಂದಿದ್ದಾರೆ. ಸಂಘಟಿತವಾಗಿ ಕೆಲಸ ಮಾಡುವುದರಿಂದ ನಾವು ಯಶಸ್ವಿಯಾಗಿ ಮುನ್ನಡೆಯಬಹುದು. ಬಿಲ್ಡರ್ ಸಮುದಾಯವಾಗಿ ನಾವು ಒಗ್ಗಟ್ಟಿನಿಂದ ಮುನ್ನಡೆಯಬೇಕು. ನಾವು ಈ ರೀತಿಯಲ್ಲಿ ಸಂಘಟನಾತ್ಮಕವಾಗಿ ಮುನ್ನಡೆದರೆ, ನಮ್ಮ ವ್ಯವಹಾರಗಳನ್ನು ಸಮರ್ಪಕವಾಗಿ ಅರ್ಥ ಮಾಡಿಕೊಳ್ಳಲು ಸಾಧ್ಯವಾಗಲಿದೆ. ಜೊತೆಗೆ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬಹುದು ಎಂದು ಹೇಳಿದರು.

ನರೆಡ್ಕೊ ರಾಷ್ಟ್ರೀಯ ಘಟಕದ ನಿಕಟಪೂರ್ವ ಅಧ್ಯಕ್ಷ ಜಿ.ಹರಿಬಾಬು ಮಾತನಾಡಿ, ರಿಯಲ್ ಎಸ್ಟೇಟ್ ಮತ್ತು ಕೃಷಿ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದೇನೆ. ರಿಯಲ್ ಎಸ್ಟೇಟ್ ಲಾಭದಾಯಕ ಉದ್ದಿಮೆಯಾಗಿದೆ ಎಂದರಲ್ಲದೆ, ನರೆಡ್ಕೊ ಮೈಸೂರು ಘಟಕದ ನೂತನ ಪದಾಧಿಕಾರಿಗಳಿಗೆ ಅಭಿನಂದನೆ ತಿಳಿಸಿದರು.

ಔಟ್ ಗೋಯಿಂಗ್ ಪ್ರೆಸಿಡೆಂಟ್ ವಿ.ಸಿ.ರವಿಕುಮಾರ್ ಮಾತನಾಡಿ, ನಮ್ಮ ಆಡಳಿತಾವಧಿಯಲ್ಲಿ ಸಾಕಷ್ಟು ಸದಸ್ಯರನ್ನು ನೋಂದಣಿ ಮಾಡಿಸಲಾಗಿದೆ. ನಮ್ಮ ಅವಧಿಯಲ್ಲಿ ನರೆಡ್ಕೊ ಮೈಸೂರು ಘಟಕಕ್ಕೆ 50 ಲಕ್ಷ ದೇಣಿಗೆ ಸಂಗ್ರಹಿಸಲಾಯಿತು. ರಿಯಲ್ ಎಸ್ಟೇಟ್‌ಗೆ ಸಂಬಂಧಿಸಿದಂತೆ ಸಂಪನ್ಮೂಲ ವ್ಯಕ್ತಿಗಳ ಮೂಲಕ ಕಾರ್ಯಾಗಾರ, ವಿಚಾರ ಸಂಕಿರಣ ನಡೆಸಿ ಅಗತ್ಯ ಮಾಹಿತಿ ಒದಗಿಸಲಾಯಿತು. ನನ್ನೊಂದಿಗೆ ಕೈಜೋಡಿಸಿದ ನಮ್ಮ ತಂಡದ ಪದಾಧಿಕಾರಿಗಳಿಗೆ ಕೃತಜ್ಞತೆ ಅರ್ಪಿಸುತ್ತೇನೆ. ಎಲ್ಲಾ ಸದಸ್ಯರ ವಿಶ್ವಾಸದೊಂದಿಗೆ ಕೆಲಸ ಮಾಡಿದ್ದು, ಅಂತೆಯೇ ನೂತನ ಮಂಡಳಿಯೂ ಮುನ್ನಡೆಯಬೇಕೆಂದು ಕಿವಿಮಾತು ಹೇಳುವುದಾಗಿ ಅವರು ತಿಳಿಸಿದರು.

ಅತಿಥಿಯಾಗಿ ಪಾಲ್ಗೊಂಡಿದ್ದ ವಿಧಾನ ಪರಿಷತ್ ಸದಸ್ಯ ಕೆ.ಶಿವಕುಮಾರ್ ಮಾತನಾಡಿ, ಕಳೆದ ಮೂರ್‍ನಾಲ್ಕು ವರ್ಷಗಳಲ್ಲಿ ಭೂಮಿ ದರ ಗಗನಕ್ಕೇರಿದೆ. ಇದನ್ನು ನೋಡಿದರೆ ಆರ್ಥಿಕವಾಗಿ ಹಿಂದುಳಿದವರು ಹಾಗೂ ಮಧ್ಯಮ ವರ್ಗದವರು ಒಂದು ಮನೆ ಕಟ್ಟಿಕೊಳ್ಳುವುದು ದೂರದ ಕನಸು ಎಂದರು.

ಮೈಸೂರಿನಲ್ಲಿ ನೆಲಸುವ ಕನಸು ಬಹುತೇಕರು ಹೊಂದುತ್ತಿದ್ದಾರೆ. ಉತ್ತಮ ಶೈಕ್ಷಣಿಕ ವಾತಾವರಣ, ಪ್ರಾಕೃತಿಕ ಸೌಂದರ್ಯ ಹಾಗೂ ಪ್ರವಾಸಿ ತಾಣಗಳನ್ನು ಹೊಂದಿರುವುದು ಮೊದಲಾದ ಕಾರಣಗಳಿಗೆ ಮೈಸೂರಿನಲ್ಲಿ ನೆಲಸಬೇಕೆಂಬ ಬಯಕೆ ಹೊಂದಿರುವವರ ಸಂಖ್ಯೆ ಹೆಚ್ಚುತ್ತಿದೆ. ಅವರಿಗೆಲ್ಲರಿಗೂ ಕೈಗೆಟ್ಟುಕುವ ದರದಲ್ಲಿ ನೀವು ನಿವೇಶನ ಕಲ್ಪಿಸಬೇಕಿದೆ. ವಿಶೇಷವಾಗಿ ಒಂದು ಮನೆ ಕಟ್ಟಿಕೊಳ್ಳುವ ಕನಸು ಹೊಂದಿರುವ ಆರ್ಥಿಕವಾಗಿ ಹಿಂದುಳಿದ ಕುಟುಂಬಗಳಿಗೆ ಆದ್ಯತೆ ನೀಡಬೇಕು ಎಂದು ಸಲಹೆ ನೀಡಿದರು.

ಎರಡನೇ ಹಂತದ ನಗರಗಳಲ್ಲಿ ಸೇವೆಯನ್ನು ನರೆಡ್ಕೊ ವಿಸ್ತರಿಸಬೇಕು. ಮುಂದಿನ 10 ವರ್ಷಗಳಲ್ಲಿ ಸಿವಿಲ್ ಎಂಜಿನಿಯರ್‌ಗಳ ಕೊರತೆ ಉಂಟಾಗಲಿದೆ. ಎಂಜಿನಿಯರ್‌ಗಳ ಸೃಷ್ಟಿಗೂ ಕ್ರಮ ವಹಿಸಬೇಕು ಎಂದರು.

ಸೆಸ್ಕ್ ಅಧ್ಯಕ್ಷರೂ ಆದ ಶಾಸಕ ರಮೇಶ್ ಬಂಡಿಸಿದ್ದೇಗೌಡ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದರು. ನರೆಡ್ಕೊ ರಾಷ್ಟ್ರೀಯ ಉಪಾಧ್ಯಕ್ಷ ಮುಪ್ಪಾ ವೆಂಕಯ್ಯ ಚೌಧರಿ, ಕರ್ನಾಟಕ ಘಟಕದ ಕಾರ್ಯದರ್ಶಿ ಹಾಲಾ ರಮೇಶ್, ಮೈಸೂರು ಘಟಕದ ನಿಕಟಪೂರ್ವ ಅಧ್ಯಕ್ಷ ಟಿ.ಜಿ.ಅಧಿಶೇಷನ್‌ಗೌಡ, ನಿಕಟಪೂರ್ವ ಕಾರ್ಯದರ್ಶಿ ಜಿ.ಕೆ. ಸುದೀಂದ್ರ ಮತ್ತಿತರರು ವೇದಿಕೆಯಲ್ಲಿದ್ದರು. ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಅಧ್ಯಕ್ಷ ಕೆ.ಬಿ.ಲಿಂಗರಾಜು ಸೇರಿದಂತೆ ಮತ್ತಿತರರ ಗಣ್ಯರು ಹಾಜರಿದ್ದರು.

ಅನಧಿಕೃತ ವಿದ್ಯಾರ್ಥಿ ಸಂಘಟನೆಗಳ ನಿಷೇಧ ವಿರುದ್ಧ ಪ್ರತಿಭಟನೆ


ಮೈಸೂರು ವಿವಿ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು.

ಮೈಸೂರು, ಡಿ.23(ವಿವಿಹೆಚ್)– ಮೈಸೂರು ವಿಶ್ವವಿದ್ಯಾನಿಲಯ ಪೊಲೀಸ್ ಇಲಾಖೆಯೊಂದಿಗಿನ ಸಮನ್ವಯ ಸಭೆಯಲ್ಲಿ ಅನಧಿಕೃತ ವಿದ್ಯಾರ್ಥಿ ಸಂಘಟನೆಗಳು ಹಾಗೂ ವ್ಯಕ್ತಿಗಳನ್ನು ನಿಷೇಧಿಸಲು ಕೈಗೊಂಡ ತೀರ್ಮಾನದ ವಿರುದ್ಧ ವಿಶ್ವವಿದ್ಯಾನಿಲಯದ ಸಂಶೋಧಕರು ಹಾಗೂ ವಿದ್ಯಾರ್ಥಿಗಳು ಪ್ರತಿಭಟನೆ ಮೂಲಕ ಖಂಡಿಸಿದರು.

ಸಂವಿಧಾನವೇ ನೀಡಿರುವ ಪ್ರತಿಭಟನಾ ಹಕ್ಕು, ಸಂಘಟನೆ ಮಾಡುವ ಹಕ್ಕು, ಸಭೆ ಸೇರುವ ಹಕ್ಕಿನ ವಿರುದ್ಧ ನಿರ್ಧಾರ ಕೈಗೊಂಡಿರುವುದು ಮೈಸೂರು ವಿವಿಯ ಅಸಾಂವಿಧಾನಿಕ ನಡೆ. ಸಂವಿಧಾನಬದ್ಧ ಹಕ್ಕನ್ನು ನಿರ್ಬಂಧಿಸುವುದು ವಿಶ್ವವಿದ್ಯಾನಿಲಯದ ಉದ್ಧಟತನ ಹಾಗೂ ಖಂಡನಾರ್ಹ ನಡೆ ಎಂದು ಬೇಸರಿಸಿದರು.

ಶೈಕ್ಷಣಿಕ ವಾತಾವರಣವನ್ನು ಉನ್ನತೀಕರಿಸಲು ಶೈಕ್ಷಣಿಕ ಕಾರ್ಯಕ್ರಮಗಳನ್ನು ಹೆಚ್ಚು ಆಯೋಜನೆ ಮಾಡಬೇಕೇ ಹೊರತು ವಿದ್ಯಾರ್ಥಿಗಳನ್ನು ಸ್ವಾತಂತ್ರ್ಯ ಹತ್ತಿಕ್ಕುವುದಲ್ಲ ಎಂದು ಕಿಡಿಕಾರಿದರು.

ವಿದ್ಯಾರ್ಥಿಗಳನ್ನು ಭಯದ ವಾತಾವರಣದಲ್ಲಿರಿಸಲು ವಿದ್ಯಾರ್ಥಿ ಪ್ರತಿನಿಧಿಗಳನ್ನು ಕರೆಯದೆ ಪೊಲೀಸ್ ಇಲಾಖೆಯೊಂದಿಗೆ ಸಮನ್ವಯ ಮಾಡಿದ್ದಾರೆ. ಈಗಾಗಲೇ ಮಾನಸಗಂಗೋತ್ರಿಯಲ್ಲಿ ಪೊಲೀಸರ ಉಪಟಳ ಹೆಚ್ಚಾಗಿದೆ. ಈ ನಿರ್ಧಾರಗಳನ್ನು ಸಿಂಡಿಕೇಟ್ ಸದಸ್ಯರು ಬೆಂಬಲಿಸಬಾರದು. ಈ ನಿಯಮ ರದ್ದುಗೊಳಿಸದೇಹೋದಲ್ಲಿ ಹೋರಾಟ ಮಾಡುವುದಾಗಿ ಎಚ್ಚರಿಕೆ ನೀಡಿದರು.

ದಲಿತ ವಿದ್ಯಾರ್ಥಿ ಒಕ್ಕೂಟದ ಅಧ್ಯಕ್ಷ ಕೃಷ್ಣಮೂರ್ತಿ ಗಣಿಗನೂರು, ಸಂಶೋಧಕರಾದ ಪ್ರದೀಪ್ ಮುಮ್ಮಡಿ, ಕೊ. ಲಿಂಗರಾಜ, ಜಗದೀಶ್ ಮಾದೇವಯ್ಯ, ಕಾರ್ತಿಕ್ ತಗಡೂರು, ಸಂದೇಶ್ ಮಣಗಳ್ಳಿ, ಮಹೇಶ್ ಮರಳ್ಳಿ, ನಟರಾಜ್ ಬೊಮ್ಮಲಾಪುರ, ರವಿಕುಮಾರ್ ಮುಡಿಗುಂಡ, ನವೀನ್ ಅಳಗಂಚಿ, ರೋಜಾ, ಮೌನದೊರೆ, ಪ್ರೀತಮ್ ಹಂಚಿಪುರ, ನವೀನ್ ಕೋಳೂರು ಹಾಗೂ ಚೇತನ್, ನಾಗೇಂದ್ರ ಜೈ ಅರೇಪುರ, ಚಿರಾಗ್, ರವಿಸೂರ್ಯ, ಸ್ವಾತಿ, ಚಂದ್ರಿಕಾ ಉಪಸ್ಥಿತರಿದ್ದರು.

ಸಿಎಂ ಗುದ್ದುಗೆ ಗುದ್ದಾಟ: ಹೈಕಮಾಂಡ್ ನಿರ್ಧಾರಕ್ಕೆ ಸಿಎಂ–ಡಿಸಿಎಂ ಬದ್ಧ

ಎಐಸಿಸಿ ಪ್ರಧಾನ ಕಾರ್ಯದರ್ಶಿ ಸಚಿನ್ ಪೈಲಟ್



ಬೆಂಗಳೂರು, ಡಿ.23– ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಬ್ಬರೂ ಪಕ್ಷದ ಹೈಕಮಾಂಡ್ ನಿರ್ಧಾರಕ್ಕೆ ಬದ್ಧರಾಗಿರುತ್ತಾರೆ, ಏಕೆಂದರೆ 2028 ರಲ್ಲಿ ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತರುವುದು ಅತ್ಯಂತ ಮುಖ್ಯವಾಗಿದೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಸಚಿನ್ ಪೈಲಟ್ ಹೇಳಿದ್ದಾರೆ.

ಬೆಂಗಳೂರಿನ ಕೆಪಿಸಿಸಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿಯಾಗಿರಲಿ ಅಥವಾ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿರಲಿ ಪಕ್ಷದ ಹೈಕಮಾಂಡ್ ನಿರ್ಧಾರಕ್ಕೆ ಬದ್ಧರಾಗಿರುವುದಿಲ್ಲ ಎಂದು ಪಕ್ಷದ ಯಾವ ಸಹಾಯಕರು ಹೇಳಿದ್ದಾರೆ ತಿಳಿಸಿ, ಈ ನಿರ್ಧಾರ ರಾಜ್ಯದ ಪ್ರತಿಯೊಬ್ಬ ಕಾಂಗ್ರೆಸ್ ಕಾರ್ಯಕರ್ತರಿಗೂ ಸ್ವೀಕಾರಾರ್ಹ.

ನಾವು ನಮ್ಮ ಭರವಸೆಗಳನ್ನು ಈಡೇರಿಸುತ್ತೇವೆ ಮತ್ತು 2028 ರಲ್ಲಿ ಇನ್ನೂ ಹೆಚ್ಚಿನ ಬಹುಮತದೊಂದಿಗೆ ರಾಜ್ಯವನ್ನು ಮತ್ತೆ ಗೆಲ್ಲಲು ನಾವು ಕೆಲಸ ಮಾಡುತ್ತಿದ್ದೇವೆ ಎಂದರು.

ಡಿ.ಕೆ.ಶಿವಕುಮಾರ್ ಅವರು ಸಿಎಂ ಸಿದ್ದರಾಮಯ್ಯ ಅವರನ್ನು ತಮ್ಮ ಅಣ್ಣ ಎಂದು ಕರೆದಾಗ, ಸಿದ್ದರಾಮಯ್ಯ ಅವರು (ಶಿವಕುಮಾರ್) ನನ್ನ ಕಿರಿಯ ಸಹೋದರ ಎಂದಾಗ ವಿಷಯ ಇತ್ಯರ್ಥವಾಗುತ್ತದೆ ಎಂದರು. ಎಲ್ಲವನ್ನೂ ಕಾಂಗ್ರೆಸ್ ಹೈಕಮಾಂಡ್‌ಗೆ ಬಿಟ್ಟಾಗ, ಪಕ್ಷವು ಏನು ಮಾಡಬೇಕೋ ಅದನ್ನು ನಿರ್ಧರಿಸುತ್ತದೆ. ಕರ್ನಾಟಕ ಸೇರಿದಂತೆ ದೇಶಾದ್ಯಂತ ಕಾಂಗ್ರೆಸ್ ಅನ್ನು ಬಲಪಡಿಸುವುದು ನಮ್ಮ ಸಾಮೂಹಿಕ ಉದ್ದೇಶವಾಗಿದೆ ಎಂದರು.

ಕರ್ನಾಟಕ ಸರ್ಕಾರವು ಸಂಪೂರ್ಣ ಸಮಗ್ರತೆ ಮತ್ತು ಸಮರ್ಪಣೆಯೊಂದಿಗೆ ಕಾರ್ಯನಿರ್ವಹಿಸಿದೆ ಎಂದು ನಾನು ನಿಮಗೆ ಹೇಳುತ್ತೇನೆ. ಚುನಾವಣೆಗೆ ಮೊದಲು ನಾವು ಒಂದು ಪಕ್ಷವಾಗಿ ನೀಡಿದ ಎಲ್ಲಾ ಭರವಸೆಗಳನ್ನು ನಾವು ಪೂರೈಸುತ್ತಿದ್ದೇವೆ.

ಕ್ಯಾಲೆಂಡರ್ ಬಿಡುಗಡೆ


ಅಖಿಲ ಕರ್ನಾಟಕ ಡಾ.ಮಲ್ಲಿಕಾರ್ಜುನ ಖರ್ಗೆ ಅಭಿಮಾನಿಗಳ ಸಂಘದ ನೂತನ ಕ್ಯಾಲೆಂಡರ್ ಅನ್ನು ಎಐಸಿಸಿ ಅಧ್ಯಕ್ಷರೂ ಆದ ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ಬೆಂಗಳೂರು ನಿವಾಸದಲ್ಲಿ ಬಿಡುಗಡೆ ಮಾಡಿದರು. ಈ ವೇಳೆ ಸಂಘದ ರಾಜ್ಯಾಧ್ಯಕ್ಷ ಸಿ.ನರೇಂದ್ರ ಮಾಜಿ ಶಾಸಕ ಜಿ.ಎನ್.ನಂಜುಂಡ ಸ್ವಾಮಿ, ಕಾಂಗ್ರೆಸ್ ಎಸ್‌ಟಿ ವಿಭಾಗದ ರಾಜ್ಯಾಧ್ಯಕ್ಷ ವಿಜಯ್ ನಾಯಕ್, ಎಸ್ಸಿ ವಿಭಾಗದ ಕಾರ್ಯಕಾರಿಣಿ ಸದಸ್ಯ ಸಂತೋಷ್ ಕುಮಾರ್, ರಾಜ್ಯ ಕಾರ್ಯದರ್ಶಿ ಸುರೇಶ ಹುಲ್ಯಾಳು, ಯುವ ಕಾಂಗ್ರೆಸ್ ಮುಖಂಡ ಸಂತೋಷ ಕಮರವಳ್ಳಿ, ಜವರನಾಯಕ, ಶಿವು ಚನ್ನಪಟ್ಟಣ, ಕಿರಣ್ ನಾಗಮಂಗಲ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರಲ್ಲಿ ಮಹಿಳೆಯರಿಗಾಗಿಯೇ ನಿರ್ಮಿಸಿದ್ದ ಪಿಂಕ್ ಶೌಚಾಲಯ ಬಂದ್

ವಿದ್ಯುತ್, ನೀರಿನ ಬಿಲ್, ಸಿಬ್ಬಂದಿ ವೇತನವೂ ಬಾಕಿ



ಮೈಸೂರಿನ ದಿವಾನ್ಸ್ ರಸ್ತೆಯಲ್ಲಿರುವ ಪಿಂಕ್ ಶೌಚಾಲಯಕ್ಕೆ ಬೀಗ ಬಿದ್ದಿರುವುದು.

ಮೈಸೂರು, ಡಿ.23– ಮೈಸೂರಿನಲ್ಲಿ ಮಹಿಳೆಯರಿಗಾಗಿ ನಿರ್ಮಿಸಿರುವ 'ಪಿಂಕ್ ಶೌಚಾಲಯ'ಕ್ಕೆ ಬೀಗ ಬಿದ್ದಿದೆ.

ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಡಿ.ದೇವರಾಜ ಅರಸು ರಸ್ತೆ ಬಳಿ ದಿವಾನ್ಸ್ ರಸ್ತೆಯಲ್ಲಿ ಸುಮಾರು 37 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿರುವ ಈ 'ಪಿಂಕ್ ಶೌಚಾಲಯ'ವನ್ನು ಬಂದ್ ಮಾಡಿರುವುದರಿಂದ ಮಹಿಳೆಯರಿಗೆ ತುಂಬಾ ತೊಂದರೆಯುಂಟಾಗಿದೆ. ಇದಕ್ಕೆ ಗುತ್ತಿಗೆದಾರನ ಅಸಮರ್ಪಕ ನಿರ್ವಹಣೆಯೇ ಕಾರಣ ಎನ್ನಲಾಗಿದೆ.

ಪಾಲಿಕೆಯು 14ನೇ ಹಣಕಾಸು ಯೋಜನೆ ಅನುದಾನದಲ್ಲಿ 2023ರಲ್ಲಿ ನಿರ್ಮಿಸಿರುವ ಶೌಚಾಲಯ ನಿರ್ವಹಣೆಗೆ ಗುತ್ತಿಗೆ ನೀಡಲಾಗಿದೆ. ಎರಡು ವರ್ಷ ಸರಿಯಾಗಿ ನಿರ್ವಹಿಸಿಕೊಂಡು ಬಂದಿದ್ದು, ಕೆಲ ತಿಂಗಳಿಂದ ವಿದ್ಯುತ್ ಹಾಗೂ ನೀರಿನ ಶುಲ್ಕ ಪಾವತಿಸಿಲ್ಲ ಅಲ್ಲದೆ, ಶೌಚಾಲಯ ನಿರ್ವಹಣೆಗೆ ನಿಯೋಜಿಸಿದ್ದ ಮಹಿಳೆಗೂ ವೇತನ ನೀಡದ ಕಾರಣ ಅವರೂ ಕೆಲಸಕ್ಕೆ ಬರುತ್ತಿಲ್ಲ. ಹೆಚ್ಚು ಬಾಕಿ ಇರುವುದರಿಂದ ವಿದ್ಯುತ್ ಸಂಪರ್ಕವೂ ಕಡಿತಗೊಂಡಿದೆ. ಪರಿಣಾಮ 15 ದಿನಗಳಿಂದ ಬಂದ್ ಮಾಡಿರುವುದಾಗಿ ತಿಳಿದುಬಂದಿದೆ.

ಮಹಿಳಾ ಸ್ನೇಹಿಯಾಗಿದ್ದ ಈ ಪಿಂಕ್ ಶೌಚಾಲಯ ಮುಚ್ಚಿರುವುದರಿಂದ ತುಂಬಾ ತೊಂದರೆ ಉಂಟಾಗಿದೆ. ದೇವರಾಜ ಅರಸು ರಸ್ತೆ ಸೇರಿದಂತೆ ಸುತ್ತಮುತ್ತಲ ರಸ್ತೆಗಳ ಅಂಗಡಿಗಳ ಮಹಿಳಾ ಸಿಬ್ಬಂದಿ, ಮಹಿಳಾ ಗ್ರಾಹಕರು ಸೇರಿದಂತೆ ಈ ಭಾಗದಲ್ಲಿ ಸಂಚರಿಸುವ ಮಹಿಳೆಯರು ಈ ಶೌಚಾಲಯವನ್ನೇ ಅವಲಂಬಿಸಿದ್ದರು. ಆದರೆ ಬಂದ್ ಆಗಿರುವುದರಿಂದ ಶೌಚಾಲಯಕ್ಕೆ ಪರಿತಪಿಸುವಂತಾಗಿದೆ. ಇದಕ್ಕಾಗಿ ನಗರ ಬಸ್ ನಿಲ್ದಾಣಕ್ಕೆ ಹೋಗಬೇಕಾದ ದುಸ್ಥಿತಿ ನಿರ್ಮಾಣವಾಗಿದೆ.

ಎರಡೂವರೆ ವರ್ಷಗಳ ಹಿಂದೆ ಅದ್ಧೂರಿಯಾಗಿ ಉದ್ಘಾಟನೆಗೊಂಡಿದ್ದ ಪಿಂಕ್ ಶೌಚಾಲಯ, ಹದಿನೈದು ದಿನಗಳಿಂದ ಬಂದ್ ಆಗಿರುವುದೇ ಅತ್ಯಂತ ವಿಷಾದನೀಯ. ಮಹಿಳೆಯರಿಗೆ ಕನಿಷ್ಟ ಸೌಕರ್ಯವನ್ನೂ ಕಲ್ಪಿಸಲಾಗದಷ್ಟು ವ್ಯವಸ್ಥೆ ಹದಗೆಟ್ಟಿದೆ ಎಂಬುದಕ್ಕೆ ಇದೊಂದು ಸಾಕ್ಷಿ. ವಿದ್ಯುತ್, ನೀರಿನ ಶುಲ್ಕ ಪಾವತಿಸದ ಕಾರಣಕ್ಕೆ ಬಂದ್ ಮಾಡಿದ್ದಾರೆ ಎಂದಾದರೆ ನಿಜಕ್ಕೂ ನಾಚಿಕೆಗೇಡು ಎಂದು ಮಹಿಳೆಯರು ಹಿಡಿಶಾಪ ಹಾಕುತ್ತಿದ್ದಾರೆ.

ಪುರುಷರಿಗೂ ಶೌಚಾಲಯ ಬೇಕು: ಅರಸು ರಸ್ತೆ ಜಂಕ್ಷನ್ ಬಳಿ ದಿವಾನ್ಸ್ ರಸ್ತೆಯಲ್ಲೇ ನಿರ್ಮಿಸಿದ್ದ ಇ–ಟಾಯ್ಲೆಟ್ ತೆರವುಗೊಳಿಸಿದ ನಂತರ ಈ ಭಾಗದಲ್ಲಿ ಪುರುಷರ ಶೌಚಾಲಯವೇ ಇಲ್ಲವಾಗಿದೆ. ಪರಿಣಾಮ ರಸ್ತೆ ಬದಿ, ಕಾಂಪೌಂಡ್‌ಗಳು ಬಯಲು ಶೌಚವಾಗಿ ಬದಲಾಗಿವೆ. ನಿರ್ಮಾಣ ಹಂತದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಭವನದ ಕಾಂಪೌಂಡ್ ಕೂಡ ಗುರಿಯಾಗಿದೆ. ಈ ಭಾಗದಲ್ಲಿ ಅತ್ಯಂತ ಅಗತ್ಯವಿರುವ ಪುರುಷ ಶೌಚಾಲಯ ನಿರ್ಮಾಣಕ್ಕೆ ಶಾಸಕರು ಹಾಗೂ ನಗರ ಪಾಲಿಕೆ ಅಧಿಕಾರಿಗಳು ಕೂಡಲೇ ಕ್ರಮ ವಹಿಸಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಆನ್‌ಲೈನ್ ಟ್ರೇಡಿಂಗ್ ಮೂಲಕ ಗೆಜೆಟೆಡ್ ಅಧಿಕಾರಿಗೆ 30 ಲಕ್ಷ ವಂಚನೆ

ಮೈಸೂರು, ಡಿ.23– ಮೈಸೂರಿನ ಗೆಜೆಟೆಡ್ ಅಧಿಕಾರಿಯೊಬ್ಬರು ಆನ್‌ಲೈನ್ ಟ್ರೇಡಿಂಗ್‌ನಲ್ಲಿ ಬರೋಬ್ಬರಿ 30 ಲಕ್ಷ ಹಣ ಕಳೆದುಕೊಂಡಿದ್ದು, ಈ ಸಂಬಂಧ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಡಿಪಿಯಲ್ಲಿ ಪರಿಚಿತರೊಬ್ಬರ ಫೋಟೋ ಇದ್ದ ವಾಟ್ಸಾಪ್ ನಂಬರ್‌ನಿಂದ ಬಂದಿದ್ದ ಆನ್‌ಲೈನ್ ಟ್ರೇಡಿಂಗ್ ಲಿಂಕ್ ಕ್ಲಿಕ್ ಮಾಡುವ ಮೂಲಕ ಮೋಸದ ಬಲೆಗೆ ಬಿದ್ದಿದ್ದಾರೆ. ಪರಿಚಿತರೇ ಕಳುಹಿಸಿರಬಹುದೆಂದು ಭಾವಿಸಿ, ಲಿಂಕ್ ಮೂಲಕ ಟ್ರೇಡಿಂಗ್ ಅಕೌಂಟ್ ತೆರೆದು, ಆರಂಭದಲ್ಲಿ 20 ಸಾವಿರ ಹೂಡಿಕೆ ಮಾಡಿದ್ದಾರೆ. ಎರಡೇ ದಿನದಲ್ಲಿ ತಾವು ಹೂಡಿಕೆ ಮಾಡಿದ್ದ ಹಣದ ಜೊತೆಗೆ 3,375 ರೂ. ಲಾಭ ವಾಪಸ್ ಬಂದಿದೆ.

ಇದರಿಂದ ಹೆಚ್ಚು ಹಣ ಹೂಡಿದರೆ ಅಧಿಕ ಲಾಭಗಳಿಸಬಹುದು ಎಂಬ ಆಸೆಯಿಂದ ಹಂತ ಹಂತವಾಗಿ 30 ಲಕ್ಷ ಹೂಡಿಕೆ ಮಾಡಿದ್ದಾರೆ. ಆದರೆ ಲಾಭಾಂಶ ಹಾಗೂ ತಾವು ಹೂಡಿಕೆ ಮಾಡಿದ ಹಣವನ್ನು ವಿತ್‌ಡ್ರಾ ಮಾಡಲು ಸಾಧ್ಯವಾಗದಿದ್ದಾಗ ತಾವು ಮೋಸ ಹೋಗಿರುವುದು ಅರಿವಾಗಿ, ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ರೌಡಿಶೀಟರ್ ಬಿಕ್ಲು ಶಿವ ಕೊಲೆ ಪ್ರಕರಣ

ಮತ್ತೆ ಶಾಸಕ ಭೈರತಿ ಬಸವರಾಜ್ ನಿರೀಕ್ಷಣಾ ಜಾಮೀನು ಅರ್ಜಿ ವಜಾ



ಬೆಂಗಳೂರು, ಡಿ.23– ರೌಡಿ ಶೀಟರ್ ಬಿಕ್ಲು ಶಿವ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕೆಆರ್ ಪುರಂ ಬಿಜೆಪಿ ಶಾಸಕ ಭೈರತಿ ಬಸವರಾಜ್ ಜಾಮೀನು ಅರ್ಜಿಯನ್ನು ಮಂಗಳವಾರ ಕೋರ್ಟ್ ವಜಾಗೊಳಿಸಿದೆ.

ಪ್ರಸ್ತುತ ತಲೆ ಮರೆಸಿಕೊಂಡಿರುವ ಭೈರತಿ ಬಸವರಾಜು ಸಲ್ಲಿಸಿದ್ದ ನಿರೀಕ್ಷಣಾ ಜಾಮೀನು ಅರ್ಜಿಯ ವಿಚಾರಣೆ ನಡೆಸಿದ ಜನಪ್ರತಿನಿಧಿಗಳ ವಿಶೇಷ ಕೋರ್ಟ್ ನ್ಯಾಯಾಧೀಶರಾದ ಸಂತೋಷ್ ಗಜಾನನ್ ಭಟ್ ಅವರು ಜಾಮೀನು ತಿರಸ್ಕರಿಸಿ ಆದೇಶ ಹೊರಡಿಸಿದ್ದಾರೆ. ಹೀಗಾಗಿ ಭೈರತಿ ಬಸವರಾಜ್ ಅವರನ್ನು ಪೊಲೀಸರು ಯಾವುದೇ ಕ್ಷಣದಲ್ಲೂ ಬಂಧಿಸಬಹುದು.

ಭೈರತಿ ಬಸವರಾಜ್ ಪರ ವಕೀಲ ಸಂದೇಶ್ ಚೌಟ ವಾದ ಮಂಡಿಸಿದರೆ, ಸಿಐಡಿ ಪರ ಎಸ್‌ಪಿಪಿ ಅಶೋಕ್ ನಾಯ್ಕ್ ಅವರು ವಾದ ಮಂಡಿಸಿದರು.

ಈಗಾಗಲೇ ಕೋರ್ಟ್‌ಗೆ ಚಾರ್ಜ್ ಶೀಟ್ ಪ್ರತಿ ಸಲ್ಲಿಕೆ ಮಾಡಿದ್ದು, ಚಾರ್ಜ್ ಶೀಟ್‌ನ ಪೇಜ್ ನಂ.298ರಲ್ಲಿ ಟವರ್ ಲೊಕೇಷನ್ ನಮೂದಿಸಿದೆ. ಎ1 ಮತ್ತು ಎ 5 ನಡುವೆ ದೂರವಾಣಿ ಮಾತುಕತೆ ಇರುವ ದಾಖಲೆಯಿದೆ. ಬಂಧಿಸಿ ವಿಚಾರಣೆಗೆ ಒಳಪಡಿಸಿದ ನಂತರ ಹೆಚ್ಚಿನ ಮಾಹಿತಿ ತಿಳಿಯಲಿದೆ. ಹೀಗಾಗಿ ಜಾಮೀನು ನೀಡದಂತೆ ಎಸ್‌ಎಸ್‌ಪಿ ಅಶೋಕ್ ನಾಯ್ಕ್ ಅವರು ವಾದಿಸಿದರು.

ಇದಕ್ಕೆ ಪ್ರತಿಯಾಗಿ ಭೈರತಿ ಬಸವರಾಜ್ ಪರವಾಗಿ ವಾದ ಮಂಡಿಸಿದ ಹಿರಿಯ ವಕೀಲ ಸಂದೇಶ್ ಚೌಟ ಅವರು, ತಮ್ಮ ಕಕ್ಷಿದಾರರು ಕೊಲೆಯಲ್ಲಿ ಭಾಗಿಯಾಗಿರುವುದಕ್ಕೆ ಇದುವರೆಗೂ ಯಾವುದೇ ಸಾಕ್ಷ್ಯಗಳು ಲಭ್ಯವಿಲ್ಲ. 5 ತಿಂಗಳಾದರೂ ಇವರಿಗೆ ಯಾವುದೇ ಸಾಕ್ಷ್ಯ ಸಿಕ್ಕಿಲ್ಲ. ಎ1 ಜಗ್ಗ, ಎ 5 ಭೈರತಿ ಬಸವರಾಜ್ ನಡುವಿನ ಸಂಪರ್ಕ ಸಾಬೀತಿಗೆ ಯತ್ನಿಸುತ್ತಿದ್ದಾರೆ ಎಂದರು.

ಪ್ರಕರಣದ ಎಫ್‌ಐಆರ್‌ನಲ್ಲಿ ಬಿಜೆಪಿ ಶಾಸಕ ಭೈರತಿ ಬಸವರಾಜ್ ಅವರನ್ನು ಐದನೇ ಆರೋಪಿಯನ್ನಾಗಿ ಹೆಸರಿಸಲಾಗಿದ್ದು, ಗ್ಯಾಂಗ್‌ಸ್ಟರ್ ಜಗದೀಶ್ ಪದ್ಮನಾಭ ಅಲಿಯಾಸ್ ಜಗ(45)ನನ್ನು ಪ್ರಮುಖ ಆರೋಪಿಯನ್ನಾಗಿ ಮಾಡಲಾಗಿದೆ.

ಜ.11ಕ್ಕೆ ಫಿಟ್ ಮೈಸೂರು ವಾಕಥಾನ್


ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ.ಲೋಕನಾಥ್ ಫಿಟ್ ಮೈಸೂರು ವಾಕಥಾನ್ ಕಾರ್ಯಕ್ರಮದ ಪೋಸ್ಟರ್‌ಗಳನ್ನು ಬಿಡುಗಡೆ ಮಾಡುವುದರ ಜೊತೆಗೆ ಕ್ಯೂ–ಆರ್ ಕೋಡ್ ಆಧಾರಿತ ನೋಂದಣಿ ಪ್ರಕ್ರಿಯೆಗೂ ಚಾಲನೆ ನೀಡಿದರು.

ಮೈಸೂರು, ಡಿ.23(ವಿವಿಹೆಚ್)– ಸಾಂಸ್ಕೃತಿಕ ನಗರಿ ಮೈಸೂರನ್ನು ಆರೋಗ್ಯಕರ, ಸ್ವಚ್ಛ, ಹಸಿರು ಹಾಗೂ ಸುರಕ್ಷಿತ ನಗರವನ್ನಾಗಿ ರೂಪಿಸುವ ನಿಟ್ಟಿನಲ್ಲಿ ಜ.11, 2026ರಂದು ಫಿಟ್ ಮೈಸೂರು ವಾಕಥಾನ್ ಆಯೋಜಿಸಲಾಗಿದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಎನ್.ಕೆ.ಲೋಕನಾಥ್ ತಿಳಿಸಿದರು.

ನಗರದ ಮೈಸೂರು ವಿವಿ ಕಾರ್ಯಸೌಧ ಕ್ರಾಫರ್ಡ್ ಭವನದ ಸಭಾಂಗಣದಲ್ಲಿ ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ನಗರದಲ್ಲಿ ಆರೋಗ್ಯಕರ ವಾತಾವರಣ ನಿರ್ಮಿಸುವ ನಿಟ್ಟಿನಲ್ಲಿ ಜೆಎಸ್‌ಎಸ್ ಸಮೂಹ ಸಂಸ್ಥೆಗಳು, ಮೈಸೂರು ಜಿಮ್ ಅಸೋಸಿಯೇಷನ್ ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಸಹಯೋಗದೊಂದಿಗೆ ಫಿಟ್ ಮೈಸೂರು ವಾಕಥಾನ್ ಆಯೋಜಿಸಲಾಗಿದೆ. 5 ಕಿ.ಮೀ ವಾಕಥಾನ್ ಕಾರ್ಯಕ್ರಮ 2026ರ ಜ.11ರಂದು ಬೆಳಗ್ಗೆ 6ರಿಂದ 8 ಗಂಟೆವರೆಗೆ ನಡೆಯಲಿದೆ ಎಂದು ಮಾಹಿತಿ ನೀಡಿದರು.

ಮಾನಸಗಂಗೋತ್ರಿಯ ಬಯಲು ರಂಗಮಂದಿರದಿಂದ ಆರಂಭವಾಗುವ ವಾಕಥಾನ್‌ನಲ್ಲಿ ಮೈಸೂರು ವಿವಿ, ನಗರದ ಪ್ರಮುಖ ಕಾಲೇಜುಗಳ ವಿದ್ಯಾರ್ಥಿಗಳು, ಸಾರ್ವಜನಿಕರು ಸೇರಿದಂತೆ ಅಂದಾಜು 10 ಸಾವಿರಕ್ಕೂ ಹೆಚ್ಚು ಜನರು ಭಾಗವಹಿಸುವ ನಿರೀಕ್ಷೆ ಇದೆ. ಅದಕ್ಕಾಗಿ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ ಎಂದು ತಿಳಿಸಿದರು.

> ಫಿಟ್ ಮೈಸೂರು ವಾಕಥಾನ್ ಕಾರ್ಯಕ್ರಮವನ್ನು ದೊಡ್ಡಮಟ್ಟದಲ್ಲಿ ನಡೆಸುವ ಉದ್ದೇಶದಿಂದ ಜ.11ರಂದು ನಡೆಯುವ ವಾಕಥಾನ್‌ನಲ್ಲಿ ಮೈಸೂರು ಭಾಗದ ಎಲ್ಲಾ ಜನಪ್ರತಿನಿಧಿಗಳು, ಜಿಲ್ಲಾಡಳಿತದ ಪ್ರಮುಖ ಅಧಿಕಾರಿಗಳೊಂದಿಗೆ ಮೈಸೂರಿನವರೇ ಆಗಿರುವ ಉಷಾ ಹೆಗ್ಡೆ, ಮಾಜಿ ಕ್ರಿಕೆಟಿಗ ಜಾವಗಲ್ ಶ್ರೀನಾಥ್ ಭಾಗವಹಿಸಲಿದ್ದಾರೆ.
> -**ಶ್ರೀಹರಿ,** ಮುಖ್ಯಸ್ಥರು, ಜೆಎಸ್‌ಎಸ್ ಸಮೂಹ ಸಂಸ್ಥೆಗಳು.

ಮೈಸೂರು ವಿವಿ ಕುಲಸಚಿವೆ (ಆಡಳಿತ) ಮಾತನಾಡಿ, ಮೈಸೂರಿನಲ್ಲಿ ಈಗಾಗಲೇ ನಡೆಸಲಾದ ಯೋಗ ದಿನಾಚರಣೆ ಅತ್ಯಂತ ಯಶಸ್ವಿಯಾಗಿ ನಡೆಸಲಾಗಿದೆ. ಅದೇ ರೀತಿಯಲ್ಲಿ ಫಿಟ್ ಮೈಸೂರು ವಾಕಥಾನ್ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕಿದ್ದು, ಇದಕ್ಕಾಗಿ ಮೈಸೂರು ವಿವಿ ಸಂಪೂರ್ಣ ಸಹಕಾರವಿದೆ. ಈ ಕಾರ್ಯಕ್ರಮಕ್ಕೆ ವಿದ್ಯಾರ್ಥಿಗಳನ್ನು ಒಗ್ಗೂಡಿಸುವ ಜತೆಗೆ ಎಲ್ಲರೂ ಕೈಜೋಡಿಸಬೇಕಿದೆ ಎಂದು ಸಲಹೆ ನೀಡಿದರು.

ಜಿಮ್ ಅಸೋಸಿಯೇಷನ್‌ನ ಹರ್ಷ, ಚಿರಾಗ್ ಆರ್ಟ್ಸ್‌ನ ವಿವೇಕ್, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಧರ್ಮಾಪುರ ನಾರಾಯಣ್, ಜೆಎಸ್‌ಎಸ್ ಸಮೂಹ ಸಂಸ್ಥೆಗಳ ಶ್ರೀರಾಮ್, ಜೆಎಸ್‌ಎಸ್ ಮಾಧ್ಯಮದ ಮುಖ್ಯಸ್ಥೆ ರೂಪಶ್ರೀ, ಸರಳ, ಸಿರಿ ಬಾಲು ಉಪಸ್ಥಿತರಿದ್ದರು.

ಮೈಸೂರಿನ ಕೊಡಗು ಮಾಡೆಲ್ ಶಾಲೆಯ ವಾರ್ಷಿಕೋತ್ಸವ





ಮೈಸೂರಿನ ಕೊಡಗು ಮಾಡೆಲ್ ಶಾಲೆ ವಾರ್ಷಿಕೋತ್ಸವಕ್ಕೆ ಆಗಮಿಸಿದ್ದ ಗಣ್ಯರು. ವಿದ್ಯಾರ್ಥಿಗಳು ಮನೋಜ್ಞವಾಗಿ ಪ್ರಸ್ತುತಪಡಿಸಿದ ನೃತ್ಯರೂಪಕವನ್ನು ಬಲಚಿತ್ರದಲ್ಲಿ ಕಾಣಬಹುದು.

ಮೈಸೂರು, ಡಿ.23– ಮೈಸೂರಿನ ವಿದ್ಯಾಶಂಕರನಗರದಲ್ಲಿರುವ ಕೊಡಗು ಮಾಡೆಲ್ ಶಾಲೆಯ 17ನೇ ವಾರ್ಷಿಕೋತ್ಸವ ಸಮಾರಂಭ ಅದ್ಧೂರಿಯಾಗಿ ನೆರವೇರಿತು.

ಶಾಲಾ ಆವರಣದಲ್ಲಿ ನಡೆದ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಮಾತನಾಡಿದ ಮೈಸೂರು ತಾಲೂಕು (ಗ್ರಾಮೀಣ) ಬಿಆರ್‌ಸಿ ಸಂಯೋಜಕಿ ಶ್ರೀಮತಿ ಗೀತಾ, ಮಕ್ಕಳ ಉಜ್ವಲ ಭವಿಷ್ಯ ನಿರ್ಮಾಣದಲ್ಲಿ ಶಿಕ್ಷಕರು ಹಾಗೂ ಪೋಷಕರ ಪಾತ್ರದ ಮಹತ್ವವನ್ನು ತಿಳಿಸಿದರು.

ಗೌರವ ಅತಿಥಿ, ಶಿಷ್ಯ ಪ್ಲೇ ಹೋಮ್‌ನ ಪ್ರಾಂಶುಪಾಲೆ ಶ್ರೀಮತಿ ನೈನಾ ಅಚ್ಚಪ್ಪ, ಶಾಲೆಯ ಬೆಳವಣಿಗೆ ಮತ್ತು ಸಾಧನೆಗಳ ಬಗ್ಗೆ ಅಭಿಪ್ರಾಯ ಹಂಚಿಕೊಂಡರು. ಕೊಡಗು ಮಾಡೆಲ್ ಶಾಲೆಯ ಅಧ್ಯಕ್ಷ ಕೆ.ಎಂ.ಬೆಳ್ಳಿಯಪ್ಪ, ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಉನ್ನತ ಶ್ರೇಣಿ ಪಡೆಯುವ ಸಂಕಲ್ಪದೊಂದಿಗೆ ಅಧ್ಯಯನ ನಡೆಸುವಂತೆ ಕಿವಿಮಾತು ಹೇಳಿದರು. ಬಿಆರ್‌ಸಿ ಸುನೀಲ್ ಕುಮಾರ್, ಶಿಕ್ಷಣದೊಂದಿಗೆ ಮಕ್ಕಳ ಪ್ರತಿಭೆಯನ್ನೂ ಗುರುತಿಸಿ, ಪ್ರೋತ್ಸಾಹಿಸುವುದು ಮುಖ್ಯ ಎಂದರು.

ಸಮಾರಂಭದಲ್ಲಿ 2024–25ನೇ ಶೈಕ್ಷಣಿಕ ವರ್ಷದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಶಾಲಾ ಟಾಪರ್ ಸೇರಿದಂತೆ ಉನ್ನತ ಶ್ರೇಣಿ ಪಡೆದವರು ಹಾಗೂ ಶಾಲೆಯಲ್ಲಿ 10 ವರ್ಷಗಳ ಸೇವೆ ಪೂರೈಸಿದ ಸಿಬ್ಬಂದಿಯನ್ನು ಅಭಿನಂದಿಸಲಾಯಿತು.

ನಂತರ ಶಾಲೆಯ ವಿದ್ಯಾರ್ಥಿಗಳು ಭಾರತದ ವೈವಿಧ್ಯತೆ, ಸಾಂಸ್ಕೃತಿಕ ಪರಂಪರೆಯನ್ನು ಪ್ರತಿಬಿಂಬಿಸುವ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮವನ್ನು ಪ್ರಸ್ತುತಪಡಿಸಿದರು. ಪೋಷಕರು, ಸ್ಥಳೀಯರು, ಶಾಲೆಯ ಶೈಕ್ಷಣಿಕ ಮಂಡಳಿ, ನಿರ್ವಹಣಾ ಮಂಡಳಿ ಸದಸ್ಯರು, ಶ್ರೀ ಕಾವೇರಿ ಕೊಡವ ಸಂಘ ಮೈಸೂರು ಈಸ್ಟ್‌ನ ಹಳೆಯ ಆಡಳಿತ ಮಂಡಳಿ ಸದಸ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ನಕ್ಕರೆ ಅದೇ ಸ್ವರ್ಗ

ಹೆಂಡತಿ : ಏನ್ರೀ ಇಷ್ಟು ಬೇಗ ಆಫೀಸ್‌ನಿಂದ ಬಂದಿದ್ದೀರಾ?
ಗಂಡ : ಹೌದು ಕಣೇ! ನಮ್ಮ ಬಾಸ್ ನನಗೆ ನರಕಕ್ಕೆ ತೊಲಗು ಅಂದ್ರು, ಅದಕ್ಕೆ ಬಂದೆ!

ಮೈಸೂರು ಮಿತ್ರ

ಬುಧವಾರ, 24 ಡಿಸೆಂಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ..........

ತಿದ್ದದೆ ತೀಡದೆ ಅಂದ ಕಾಣದು ಗೊಂಬೆ.
ಬಿತ್ತದೆ ಕೆತ್ತದೆ ಬೆಳೆಯ ಬೆಳೆಯದು ಭೂಮಿ.
ನಿಂದನೆಗೆ ನೋವಿಗೆ ಅಳುಕಿದರೆ ರೂಪಗೊಳ್ಳದು ಬದುಕು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ತಾ ಕಾಣದ ದೇವರು ಪೂಜಾರಿಗೆ ವರ ಕೊಟ್ಟೀತೇ?

ನಿಮ್ಮ ಪತ್ರಗಳು

ಪೋಕ್ಸೋ ಕಾಯ್ದೆ ದುರ್ಬಳಕೆಯಾಗದಿರಲಿ

ಮಾನ್ಯರೆ,

ಇತ್ತೀಚಿನ ವರ್ಷಗಳಲ್ಲಿ ತೀವ್ರ ರೀತಿಯ ಚರ್ಚೆಗೆ ಗುರಿಯಾಗುತ್ತಿರುವ ಪೋಕ್ಸೋ ಕಾಯ್ದೆಯ ದುರುಪಯೋಗದ ಬಗ್ಗೆ ರಾಜ್ಯ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾದ ಜಿ.ಬಸವರಾಜು ಅವರು ಬೆಳಕು ಚೆಲ್ಲಿರುವ ಬಗ್ಗೆ ಮಾಧ್ಯಮಗಳಲ್ಲಿ ವರದಿಯಾಗಿದೆ. ಹಿರಿಯ ವಕೀಲ ಕೆ.ಬಿ.ಸುರೇಶ್ ಸಾರಥ್ಯದಲ್ಲಿ ಮೈಸೂರು ನಗರದಿಂದ ಪ್ರಕಟವಾಗುತ್ತಿರುವ 'ಲಾ ಫಾರ್ ಆಲ್' ಮಾಸ ಪತ್ರಿಕೆಯ ಡಿಸೆಂಬರ್ ಸಂಚಿಕೆ ಹಾಗೂ ನೂತನ ವರ್ಷ 2026ರ ಕ್ಯಾಲೆಂಡರ್ ಅನ್ನು ಲೋಕಾರ್ಪಣೆ ಮಾಡಿ ಮಾತನಾಡಿರುವ ಗೌರವಾನ್ವಿತ ನ್ಯಾಯಾಧೀಶರು, ಅಪ್ರಾಪ್ತ ವಯಸ್ಕ ಮಕ್ಕಳ ರಕ್ಷಣೆಗಾಗಿ ಜಾರಿಗೆ ತಂದಿರುವ ಪೋಕ್ಸೋ ಕಾಯಿದೆ ಅತ್ಯಂತ ಕ್ರೂರವಾಗಿದ್ದು, ಅನೇಕ ವೇಳೆ ಈ ಕಾಯಿದೆ ದುರ್ಬಳಕೆಯಾಗುತ್ತಿದೆ ಎಂದು ಹೇಳಿದ್ದಾರೆ.

ಈ ಕಾಯ್ದೆ ಅಡಿ ವಿಧಿಸಬಹುದಾದ ಗರಿಷ್ಠ ಶಿಕ್ಷೆಯ ಪ್ರಮಾಣ 20 ವರ್ಷಗಳಾಗಿದ್ದು, ಒಮ್ಮೆ ಈ ಕಾಯ್ದೆಯ ಅಡಿಯಲ್ಲಿ ಶಿಕ್ಷೆಗೆ ಒಳಗಾದರೆ, ಅಂತಹ ಅಪ್ರಾಪ್ತ ವಯಸ್ಸಿನ ಮಕ್ಕಳ ಭವಿಷ್ಯ ಮಾರಕವಾಗುತ್ತದೆ ಎಂಬ ಎಚ್ಚರಿಕೆ ನೀಡಿ, ಈ ಬಗ್ಗೆ ಅಪ್ರಾಪ್ತ ವಯಸ್ಸಿನ ಮಕ್ಕಳು ಜಾಗೃತರಾಗಿರಬೇಕೆಂದು ಕರೆ ನೀಡಿದ್ದಾರೆ.

ಕಳೆದ ನಾಲ್ಕೈದು ವರ್ಷಗಳ ಅಂತರದಲ್ಲಿ ಈ ಕಾಯ್ದೆಯ ಅಡಿಯಲ್ಲಿ ಮಠ ಮಾನ್ಯರು, ಸಮಾಜದ ಗಣ್ಯ ವ್ಯಕ್ತಿಗಳು, ಸಾರ್ವಜನಿಕ ಜೀವನದಲ್ಲಿರುವ ಹಾಗೂ ಅನೇಕ ಖ್ಯಾತನಾಮರು ಬಂಧನಕ್ಕೆ ಒಳಗಾಗಿರುವುದನ್ನು ಇಲ್ಲಿ ಸ್ಮರಿಸಬಹುದಾಗಿದೆ. ರಾಜ್ಯದ ಓರ್ವ ಮಾಜಿ ಮುಖ್ಯಮಂತ್ರಿ ಸಹ ಈ ಕಾಯ್ದೆಯಡಿಯಲ್ಲಿ ಆರೋಪ ಎದುರಿಸುತ್ತಿದ್ದಾರೆ. ಸಮಾಜದಲ್ಲಿ ಅಪ್ರಾಪ್ತ ವಯಸ್ಕ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ಹಾಗೂ ಕಿರುಕುಳ ಹೆಚ್ಚಾಗಿದ್ದರಿಂದ ರಾಜ್ಯದಲ್ಲಿ ಈ ಕಾಯ್ದೆಯನ್ನು 2012ರಲ್ಲಿ ಜಾರಿಗೆ ತರಲಾಗಿದೆ. ಬೇರೆ ಅನೇಕ ರಾಜ್ಯಗಳಲ್ಲಿ ಕೂಡ ಇಂತಹ ಕಾಯ್ದೆ ಜಾರಿಯಲ್ಲಿದ್ದು, ಅಪ್ರಾಪ್ತ ವಯಸ್ಕ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯಗಳನ್ನು ತಡೆಯುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. ಆದರೆ ಈ ಕಾಯ್ದೆ ದುರ್ಬಳಕೆಯಾಗದಂತೆ ಹಾಗೂ ಅಮಾಯಕರು ಈ ಕಾಯ್ದೆ ಅಡಿಯಲ್ಲಿ ಶಿಕ್ಷೆ ಅನುಭವಿಸದಂತೆ, ಸಂಬಂಧಿಸಿದ ಇಲಾಖೆಗಳು ಎಚ್ಚರಿಕೆ ವಹಿಸಬೇಕಾಗಿದೆ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಕಾಲುವೆಗೆ ತಡೆಗೋಡೆ ನಿರ್ಮಿಸಿ



ಮಾನ್ಯರೆ,

ಮೈಸೂರಿನ ಲಲಿತಾದ್ರಿಪುರ ರಿಂಗ್ ರಸ್ತೆಯಲ್ಲಿರುವ ಮಾರ್ವೆಲ್ ಶಾಲಾ– ಕಾಲೇಜು ಮುಂಭಾಗದಿಂದ ಸ್ವಲ್ಪ ದೂರ ಸಾಗಿದರೆ ವರುಣಾ ನಾಲೆ ಕಾಲುವೆ ಸಿಗುತ್ತದೆ. ಈ ಕಾಲುವೆ ಎಡ ಭಾಗದಿಂದ ಸಾಗಿದರೆ ಶಾಂತವೇರಿ ಗೋಪಾಲಗೌಡನಗರ, ಲಾಲ್ ಬಹದ್ದೂರ್‌ಶಾಸ್ತ್ರಿನಗರ, ಯಾಂದಳ್ಳಿ ಬಡಾವಣೆಗೆ ತೆರಳುತ್ತೇವೆ. ಇವೆಲ್ಲಾ ಹೊಸ ಬಡಾವಣೆಗಳಾಗಿರುವುದರಿಂದ ಹೆಚ್ಚೆಚ್ಚು ಮನೆಗಳು ನಿರ್ಮಾಣವಾಗುತ್ತಿವೆ. ಈ ಕಾಲುವೆಯ ಪಕ್ಕ ಮಣ್ಣಿನ ರಸ್ತೆ ಇದ್ದು, ಇದು ತುಂಬಾ ಹಳ್ಳ ಕೊಳ್ಳಗಳಿಂದ ಕೂಡಿದೆ. ಈ ರಸ್ತೆಯ ಮೂಲಕ ಪ್ರತಿನಿತ್ಯ ಸಾವಿರಾರು ಜನ ಹೆಚ್ಚಾಗಿ ಕಟ್ಟಡ ಕಾರ್ಮಿಕರು ಮೇಲಿನ ಬಡಾವಣೆಗಳಿಗೆ ಹೋಗಿ ಬರುತ್ತಾರೆ. ಆದ್ದರಿಂದ ಸಾವು ನೋವುಗಳು ಸಂಭವಿಸುವ ಮೊದಲೇ ಎಚ್ಚೆತ್ತುಕೊಂಡು ಜಿಲ್ಲಾಡಳಿತ ಮತ್ತು ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಈ ಕಾಲುವೆಗೆ ತಡೆಗೋಡೆ ನಿರ್ಮಿಸಲಿ.

–ಅಹಲ್ಯ ಸಿ ನಾ. ಚಂದ್ರ, ಜನತಾನಗರ, ಮೈಸೂರು

ಬ್ಯಾಂಕ್ ಸಿಬ್ಬಂದಿ ವಿರುದ್ಧವೂ ತನಿಖೆ ಅಗತ್ಯ

ಮಾನ್ಯರೆ,

ಮೈಸೂರಿನ ಹಿನಕಲ್ ಕೆನರಾ ಬ್ಯಾಂಕ್‌ನಲ್ಲಿ ಗ್ರಾಹಕರು ತಾವು ಅಡವಿಟ್ಟಿದ್ದ ಚಿನ್ನಾಭರಣಗಳ ತೂಕದಲ್ಲಿ ವ್ಯತ್ಯಾಸವಾಗಿದೆ ಎಂದು ದೂರಿದ್ದಾರೆ. ಇದು ನಿಜಕ್ಕೂ ರಾಷ್ಟ್ರೀಕೃತ ಬ್ಯಾಂಕ್‌ಗಳ ವಿಶ್ವಾಸರ್ಹತೆಗೆ ಧಕ್ಕೆ ತರುವಂತಾಗಿದೆ. ಈ ಬಗ್ಗೆ ಬ್ಯಾಂಕ್‌ನ ಎಜಿಎಂನವರು ಚಿನ್ನದ ಮೌಲ್ಯ ಮಾಪಕರ ವಿರುದ್ಧ ದೂರು ನೀಡಿದ್ದು ಪ್ರಕರಣ ದಾಖಲಾಗಿ ಪೊಲೀಸರು ತನಿಖೆ ನಡೆಸುತ್ತಿರುವುದಾಗಿ ಪತ್ರಿಕೆಗಳಲ್ಲಿ ವರದಿಯಾಗಿದೆ. ಇದು ನಿಜಕ್ಕೂ ಗಂಭೀರ ವಿಷಯ. ಇದು ಬೇರೆ ಬ್ಯಾಂಕ್‌ಗಳಲ್ಲೂ ನಡೆಯುವ ಬಗ್ಗೆ ಜನರಿಗೆ ಈಗ ಅನುಮಾನಗಳೆದ್ದಿವೆ. ಈಗ ಮೌಲ್ಯಮಾಪಕನ ವಿರುದ್ಧ ಪ್ರಕರಣ ದಾಖಲಾಗಿದೆ. ಆದರೆ ಬ್ಯಾಂಕ್‌ಗಳಲ್ಲಿ ಸಿಸಿಟಿವಿ ಕಣ್ಗಾವಲು ಇರುತ್ತದೆ. ಹಾಗಿದ್ದೂ ಆತ ಚಿನ್ನ ಕಳುವು ಮಾಡಿರುವುದು ಬ್ಯಾಂಕ್ ಸಿಬ್ಬಂದಿಗಳು ಇದರಲ್ಲಿ ಒಳಗೊಂಡಿರುವ ಸಾಧ್ಯತೆ ದಟ್ಟವಾಗಿದೆ. ಏಕೆಂದರೆ ಚಿನ್ನ ಅಡವು ಸಂಬಂಧ ಬ್ಯಾಂಕ್ ಸಿಬ್ಬಂದಿಗಳು ಕೂಡ ಜೊತೆಗೆ ಕಾರ್ಯ ನಿರ್ವಹಿಸುತ್ತಾರೆ. ಆ ರೀತಿ ಆಗಿದ್ದರೆ ಬ್ಯಾಂಕ್‌ನಲ್ಲಿಯೇ ಚಿನ್ನ ಕತ್ತರಿಸುವ ಕೆಲಸ ಆಗಿರಬೇಕು. ಆದ್ದರಿಂದ ಮೌಲ್ಯಮಾಪಕರ ಜೊತೆ ಕಾರ್ಯ ನಿರ್ವಹಿಸುವ ಬ್ಯಾಂಕ್ ಸಿಬ್ಬಂದಿಯನ್ನೂ ತನಿಖೆಗೊಳಪಡಿಸುವುದು ಅವಶ್ಯ. ಬ್ಯಾಂಕ್ ವ್ಯವಸ್ಥಾಪಕರನ್ನೂ ಹೊಣೆಗಾರರಾಗಿ ಮಾಡಬೇಕು.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

ಅಭಿಯೋಜಕ ವರ್ಸಸ್ ಅಭಿರಕ್ಷಕ, ರಾಜ್ಯ ಸರ್ಕಾರದ ದ್ವಿಪಾತ್ರಾಭಿನಯ!

ಮಾನ್ಯರೆ,

'ವಕೀಲರ ದುಬಾರಿ ಶುಲ್ಕ ನೆನೆದು ಜನ ಕೋರ್ಟ್ ಮೆಟ್ಟಿಲೇರಲು ಹೆದರುತ್ತಾರೆ' ಎಂದಿದ್ದಾರೆ ಜಿಲ್ಲಾ ಕಾನೂನು ಅಭಿರಕ್ಷಕ ನವೀನ್! ಮೈಸೂರಿನ ಕೆ.ಜಿ.ಕೊಪ್ಪಲ್ ಸಮೀಪದ ಮಳಲವಾಡಿ ನ್ಯಾಯಾಲಯದ ಸಂಕೀರ್ಣದಲ್ಲಿ ಉಚಿತವಾಗಿ ಕಾನೂನು ಸಲಹೆ ನೀಡುವ ಕಚೇರಿ ಇದ್ದು, ಇದರ ಸದುಪಯೋಗಪಡಿಸಿಕೊಳ್ಳಬಹುದು ಎಂದೂ ಅವರು ಸಲಹೆ ನೀಡಿದ್ದಾರೆ.

ನ್ಯಾಯಾಲಯ ವಿಧಿಸುವ ಕಠಿಣ ಶಿಕ್ಷೆಗೆ ಹೆದರದೇ ಅಪರಾಧ ಎಸಗಲು ಹಿಂಜರಿಯದವರು ವಕೀಲರ ದುಬಾರಿ ಶುಲ್ಕಕ್ಕೆ ಹೆದರುವರೇ? ಜಿಲ್ಲಾ ಕಾನೂನು ಅಭಿರಕ್ಷಕರ ಸಲಹೆಯಂತೆ ಎಲ್ಲಾ ಆರೋಪಿಗಳು ಉಚಿತ ಕಾನೂನು ನೆರವು ಪಡೆಯಲು ಕಾನೂನು ಸೇವಾ ಪ್ರಾಧಿಕಾರದ ಮೊರೆ ಹೋದರೆ ಕ್ರಿಮಿನಲ್ ಪ್ರಕರಣಗಳ ಗತಿ ಏನಾಗಬಹುದು? ಕ್ರಿಮಿನಲ್ ಪ್ರಕರಣಗಳಲ್ಲಿ ನೊಂದವರು ಹಾಗೂ ದೂರುದಾರರ ಪರವಾಗಿ ಹೋರಾಡಲು ಅಭಿಯೋಜನಾ ಇಲಾಖೆಯಿದೆ. ಅಭಿಯೋಜಕರಿದ್ದಾರೆ. ಸರಕಾರವಿದೆ. ಇದೇ ಸರಕಾರವು ಅದೇ ಪ್ರಕರಣಗಳ ಆರೋಪಿಗಳ ಪರವಾಗಿ ಹೋರಾಡಲು ಅಭಿರಕ್ಷಕರನ್ನು ನೇಮಿಸಿರುವುದರಿಂದ ಕ್ರಿಮಿನಲ್ ಪ್ರಕರಣಗಳಲ್ಲಿ ಸರಕಾರವೇ ದೂರುದಾರ ಹಾಗೂ ಆರೋಪಿಯ ಪರವಾಗಿ ದ್ವಿಪಾತ್ರಾಭಿನಯ ಮಾಡುವಂತಾಗಿದೆ. ರಾಜ್ಯದ ಪರವಾಗಿ ದಾಖಲಾಗುವ ಕ್ರಿಮಿನಲ್ ಪ್ರಕರಣಗಳಲ್ಲಿ ರಾಜ್ಯದ ವಿರುದ್ಧವೂ ಕೂಡಾ ರಾಜ್ಯವೇ ಹೋರಾಡುವಂತಾಗಿರುವುದು ವಿಪರ್ಯಾಸ! ನ್ಯಾಯಾಲಯದಲ್ಲಿ ದಾಖಲಾಗುವ ಕ್ರಿಮಿನಲ್ ಪ್ರಕರಣಗಳು ಅಭಿಯೋಜಕ ವರ್ಸಸ್ ಅಭಿರಕ್ಷಕ ಎಂಬಂತಾಗಿರುವುದು ವಿಪರ್ಯಾಸ!


–ಪಿ.ಜೆ.ರಾಘವೇಂದ್ರ, ನ್ಯಾಯವಾದಿ, ಮೈಸೂರು



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು.

ಸಂಸ್ಕೃತಿ ಚಿಂತನಾ

ಕನ್ನಡಕ್ಕೆ ಕುವೆಂಪು ಕೊಡುಗೆ



ಕಾವೇರಿಯಿಂದ ಗೋದಾವರಿಯವರೆಗೆ ಹರಡಿರುವ ನಾಡಿನಲ್ಲಿ ಸಾವಿರಾರು ವರ್ಷಗಳಿಂದ ಜನರು ಆಡುವ ನುಡಿ ಕನ್ನಡ ಇಂದು ಆರು ಕೋಟಿ ಜನರ ತಾಯ್ನುಡಿಯಾಗಿರುವುದು ಕನ್ನಡ. ಶಾಸನಗಳಲ್ಲಿ, ಶಾಸ್ತ್ರ ಗ್ರಂಥಗಳಲ್ಲಿ, ಕಾವ್ಯಗಳಲ್ಲಿ, ಹಾಡುಗಳಲ್ಲಿ ಮೆರೆದಿರುವುದು, ಮೆರೆಯುತ್ತಿರುವುದು ನಮ್ಮ ಕನ್ನಡ. ಇದನ್ನು ವಿಶ್ವದ ವಿಖ್ಯಾತ ಭಾಷೆಗಳ ಸಾಲಿನಲ್ಲಿ ಕೂಡಿಸಲು ನಾನಾ ವಿದ್ವಾಂಸರು, ಕವಿಗಳು ಕಾರಣರಾಗಿದ್ದಾರೆ. ಪಂಪ, ರನ್ನ, ಪೊನ್ನ, ಜನ್ನ, ರಾಘವಾಂಕ, ಕುಮಾರವ್ಯಾಸ, ಲಕ್ಷ್ಮೀಶ, ರತ್ನಾಕರವರ್ಣಿ, ಷಡಕ್ಷರಿ ಇತ್ಯಾದಿ ಅನೇಕ ಕವಿಗಳು ಕನ್ನಡ ಸರಸ್ವತಿಯ ತೇರಿನ ಸಾರಥಿಗಳಾಗಿದ್ದಾರೆ. ಇಪ್ಪತ್ತನೆಯ ಶತಮಾನ ಕನ್ನಡದ ನವೋದಯದ ಕಾಲ. ಇದರಲ್ಲಿ ಕನ್ನಡದ ಸತ್ತ್ವ ನೂರ್ಮಡಿಯಾಗಿ ಬೆಳೆಯಿತು. ಮಹಾಕಾವ್ಯ, ಗೀತಕಾವ್ಯ, ನಾಟಕ, ಗದ್ಯ, ಪದ್ಯ, ಚಂಪೂ, ಕವನ, ಭಾವಗೀತೆ, ಪ್ರಬಂಧ, ಲೇಖನ ಮುಂತಾದ ನೂರಾರು ಪ್ರಕಾರಗಳಲ್ಲಿ ಕನ್ನಡ ಸಾಹಿತ್ಯ ಬೆಳೆಯಿತು. ಕನ್ನಡದಲ್ಲೇ ನೂರಾರು ದಿನಪತ್ರಿಕೆಗಳು, ವಾರ ಪತ್ರಿಕೆಗಳು, ಮಾಸಪತ್ರಿಕೆಗಳು ಹುಟ್ಟಿ ಬರಹಗಾರರನ್ನು ಉತ್ತೇಜಿಸಿದವು. ಆಕಾಶವಾಣಿ, ಚಲನಚಿತ್ರ, ದೂರದರ್ಶನ ಇತ್ಯಾದಿ ಮಾಧ್ಯಮಗಳೂ ಕನ್ನಡದ ಬೆಳೆ ಹುಲುಸಾಗಲು ಕಾರಣಗಳಾದವು. ಬಿ.ಎಂ.ಶ್ರೀ, ತೀ.ನಂ. ಶ್ರೀ, ಕುವೆಂಪು, ಕಾರಂತ, ಬೇಂದ್ರೆ, ಡಿವಿಜಿ, ಮಾಸ್ತಿ, ಗೋಕಾಕ, ಕಂಬಾರ, ಕಾರ್ನಾಡ್, ಭೈರಪ್ಪ, ಅನಕೃ, ತರಾಸು – ಹೀಗೆ ನೂರಾರು ಸಾಹಿತಿಗಳು ಕನ್ನಡ ನಾಡಿನ ಮನೆ ಮನೆಯ ಮಾತಿನಲ್ಲಿ ಸ್ಥಾನವನ್ನು ಗಳಿಸಿದರು. ಒಬ್ಬೊಬ್ಬರ ಕೊಡುಗೆಯೂ ಚಿರಸ್ಮರಣೀಯ. ಪುರುಷರಷ್ಟೇ ಅಲ್ಲ. ತ್ರಿವೇಣಿ, ಎಂ.ಕೆ. ಇಂದಿರಾ, ಆರ್ಯಾಂಬಾ ಪಟ್ಟಾಭಿ ಮುಂತಾದ ಮಹಿಳೆಯರೂ ಕನ್ನಡಕ್ಕೆ ಅಸಾಧಾರಣ ಕೊಡುಗೆ ನೀಡಿದ್ದಾರೆ.

ಇದೆಲ್ಲ ಅಹುದಹುದಾದರೂ ಕನ್ನಡದ ಏಕಮಾತ್ರ ಶ್ರೇಷ್ಠ ಪ್ರತಿನಿಧಿ ಯಾರು? ಎಂಬ ಪ್ರಶ್ನೆ ಬಂದಾಗ ಸಿಕ್ಕುವ ಉತ್ತರ ಕುವೆಂಪು ಎಂಬುವುದೇ ಆಗಿದೆ. ಕಾರಣವೇನೆಂದರೆ ಅವರದು ಸರ್ವತೋಮುಖ ಪ್ರತಿಭೆ. ಬೇರೆ ಕೆಲವರು ಕಾದಂಬರಿಗಳನ್ನು ಬರೆದರು. ಭಾವಗೀತೆಯನ್ನೂ, ನಾಟಕವನ್ನೂ ಅವರು ರಚಿಸಲಾಗಲಿಲ್ಲ. ಭಾವಗೀತೆಗಳನ್ನು ಬರೆದವರು ಮಹಾಕಾವ್ಯವನ್ನು ಬರೆಯಲಿಲ್ಲ. ಮಹಾಕಾವ್ಯವನ್ನು ಬರೆದವರು ವಿಮರ್ಶೆಗೆ ಕೈ ಹಾಕಲಿಲ್ಲ. ಈ ಎಲ್ಲಾ ಪ್ರಕಾರಗಳಲ್ಲಿ ರಚನೆಗಳನ್ನು ಮಾಡಿ ಸೈ ಎನಿಸಿಕೊಂಡವರು ಕುವೆಂಪು ಒಬ್ಬರೇ.

ಕುವೆಂಪು ರಚಿಸಿದ ಮಹಾಕಾವ್ಯ ರಾಮಾಯಣ ದರ್ಶನ. ಅದರ ಭಾಷೆ, ಶೈಲಿ, ರಸಮಯತೆ ಅಸದೃಶ. ಒಂದು ಸಾಲನ್ನು ಹೇಳಿದರೆ ಸಾಕು. ಇದು ಕುವೆಂಪು ಅವರದು ಎಂದು ಹೇಳಿಬಿಡಬಹುದು. ಅವರ ಶಬ್ದಬಂಧಸೌಷ್ಟವ ಇನ್ನೆಲ್ಲೂ ಬಂದಿಲ್ಲ. ರಾಮಾಯಣ ದರ್ಶನವನ್ನು ನೋಡಿ ತಾವೂ ಮಹಾಕಾವ್ಯವನ್ನು ಬರೆಯಲು ಹೊರಟವರಿದ್ದಾರೆ. ಅವರು ಅನುಕರಣ ಮಾತ್ರ ಕುಶಲರು. ಗಗನಂ ಗಗನಾಕಾರಂ ಸಾಗರಃ ಸಾಗರೋಪಮಃ ಎಂದು ವಾಲ್ಮೀಕಿ ಮಹರ್ಷಿಗಳು ಹೇಳಿದಂತೆ ರಾಮಾಯಣ ದರ್ಶನಕ್ಕೆ ರಾಮಾಯಣ ದರ್ಶನವೇ ಸಾಟಿ.

ಕಾದಂಬರೀ ಕ್ಷೇತ್ರದಲ್ಲಿ ಕುವೆಂಪು ಅವರ ಕೊಡುಗೆ ಅನನ್ಯ. ಮಲೆಗಳಲ್ಲಿ ಮದುಮಗಳು, ಕಾನೂರು ಹೆಗ್ಗಡತಿ ಸುಬ್ಬಮ್ಮ ಎಂಬ ಎರಡೂ ಇಂದಿಗೆ ನೂರು ವರ್ಷಗಳ ಹಿಂದಿನ ಮಲೆನಾಡಿನ ಮಂದಿಯ ಬದುಕಿನ ಚಿತ್ರಣ. ಆಗ ಒತ್ತಾದ ಕಾಡುಗಳಿದ್ದ ಕಾಲ. ಆ ಪ್ರಕೃತಿಯನ್ನು, ಅದರ ರಮ್ಯ–ರೌದ್ರರೂಪಗಳನ್ನು ಸಾಕ್ಷಾತ್ತಾಗಿ ಕಂಡ ಕವಿಹೃದಯ ಹೇಗೆ ಸ್ಪಂದಿಸಿತ್ತು ಎಂಬುದನ್ನು ತಿಳಿದು ಕೊಳ್ಳಲು ಈ ಎರಡು ಕಾದಂಬರಿಗಳನ್ನು ಓದಬೇಕು. ಜನರ ದೌರ್ಬಲ್ಯಗಳು ಇಲ್ಲಿ ಬಿಂಬಿತವಾಗಿವೆ. ಸ್ವಾತಂತ್ರ್ಯ ಸಂಗ್ರಾಮ ಇನ್ನೂ ನಡೆಯುತ್ತಿದ್ದ ಕಾಲ ವದು. ಅಂದಿನ ಜೀವನದ ವಿವಿಧ ಮಜಲುಗಳನ್ನು ಅರಿತುಕೊಳ್ಳಲು ನಮಗೆ ಕುವೆಂಪು ಅವರ ಲೇಖನಿ ನೆರವನ್ನು ನೀಡುತ್ತದೆ.

ರಾಮಾಯಣ ದರ್ಶನವನ್ನು ಬರೆಯುವಾಗ ಕುವೆಂಪು ಅಯೋಧ್ಯೆ, ದಂಡಕಾರಣ್ಯ, ಲಂಕೆ ಇತ್ಯಾದಿಗಳನ್ನು ತಮ್ಮ ಕಲ್ಪನೆಯ ಕಣ್ಣಿನಿಂದ ಕಂಡು ಚಿತ್ರಿಸಿದ್ದಾರೆ. ಆದರೆ ಕಾದಂಬರಿಯಲ್ಲಿ ಅವರು ವರ್ಣಿಸಿರುವ ಹಳ್ಳಿ, ಕಾಡು, ಹುಲಿ, ಅದರಲ್ಲಿ ಬರುವ ಮನುಷ್ಯ ಪಾತ್ರಗಳು– ಇವೆಲ್ಲ ಅವರು ಕಣ್ಣಾರೆ ಕಂಡ ಸ್ಥಳಗಳು, ಪ್ರಾಣಿಗಳು ಮತ್ತು ಮನುಷ್ಯರು ಅವಕ್ಕೆಲ್ಲ ಹೆಸರುಗಳನ್ನು ಅವರು ಕೊಟ್ಟಿರಬಹುದಷ್ಟೆ.

ಕುವೆಂಪು ಕವಿತಾ ವೈಭವವನ್ನು ಪಕ್ಷಿಕಾಶಿಯಲ್ಲಿ ನೋಡಬಹುದು. ಹಾಗೆಯೇ ಅವರ ಕವಿತೆಗಳ ಗಾನ ಮಾಧುರ್ಯ ಗಾಯಕರ ಕಂಠಗಳಲ್ಲಿ ಮಾರ್ದನಿಸುತ್ತದೆ. ಗೌರಿ ಎಂಬ ಚಲನಚಿತ್ರದಲ್ಲಿ ಕೇಳಿ ಬಂದ

ಯಾವ ಜನ್ಮದ ಮೈತ್ರಿ ಈ ಜನ್ಮದಲಿ ಬಂದು
ನಮ್ಮಿಬ್ಬರನು ಮತ್ತೆ.......

ಎಂಬ ಗೀತೆಯನ್ನು ನೂರು ಸಲ, ಸಾವಿರ ಸಲ ಕೇಳಿದರೂ ಮತ್ತೆ ಕೇಳೋಣವೆನಿಸುತ್ತದೆ. ಹಾಗೆಯೇ ದೋಣಿ ಸಾಗಲಿ ಮುಂದೆ ಹೋಗಲಿ ದೂರ ತೀರವ ಸೇರಲಿ ಎಂಬ ಹಾಡು ಎಷ್ಟು ಮಧುರವಾಗಿದೆ. ಹೀಗೆ ಎಷ್ಟೋ ಚಲನಚಿತ್ರಗಳಲ್ಲಿ ಕುವೆಂಪು ಅವರ ಕವನಗಳು ಗಾಯಕರ ಸಿರಿ ಕಂಠಗಳಲ್ಲಿ ಮೊಳಗಿ ಬರೆದಿದ್ದರೂ ಅವರ ಮೇರುಕೃತಿ ಯಾವುದೆಂದರೆ ಕನ್ನಡ ನಾಡಗೀತೆ.

ಜಯ ಭಾರತ ಜನನಿಯ ತನುಜಾತೆ
ಜಯ ಹೇ ಕರ್ನಾಟಕ ಮಾತೆ

ಎಂಬ ಗೀತೆ ಕನ್ನಡ ನಾಡಿನ ಮಹಿಮೆಯನ್ನೂ ಭಾರತ ಸಂಸ್ಕೃತಿಯ ವಿಶಾಲತೆಯನ್ನು ಮೈಗೂಡಿಸಿಕೊಂಡಿದೆ. ಎಲ್ಲಾ ಪ್ರಾಚೀನ ಕವಿಗಳ, ದಾರ್ಶನಿಕರ ಸ್ಮರಣೆಯನ್ನು ತಂದುಕೊಟ್ಟು ಕನ್ನಡಿಗರು ನಾವೆಂದು ಹೆಮ್ಮೆಪಡುವಂತೆ ಮಾಡಿದೆ.

ಕುವೆಂಪು ಕೊಟ್ಟ ದೊಡ್ಡ ಸಂದೇಶ ವಿಶ್ವಮಾನವರಾಗಲು ಕೊಟ್ಟ ಸಂದೇಶ. ಎಲ್ಲಾ ಮಾನವರೂ ಮಾನವರಾಗಿಯೇ ಹುಟ್ಟುವುದು. ಆದರೆ ಆಮೇಲೆ ಅವರು ಆ ಧರ್ಮ, ಈ ಧರ್ಮ, ಆ ಮತ, ಈ ಮತ, ಆ ಬಣ್ಣ, ಈ ಬಣ್ಣ, ಆ ರಾಷ್ಟ್ರ, ಈ ರಾಷ್ಟ್ರ ಎಂಬ ಗೋಡೆಗಳನ್ನು ಕಟ್ಟಿಕೊಂಡು ನಾವು ಬೇರೆ ನೀವು ಬೇರೆ ಎಂದು ಬಿರುಕುಗಳನ್ನು ಸೃಜಿಸುತ್ತಾರೆ. ನಾನು ಮೇಲು, ನೀನು ಕೀಳು ಎಂಬ ಉಚ್ಚ ನೀಚ ಭಾವನೆಯನ್ನು ಬಿತ್ತುತ್ತಾರೆ. ಇದರಿಂದಲೇ ಜಗಳ, ಹೊಡೆದಾಟ, ಯುದ್ಧ, ವಿನಾಶ. ಇದನ್ನು ಕುವೆಂಪು ವಿರೋಧಿಸಿದರು. ಅವರು ವೇದಗಳನ್ನು ಉಪನಿಷತ್ತುಗಳನ್ನು ವಿಶ್ವದ ನಾನಾ ಭಾಷೆಗಳ ಮಹಾಕಾವ್ಯಗಳನ್ನು ಓದಿದ್ದವರು. ಯೋ ವೈ ಭೂಮಾ ತತ್ ಸುಖಂ, ನಾಲ್ಪೇ ಸುಖಮಸ್ತಿ ಎಂಬ ಋಷಿವಾಣಿಯ ಸಾರವನ್ನು ಅರಿತಿದ್ದವರು. ನಿಜವಾದ ಅರ್ಥದಲ್ಲಿ ಅವರು ವಿಶ್ವಮಾನವ (Citizen of the world) ವಿಶ್ವಮಾನವ ಸಂದೇಶವನ್ನು ಎಲ್ಲ ರಾಷ್ಟ್ರಗಳ ನಾಯಕರು ಅರಿತಿದ್ದರೆ ಇಷ್ಟೊಂದು ವಿನಾಶಕಾರಿ ಆಯುಧಗಳ, ಬಾಂಬುಗಳ, ಸೈನ್ಯಗಳ ಅವಶ್ಯಕತೆ ಇರುತ್ತಿತ್ತೆ? ಎಲ್ಲ ದೇಶಗಳು ಮೈತ್ರಿಯ ಸೂತ್ರವನ್ನು ಅನುಸರಿಸಿದ್ದರೆ, ವಿನಾಶ ಮಾಡುವುದನ್ನು ನಿಲ್ಲಿಸಿದ್ದರೆ, ಎಲ್ಲ ದೇಶಗಳೂ ಮುಂದುವರಿದ ಶ್ರೀಮಂತ ರಾಷ್ಟ್ರಗಳೇ ಆಗಬಹುದಾಗಿತ್ತು. ಇದು ಕುವೆಂಪು ಕಂಡ ಕನಸು. ಅದು ನನಸಾಗದಿರುವುದಕ್ಕೆ ನಮ್ಮೆಲ್ಲರ ಮೂರ್ಖತೆಯೇ ಕಾರಣ.

ಕುವೆಂಪು ಅವರು ಕನ್ನಡಕ್ಕೆ ಕೊಟ್ಟ ದೊಡ್ಡ ಕೊಡುಗೆ ವಿಮರ್ಶನ ಸಾಹಿತ್ಯ. ಸೃಷ್ಟ್ಯಾತ್ಮಕ (Creative) ಸಾಹಿತ್ಯವನ್ನು ಬರೆಯುವ ಹಲವರು ವಿಮರ್ಶೆಯನ್ನು ಮುಟ್ಟುವುದೇ ಇಲ್ಲ. ವಿಮರ್ಶಾತ್ಮಕ (Critical) ವಿಷಯಗಳಿಗೆ ಕೈಹಾಕಿದರೆ ನಮ್ಮ ಸೃಷ್ಟ್ಯಾತ್ಮಕತೆ ಮಾಯವಾದೀತು ಎಂದು ಹೆದರಿದವರೂ ಉಂಟು. ಆದರೆ ಸಾಹಿತ್ಯ ಸೃಷ್ಟಿಯನ್ನೂ ಸಾಹಿತ್ಯ ವಿಮರ್ಶೆಯನ್ನೂ ಸಮಾನವಾಗಿ ನಡೆಸಿದ ಕುವೆಂಪು ಸವ್ಯಸಾಚಿಗಳಾದರು. ಅವರ ರಸೋ ವೈ ಸಃ ಎಂಬ ಪುಸ್ತಕ ವಿಮರ್ಶೆಯ ದಾರಿದೀಪ. ಪೌರಸ್ತ್ಯ–ಪಾಶ್ಚಾತ್ಯ ಚಿಂತನೆಗಳ ಸಂಗಮವನ್ನು ಅವರಲ್ಲಿ ಕಾಣುತ್ತೇವೆ. ರಸೋ ವೈ ಸಃ ಎಂಬುದು ತೈತ್ತಿರೀಯೋಪನಿಷತ್ತಿನಲ್ಲಿ ಬರುವ ವಾಕ್ಯ. ಅದನ್ನು ಕಾವ್ಯಗಳ ಜೀವಾತುವಾದ ರಸಕ್ಕೆ ಅನ್ವಯಿಸಿ ಅದರ ಅರ್ಥವಿಸ್ತಾರವನ್ನು ಹೆಚ್ಚಿಸಿದ್ದಾರೆ ಆಲಂಕಾರಿಕರು. ಅದರ ವಿಮರ್ಶೆಯನ್ನು ನಾವು ಕುವೆಂಪು ಅವರಲ್ಲಿ ಕಾಣಬಹುದು.

ಪರ್ವತವನ್ನು ನಾನಾ ದಿಕ್ಕುಗಳಿಂದ ನೋಡಿ ಆಶ್ಚರ್ಯಪಡುವಂತೆ ಕುವೆಂಪು ಸಾಹಿತ್ಯವನ್ನು ನಾನಾ ಆಯಾಮಗಳಿಂದ ಕಂಡು ವಿಸ್ಮಯಪಡುತ್ತಾರೆ ಸಾಹಿತ್ಯಪ್ರಿಯರು.

ಟಿ.ಕೆ.ಲೇಔಟ್‌ನ ಬೋಗಾದಿ ರಸ್ತೆಯಲ್ಲಿ ಅಪಾಯಕ್ಕೆ ಆಹ್ವಾನ ನೀಡುತ್ತಿರುವ ಹೊಂಡ

ಪಾಲಿಕೆ ಅಧಿಕಾರಿಗಳ ದಿವ್ಯ ನಿರ್ಲಕ್ಷ್ಯ, ಅಪಾಯದ ಸೂಚಕವಾಗಿ ತೆಂಗಿನ ಗರಿ ಇಟ್ಟ ಸ್ಥಳೀಯರು





ಮೈಸೂರಿನ ಟಿ.ಕೆ.ಲೇಔಟ್ ಜನತಾನಗರದ ಬೋಗಾದಿ ರಸ್ತೆಯಲ್ಲಿರುವ ಅಪಾಯಕಾರಿ ಹೊಂಡ ಹಾಗೂ ಅದಕ್ಕೆ ಸಾರ್ವಜನಿಕರು ತೆಂಗಿನ ಗರಿ ಇಟ್ಟಿರುವುದನ್ನು ಚಿತ್ರಗಳಲ್ಲಿ ಕಾಣಬಹುದು.

ಮೈಸೂರು, ಡಿ.23– ನಗರದ ಟಿ.ಕೆ.ಲೇಔಟ್ ಜನತಾನಗರ ಬೋಗಾದಿ ರಸ್ತೆಯಲ್ಲೊಂದು ಆಳವಾದ ಹೊಂಡ ನಿರ್ಮಾಣವಾಗಿದ್ದು, ಅಪಾಯಕ್ಕೆ ಆಹ್ವಾನ ನೀಡಿದೆ.


ತರಳಬಾಳು ವಿದ್ಯಾಸಂಸ್ಥೆ ಜಂಕ್ಷನ್‌ನ ಪೆಟ್ರೋಲ್ ಬಂಕ್ ಬಳಿ ಈ ಅಪಾಯಕಾರಿ ಹೊಂಡ ಬಿದ್ದು 15 ದಿನಗಳಾಗಿದ್ದರೂ 1ನಗರ ಪಾಲಿಕೆ ಅಧಿಕಾರಿಗಳು ತಿರುಗಿ ನೋಡಿಲ್ಲ. ಸಾರ್ವಜನಿಕರಿಗೆ ತಿಳಿಯಲಿ ಎಂದು ಹೊಂಡಕ್ಕೆ ತೆಂಗಿನ ಗರಿ ನಿಲ್ಲಿಸಿದ್ದೇವೆ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ರಸ್ತೆಯಲ್ಲಿ ಸದಾ ವಾಹನ ದಟ್ಟಣೆ ಇರುತ್ತದೆ. ಶಾಲಾ ಮಕ್ಕಳು ಹೆಚ್ಚು ಸಂಖ್ಯೆಯಲ್ಲಿ ಓಡಾಡುತ್ತಾರೆ. ಶಾಲಾ ವಾಹನಗಳು, ಮಕ್ಕಳನ್ನು ಶಾಲೆಗೆ ಕರೆದೊಯ್ಯುವ ಆಟೋಗಳೂ ಇಲ್ಲಿ ಸಂಚರಿಸುತ್ತವೆ. ಪೆಟ್ರೋಲ್ ಬಂಕ್‌ಗೆ ನಿತ್ಯ ಸಾವಿರಾರು ವಾಹನಗಳು ಬರುತ್ತವೆ. ಇದೀಗ ರಸ್ತೆ ಕುಸಿದು ಹೊಂಡ ನಿರ್ಮಾಣ ವಾಗಿರುವುದರಿಂದ ಪ್ರಾಣ ಕಂಟಕ ಎದುರಾಗಿದೆ. ವಾಹನ ಸವಾರರು ಸ್ವಲ್ಪ ಎಚ್ಚರ ತಪ್ಪಿದರೂ ಹೊಂಡದಿಂದ ನೆಲಕ್ಕುರುಳುವುದು ನಿಶ್ಚಿತ. ಕಾರು, ಆಟೋಗಳ ಚಕ್ರ ಸಿಲುಕಿದರೂ ಅವಘಡ ಸಂಭವಿಸುತ್ತದೆ.

ಸಮೀಪದ ಶಾಲೆಗಳ ಮಕ್ಕಳು ನಿತ್ಯ ಈ ರಸ್ತೆಯಲ್ಲೇ ಹೋಗಿಬರುತ್ತಾರೆ. ಪುಟ್ಟ ಮಕ್ಕಳು ಏನಾದರೂ ಕಾಲಿಟ್ಟರೆ ನೇರವಾಗಿ ಹೊಂಡಕ್ಕೆ ಬೀಳುತ್ತಾರೆ. ಹಿರಿಯರು ಸೇರಿದಂತೆ ಇತರೆ ಪಾದಚಾರಿಗಳಿಗೂ ಈ ಹೊಂಡದಿಂದ ಆತಂಕ ಎದುರಾಗಿದೆ. ಏನೋ ಯೋಚಿಸುತ್ತಾ ಅಥವಾ ವಾಹನಗಳಿಗೆ ಜಾಗ ನೀಡುವ ವೇಳೆ ಹೊಂಡವಿರುವುದನ್ನು ಮರೆತು, ಅದರಲ್ಲಿ ಕಾಲಿಟ್ಟರೆ ಭಾರೀ ಪೆಟ್ಟು ಅನುಭವಿಸಬೇಕಾಗುತ್ತದೆ. ಇನ್ನು ಹತ್ತಿರದಲ್ಲೇ ಬಾರ್ ಅಂಡ್ ರೆಸ್ಟೋರೆಂಟ್ ಇರುವುದರಿಂದ ಅತಿಯಾಗಿ ಮದ್ಯಪಾನ ಮಾಡಿದವರು ಆಯತಪ್ಪಿ ಹೊಂಡಕ್ಕೆ ಕಾಲಿಟ್ಟು ಸಮಸ್ಯೆ ಎದುರಿಸುವ ಸಾಧ್ಯತೆ ಇದೆ ಎಂದು ಸಾರ್ವಜನಿಕರು ಬೇಸರಿಸಿದ್ದಾರೆ.

ದೊಡ್ಡ ಕಾರುಗಳಲ್ಲಿ ಸಂಚರಿಸುವ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳಿಗೆ ಇದು ಸಣ್ಣ ಗುಂಡಿಯಾಗಿ ಕಾಣಬಹುದು. ಆದರೆ ದ್ವಿಚಕ್ರ ವಾಹನ ಹಾಗೂ ನಡೆದು ಹೋಗುವ ಸಾಮಾನ್ಯರಿಗೆ ಇದು ಜೀವಾಪಾಯ ತಂದೊಡ್ಡುವ ದೊಡ್ಡ ಹೊಂಡ. ಸಣ್ಣ ಮಕ್ಕಳು ಆಟವಾಡುತ್ತಾ ಏನಾದರೂ ಈ ಹೊಂಡದಲ್ಲಿ ಬಿದ್ದರೆ ಯಾರು ಹೊಣೆ. ಇನ್ನು ರಾತ್ರಿ ವೇಳೆ ಅಪಘಾತ ಸಂಭವಿಸಿದರೆ ಏನು ಗತಿ. ರಸ್ತೆ ಡಾಂಬಾರ್ ಕುಸಿದು ಹೊಂಡ ನಿರ್ಮಾಣವಾಗಿ 15 ದಿನಗಳಾದರೂ ದುರಸ್ತಿ ಮಾಡಿಸದಿರಲು ಕಾರಣ ವೇನು? ನಿತ್ಯ ಸಿಗುತ್ತಿದ್ದ ಕಾರ್ಪೊರೇಟರ್‌ಗಳಿಗೆ ಹೇಳಿ, ಕೆಲಸ ಮಾಡಿಸುತ್ತಿದ್ದೆವು. ಅವರ ಅವಧಿ ಮುಗಿದಿರುವುದರಿಂದ ವರ್ಷದಿಂದ ಅಧಿಕಾರಿಗಳೇ ಇಲ್ಲಾ. ಆದರೆ ಸಾರ್ವಜನಿಕರ ಸಮಸ್ಯೆ ಅವರಿಗೆ ಮನದಟ್ಟಾಗುತ್ತಿಲ್ಲ. ಈಗಲೂ ಕ್ರಮ ಕೈಗೊಳ್ಳದಿದ್ದರೆ ಹೊಂಡದ ಬಳಿಯೇ ಪ್ರತಿಭಟನೆ ಮಾಡುತ್ತೇವೆ ಎಂದು ಸಾರ್ವಜನಿಕರು ಎಚ್ಚರಿಕೆ ನೀಡಿದ್ದಾರೆ.

ಸಿದ್ದರಾಮಯ್ಯ ವಿರುದ್ಧದ ಮುಡಾ ಪ್ರಕರಣ: ಜ.5ಕ್ಕೆ ವಿಚಾರಣೆ ಮುಂದೂಡಿಕೆ



ಮೈಸೂರು,ಡಿ.23(ಬಿಎಲ್‌ಯು)–ಮುಡಾ ಪ್ರಕರಣ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ನಾಲ್ವರು ಆರೋಪಿಗಳ ವಿರುದ್ಧ ಸಲ್ಲಿಸಿರುವ ಬಿ–ರಿಪೋರ್ಟ್ ಅನ್ನು ವಜಾ ಮಾಡಬೇಕೆಂದು ದೂರುದಾರ ಸ್ನೇಹಮಯಿ ಕೃಷ್ಣ ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಲಿಖಿತ ವಾದ ಸಲ್ಲಿಸಿದ್ದಾರೆ.

ವಾಸ್ತವಾಂಶವನ್ನು ಮುಚ್ಚಿಟ್ಟಿರುವ ಲೋಕಾಯುಕ್ತ ತನಿಖಾಧಿಕಾರಿಗಳು ಸಿದ್ದರಾಮಯ್ಯ ಸೇರಿದಂತೆ ನಾಲ್ವರು ಆರೋಪಿಗಳ ವಿರುದ್ಧದ ತನಿಖೆ ಪೂರ್ಣಗೊಳಿಸಿ, ಬಿ ಅಂತಿಮ ವರದಿ ಸಲ್ಲಿಸಿದ್ದಾರೆ.

ಆದರೆ ಈಗ ತನಿಖೆ ವೇಳೆ ಹೊಸ ಸಾಕ್ಷ್ಯಗಳು ದೊರೆತಿವೆ ಎಂಬ ಸಬೂಬು ಹೇಳಿಕೊಂಡು ಮುಂದುವರೆದ ತನಿಖೆ ಮಾಡಲು ಅವಕಾಶ ನೀಡಬೇಕೆಂದು ನ್ಯಾಯಾಲಯಕ್ಕೆ ಮನವಿ ಮಾಡಿದ್ದಾರೆ. ಈ ಮೂಲಕ ನ್ಯಾಯಾಲಯದ ವಿಚಾರಣೆ ವಿಳಂಬವಾಗುವಂತೆ ತಂತ್ರ ರೂಪಿಸಿದ್ದಾರೆ. ಇದರಿಂದ ಆರೋಪಿಗಳ ವಿರುದ್ಧ ಯಾವುದೇ ಕಾನೂನು ಕ್ರಮ ತೆಗೆದುಕೊಳ್ಳದಂತೆ ಹಾಗೂ ಆರೋಪಿಗಳ ರಕ್ಷಣೆಗೆ ಮುಂದಾಗಿದ್ದಾರೆ ಎಂದು ಸ್ನೇಹಮಯಿ ಕೃಷ್ಣ ಆರೋಪಿಸಿದ್ದಾರೆ.

ಇದರಿಂದ ಆರೋಪಿಗಳಿಗೆ ಶಿಕ್ಷೆ ಕೊಡಿಸಬೇಕೆಂಬ ನನ್ನ ಕರ್ತವ್ಯಕ್ಕೆ ತನಿಖಾಧಿಕಾರಿ ಅಡ್ಡಿಪಡಿಸಿದ್ದಾರೆ. ಈ ಹಿನ್ನೆಲೆ ಆರೋಪಿಗಳ ವಿರುದ್ಧ ಸಲ್ಲಿಸಿರುವ ಬಿ–ರಿಪೋರ್ಟ್ ಅನ್ನು ವಜಾ ಮಾಡಬೇಕು. ಅಲ್ಲದೆ ನಾನು ಮಾಡಿರುವ ಆರೋಪ ಸಾಬೀತುಪಡಿಸಲು ಅವಕಾಶ ನೀಡಬೇಕೆಂದು ಕೋರಿದ್ದಾರೆ. ಅಲ್ಲದೆ ನ್ಯಾಯಾಲಯಕ್ಕೆ ಸುಳ್ಳು ಮಾಹಿತಿ ನೀಡಿ ಕರ್ತವ್ಯಕ್ಕೆ ಅಡ್ಡಿಪಡಿಸಿರುವ ತನಿಖಾಧಿಕಾರಿ ಟಿ.ಜೆ.ಉದೇಶ್ ಅವರ ವಿರುದ್ಧ ನ್ಯಾಯಾಂಗ ನಿಂದನೆ ಪ್ರಕರಣ ದಾಖಲಿಸಬೇಕೆಂದು ಸ್ನೇಹಮಹಿ ಕೃಷ್ಣ ನ್ಯಾಯಾಲಯಕ್ಕೆ ಮನವಿ ಮಾಡಿದ್ದಾರೆ. ಬಿ–ರಿಪೋರ್ಟ್ ವಜಾ ಮಾಡಿ ಎಂದು ದೂರುದಾರ ಸ್ನೇಹಮಯಿ ಕೃಷ್ಣ ಸಲ್ಲಿಸಿರುವ ಲಿಖಿತ ವಾದಕ್ಕೆ ಜನವರಿ 5, 2026 ರಂದು ನಡೆಯುವ ವಿಚಾರಣೆ ವೇಳೆ ಲೋಕಾಯುಕ್ತರು ಆಕ್ಷೇಪಣೆ ಸಲ್ಲಿಸಬಹುದು ಎಂದು ನ್ಯಾಯಾಧೀಶರು ಸೂಚಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರಿನ ಇಲವಾಲದಲ್ಲಿ ರೈತ ಸಂಘದ ಬೃಹತ್ ಸಮಾವೇಶ

ಕೇಂದ್ರ ಸರ್ಕಾರ ಜಾತಿಯ ವಿಷ ಬೀಜ ಬಿತ್ತಿ ಒಡೆದು ಆಳುತ್ತಿದೆ

- ರೈತ ಸಂಘದ ಗೌರವಾಧ್ಯಕ್ಷ ಚಾಮರಸ ಮಾಲೀ ಪಾಟೀಲ್ ಆರೋಪ
- ಬಹು ರಾಷ್ಟ್ರೀಯ ಕಂಪನಿಗಳಿಗೆ ರೈತರ ಭೂಮಿ ಮಾರಾಟ
- ಹುಸಿಯಾದ ಉದ್ಯೋಗ ಸೃಷ್ಟಿ ಭರವಸೆ
- ರೈತ ವಿರೋಧಿ ಕಾಯ್ದೆ ವಾಪಸ್ಸು ಪಡೆಯಬೇಕು
- ಕೆ.ಎಸ್.ಪುಟ್ಟಣ್ಣಯ್ಯರನ್ನು ನೆನೆದ ರೈತರು



ಇಲವಾಲದ ಸಂತೆ ಮೈದಾನದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಆಯೋಜಿಸಿದ್ದ ರೈತ ದಿನಾಚರಣೆ ಕಾರ್ಯಕ್ರಮವನ್ನು ರಾಜ್ಯ ರೈತ ಸಂಘದ ಗೌರವಾಧ್ಯಕ್ಷ ಚಾಮರಸ ಮಾಲೀ ಪಾಟೀಲ್ ಉದ್ಘಾಟಿಸಿದರು.

ಮೈಸೂರು, ಡಿ.23(ಬಿಎಲ್‌ಯು)– ರೈತ ವಿರೋಧಿ ನೀತಿ ಅನುಸರಿಸುತ್ತಿರುವ ಕೇಂದ್ರ ಸರ್ಕಾರ ಜಾತಿ ಹಾಗೂ ಕೋಮುವಾದದ ವಿಷ ಬೀಜ ಬಿತ್ತಿ ಒಡೆದು ಆಳುತ್ತಿದೆ ಎಂದು ಕರ್ನಾಟಕ ರಾಜ್ಯ ರೈತ ಸಂಘದ ಗೌರವಾಧ್ಯಕ್ಷ ಚಾಮರಸ ಮಾಲೀ ಪಾಟೀಲ್ ಆರೋಪಿಸಿದರು.

ಮೈಸೂರಿನ ಇಲವಾಲದ ಸಂತೆ ಮೈದಾನದಲ್ಲಿ ಮಂಗಳವಾರ ಕರ್ನಾಟಕ ರಾಜ್ಯ ರೈತ ಸಂಘ ಆಯೋಜಿಸಿದ್ದ ರೈತ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಅತಿ ಹೆಚ್ಚು ಉದ್ಯೋಗ ಸೃಷ್ಟಿಸುವ ರೈತರು ಇಂದು ಸಂಕಷ್ಟಕ್ಕೆ ಸಿಲುಕಿದ್ದಾರೆ. ಬಿತ್ತನೆ ಬೀಜ, ರಸಗೊಬ್ಬರ ಸೇರಿದಂತೆ ಇತರೆ ವಸ್ತುಗಳು ದುಬಾರಿಯಾಗಿವೆ. ಆದರೆ ರೈತ ಬೆಳೆದ ಬೆಳೆಗೆ ಮಾತ್ರ ನ್ಯಾಯಯುತ ಬೆಲೆ ಸಿಗುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರಧಾನಿ ನರೇಂದ್ರ ಮೋದಿ ಅವರು ರೈತರ ಭೂಮಿಯನ್ನು ಬಹು ರಾಷ್ಟ್ರೀಯ ಕಂಪನಿಗಳಿಗೆ ಮಾರಾಟ ಮಾಡಲು ಮುಂದಾಗಿದ್ದರು. ಆದರೆ ರೈತರ ಹೋರಾಟದ ಫಲವಾಗಿ ಅವರ ಪ್ರಯತ್ನ ಕೈಗೂಡಲಿಲ್ಲ. ರಾಜ್ಯದಲ್ಲಿ ಎಪಿಎಂಸಿ ಕಾಯ್ದೆ ಮಾತ್ರ ವಾಪಸ್ಸು ಪಡೆದಿದ್ದಾರೆ. ಆದರೆ ಜಾನುವಾರು ಕಾಯ್ದೆ, ಭೂ ಕಾಯ್ದೆ ಸೇರಿದಂತೆ ರೈತ ಹಾಗೂ ಜನ ವಿರೋಧಿಯಾದ ಇತರೆ ಕಾಯ್ದೆಗಳನ್ನು ವಾಪಸ್ಸು ಪಡೆದಿಲ್ಲ ಎಂದು ಚಾಮರಸ ಮಾಲೀ ಪಾಟೀಲ್ ಆರೋಪಿಸಿದರು.

ಇಂತಹ ಪರಿಸ್ಥಿತಿಯಲ್ಲಿ ರೈತರ ಭೂಮಿ ಹಾಗೂ ಕೃಷಿ ಕ್ಷೇತ್ರವನ್ನು ಉಳಿಸುವ ಜವಾಬ್ದಾರಿ ಪ್ರತಿಯೊಬ್ಬರ ಮೇಲಿದೆ. ಈ ಹಿನ್ನೆಲೆ ರೈತರು ಹಾಗೂ ಜನಸಾಮಾನ್ಯರು ಜವಾಬ್ದಾರಿಯಿಂದ ವಿಮುಖರಾಗಬಾರದು ಎಂದು ಸಲಹೆ ನೀಡಿದರು.

ಅಂಬೇಡ್ಕರ್ ನೀಡಿರುವ ಸಂವಿಧಾನ ಬದಲಾಯಿಸುವ ಪ್ರಯತ್ನ ನಡೆಯುತ್ತಿದೆ, ರೈತರ ಸಾಲ ಮನ್ನಾ ಮಾಡುತ್ತಿಲ್ಲ, ಉದ್ಯೋಗ ಸೃಷ್ಟಿ ಭರವಸೆ ಹುಸಿಯಾಗಿದೆ ಎಂದು ಕೇಂದ್ರ ಸರ್ಕಾರದ ವಿರುದ್ಧ ಕಿಡಿಕಾರಿದರು.

ಪ್ರಗತಿಪರರು ಕಟ್ಟಿದ ಜನತಾದಳವನ್ನು ಹೆಚ್.ಡಿ.ದೇವೇಗೌಡ ಹಾಗೂ ಹೆಚ್.ಡಿ.ಕುಮಾರಸ್ವಾಮಿ ಅವರು ಕೋಮುವಾದಿ ಬಿಜೆಪಿಗೆ ಅಡ ಇಟ್ಟಿದ್ದಾರೆ. ಈ ಮೂಲಕ ರಾಜಕಾರಣ ಕಲುಷಿತವಾಗಿದ್ದು, ರೈತರು ಜಾಗೃತರಾಗಬೇಕು ಎಂದು ಚಾಮರಸ ಮಾಲೀ ಪಾಟೀಲ್ ಕಿವಿಮಾತು ಹೇಳಿದರು.

ದಿವಂಗತ ಕೆ.ಎಸ್.ಪುಟ್ಟಣ್ಣಯ್ಯ ಅವರು ರೈತರ ಸಮಸ್ಯೆ ಪರಿಹಾರಕ್ಕಾಗಿ ತೀವ್ರ ರೀತಿಯ ಹೋರಾಟ ಮಾಡಿದ್ದರು. ದಕ್ಷಿಣ ಕರ್ನಾಟಕಕ್ಕೆ ಮಾತ್ರ ಸೀಮಿತವಾಗಿದ್ದ ರೈತ ಸಂಘಟನೆಯನ್ನು ಉತ್ತರ ಭಾರತಕ್ಕೂ ವಿಸ್ತರಿಸಿದರು. ಇಂತಹ ಮೇರು ವ್ಯಕ್ತಿತ್ವದ ವ್ಯಕ್ತಿ ಪ್ರತಿಯೊಬ್ಬರಿಗೂ ಆದರ್ಶರಾಗಿದ್ದಾರೆ ಎಂದು ಅಭಿಪ್ರಾಯಪಟ್ಟರು. ರೈತರ ಭೂಮಿಯನ್ನು ಬಹುರಾಷ್ಟ್ರೀಯ ಕಂಪನಿಗಳಿಗೆ ಧಾರೆ ಎರೆದು ಹಣ ಪಡೆಯುತ್ತಿರುವ ಸರ್ಕಾರಗಳು ಸ್ವಾರ್ಥ ಮೆರೆಯುತ್ತಿವೆ. ರೈತರು ಸರ್ಕಾರದ ಈ ಧೋರಣೆಯ ವಿರುದ್ಧ ಹೋರಾಟ ಮಾಡಬೇಕು ಎಂದು ಚಾಮರಸ ಮಾಲೀ ಪಾಟೀಲ್ ಕರೆ ನೀಡಿದರು.

ಇದೇ ವೇಳೆ ಮಾತನಾಡಿದ ಸುನಿತಾ ಪುಟ್ಟಣ್ಣಯ್ಯ ಅವರು, ಕೆ.ಎಸ್.ಪುಟ್ಟಣ್ಣಯ್ಯ ಅವರ ವಿಚಾರ ಧಾರೆಗಳು ನಮಗೆ ಆದರ್ಶವಾಗಿದೆ. ಪುಟ್ಟಣ್ಣಯ್ಯ ಅವರ ಪ್ರತಿಮೆ ಅನಾವರಣಕ್ಕೆ ನೀವೆಲ್ಲಾ ಹೋರಾಟ ಮಾಡಿದ್ದು, ಇದಕ್ಕೆ ನಾವು ಚಿರಋಣಿಯಾಗಿದ್ದೇವೆ ಎಂದು ಹೇಳಿದರು.

ನಂತರ ಮಾತನಾಡಿದ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ, ಬಿಜೆಪಿ ಅಧಿಕಾರಕ್ಕೆ ಬಂದರೆ ರೈತರ ಸಂಪೂರ್ಣ ಸಾಲ ಮನ್ನ ಮಾಡುತ್ತೇವೆ ಎಂದು ಭರವಸೆ ನೀಡಿದ್ದರು. ಆದರೆ ಇದು ಕಾರ್ಯರೂಪಕ್ಕೆ ಬರಲಿಲ್ಲ ಎಂದು ಕಿಡಿಕಾರಿದರು. ಈ ವೇಳೆ ಕೆ.ಎಸ್.ಪುಟ್ಟಣ್ಣಯ್ಯ ಅವರ ಪ್ರತಿಮೆಯನ್ನು ಅನಾವರಣ ಗೊಳಿಸಲಾಯಿತು. ರೈತ ಸಂಘದ ಜಿಲ್ಲಾಧ್ಯಕ್ಷ ಹೊಸೂರು ಕುಮಾರ್, ಉಪಾಧ್ಯಕ್ಷ ಪ್ರಕಾಶ್ ಅರಸ್, ತಾಲೂಕು ಅಧ್ಯಕ್ಷ ಚಿಕ್ಕಣ್ಣ, ಮಲ್ಲೇಶ್, ಸಂಘಟನಾ ಕಾರ್ಯದರ್ಶಿ ಹೊಸಕೋಟೆ ಬಸವರಾಜು, ಒಡನಾಡಿ ಸಂಸ್ಥೆಯ ಪರುಶು, ಸ್ಟ್ಯಾನ್ಲಿ ಸೇರಿದಂತೆ ಹಲವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ರೈತರ ಹಲವು ಹಕ್ಕೊತ್ತಾಯಗಳು

ಅರಣ್ಯ ಇಲಾಖೆಯ ಕಿರುಕುಳ ತಪ್ಪಿಸಿ ಸಾಗುವಳಿ ಮಾಡುತ್ತಿರುವ ರೈತರನ್ನು ಸಂರಕ್ಷಿಸಬೇಕು. ಕಾಡು ಪ್ರಾಣಿಗಳಿಂದ ಬಲಿಯಾದ ಕುಟುಂಬಕ್ಕೆ 50 ಲಕ್ಷ ಪರಿಹಾರ ನೀಡಬೇಕು, ಕುಟುಂಬದ ಒಬ್ಬರಿಗೆ ಸರ್ಕಾರಿ ಉದ್ಯೋಗ ನೀಡಿ, ಅವರ ಮಕ್ಕಳಿಗೆ ಉಚಿತ ವಿದ್ಯಾಭ್ಯಾಸ ನೀಡಬೇಕು.

ಕೂಡಲೇ ಖರೀದಿ ಕೇಂದ್ರ ತೆರೆದು, ಭತ್ತ ಹಾಗೂ ಮೆಕ್ಕೆ ಜೋಳವನ್ನು ಎಂಎಸ್‌ಪಿ ದರದಲ್ಲಿ ಖರೀದಿಸಬೇಕು, ನೀರಾವರಿ ಯೋಜನೆಗಳನ್ನು ಕಾಲಮಿತಿಯಲ್ಲಿ ಪೂರ್ಣಗೊಳಿಸಿ, ನಾಲೆಗಳನ್ನು ಆಧುನೀಕರಣಗೊಳಿಸಬೇಕು, ಶೀಘ್ರವೇ ಚುಂಚನಕಟ್ಟೆ ಸಕ್ಕರೆ ಕಾರ್ಖಾನೆ ಆರಂಭಿಸಬೇಕು.

ಮೈಸೂರಿನ ಕೋಚನಹಳ್ಳಿ ಗ್ರಾಮದ ರೈತರ ಭೂಮಿಯನ್ನು ಕಡಿಮೆ ಬೆಲೆಗೆ ಖರೀದಿಸಿ, ಕೆಐಎಡಿಬಿ ಮೂಲಕ ಬಂಡವಾಳ ಶಾಯಿಗಳಿಗೆ ಮಾರಾಟ ಮಾಡುವುದನ್ನು ಸ್ಥಗಿತಗೊಳಿಸಬೇಕು.

ಮೈಸೂರು ವಿಮಾನ ನಿಲ್ದಾಣದ ವಿಸ್ತರಣೆಗೆ ಭೂಮಿ ನೀಡಿದ ರೈತರಿಗೆ ಪರ್ಯಾಯ ನಿವೇಶನ ನೀಡಬೇಕು, ಬಗರ್ ಹಕುಂ ಸಾಗುವಳಿದಾರರಿಗೆ ಸಾಗುವಳಿ ಚೀಟಿ ನೀಡಬೇಕು, ಮೈಕ್ರೋ ಫೈನಾನ್ಸ್ ಕಿರುಕುಳದಿಂದ ರೈತರನ್ನು ಪಾರು ಮಾಡಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು.

ರೈತರಿಗೆ ಆಡಳಿತ ವರ್ಗ ಮಾರುಕಟ್ಟೆ ಕಲ್ಪಿಸಬೇಕು

ರೈತರು–ವಿಜ್ಞಾನಿಗಳೊಂದಿಗೆ ಸಂವಾದದಲ್ಲಿ ಜಂಟಿ ಕೃಷಿ ನಿರ್ದೇಶಕ ಕೆ.ಹೆಚ್.ರವಿ ಅಭಿಮತ

ಮೈಸೂರು, ಡಿ.23(ಎಂಕೆ)– ರೈತರ ಸ್ಥಿತಿ–ಗತಿಗಳ ಬಗ್ಗೆ ಆಡಳಿತ ವರ್ಗ, ರಾಜಕಾರಣಿಗಳು, ಅಧಿಕಾರಿಗಳು ಗಮನಹರಿಸಬೇಕು. ರೈತರಿಗೆ ಸೂಕ್ತ ಮಾರುಕಟ್ಟೆ ವ್ಯವಸ್ಥೆ ಮಾಡಬೇಕು ಹಾಗೂ ಸಮರ್ಪಕವಾಗಿ ನೀರು ನಿರ್ವಹಣೆ ಬಗ್ಗೆ ಅರಿವು ಮೂಡಿಸಬೇಕು ಎಂದು ಜಂಟಿ ಕೃಷಿ ನಿರ್ದೇಶಕ ಕೆ.ಹೆಚ್.ರವಿ ತಿಳಿಸಿದರು.



ಮೈಸೂರು ನಾಗನಹಳ್ಳಿಯ ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ ರೈತ ದಿನಾಚರಣೆ ಅಂಗವಾಗಿ ಮಂಗಳವಾರ ನಡೆದ 'ನೈಸರ್ಗಿಕ ಕೃಷಿ' ಕುರಿತು ರೈತರು–ವಿಜ್ಞಾನಿಗಳೊಂದಿಗೆ ಸಂವಾದ ಕಾರ್ಯಕ್ರಮದಲ್ಲಿ ಜಂಟಿ ಕೃಷಿ ನಿರ್ದೇಶಕ ಕೆ.ಹೆಚ್.ರವಿ ಮಾತನಾಡಿದರು.


ಮೈಸೂರು ನಾಗನಹಳ್ಳಿಯ ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ ರೈತ ದಿನಾಚರಣೆ ಅಂಗವಾಗಿ ಕೃಷಿ ಇಲಾಖೆ, ಕೃಷಿ ತಂತ್ರಜ್ಞಾನ ನಿರ್ವಹಣಾ ಸಂಸ್ಥೆ, ಕೃಷಿ ತಂತ್ರಜ್ಞರ ಸಂಸ್ಥೆ, ಕರ್ನಾಟಕ ಪ್ರದೇಶ ಕೃಷಿಕ ಸಮಾಜ, ಸಾವಯವ ಕೃಷಿ ಸಂಶೋಧನಾ ಕೇಂದ್ರ ಮತ್ತು ವಿಸ್ತರಣಾ ಶಿಕ್ಷಣ ಘಟಕ, ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರ, ತೋಟಗಾರಿಕೆ ಮಹಾವಿದ್ಯಾಲಯ ಆಯೋಜಿಸಿದ್ದ 'ನೈಸರ್ಗಿಕ ಕೃಷಿ' ಕುರಿತು ರೈತರು–ವಿಜ್ಞಾನಿಗಳೊಂದಿಗೆ ಸಂವಾದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಕೃಷಿ ಕ್ಷೇತ್ರದ ಸಮಸ್ಯೆಗಳು, ಯಾಂತ್ರೀಕರಣ ಮಾಡಲು ಬೇಕಾದ ಸವಲತ್ತು, ರೈತರ ಆರ್ಥಿಕ ಸಬಲತೆ, ಖರ್ಚು ಕಡಿಮೆ ಮಾಡಿ, ಆದಾಯ ಹೆಚ್ಚಿಸುವುದು, ಮಾರುಕಟ್ಟೆ ವ್ಯವಸ್ಥೆ ಬಗ್ಗೆ ಬೆಳಕು ಚೆಲ್ಲಬೇಕು. ಇಂಜಿನಿಯರ್‌ಗಳು ಕೃಷಿ ಕ್ಷೇತ್ರಕ್ಕೆ ಬಂದು ಸಾಧನೆ ಮಾಡುತ್ತಿದ್ದಾರೆ. ಆದರೆ ಕೃಷಿಯಲ್ಲಿ ತಾಂತ್ರಿಕ ಜ್ಞಾನ ಪಡೆದವರು ವ್ಯವಸಾಯ ಮಾಡುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಸಹಕಾರಿ ಕೃಷಿ ವ್ಯವಸ್ಥೆ ಜಾರಿಯಾಗಬೇಕು: ಸಂವಾದ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷ ಕೆ.ಎಸ್.ಶಿವಕುಮಾರ್ ಮಾತನಾಡಿ, ರೈತರು ಪ್ರತಿನಿತ್ಯ ಸಂಕಷ್ಟ ಎದುರಿಸುತ್ತಾರೆ. ಕೆಲವೊಮ್ಮೆ ಪ್ರಕೃತಿಯೇ ಅವರ ವಿರುದ್ಧ ಇರುತ್ತದೆ. ಬೆಳೆಗಳಿಗೆ ರೋಗಗಳು ಕೂಡ ಕಾಡುತ್ತವೆ. ಪರಿಸ್ಥಿತಿ ಈ ರೀತಿ ಇರುವಾಗ ಚೀನಾದಲ್ಲಿ ಇರುವಂತೆ ಸಹಕಾರಿ ಕೃಷಿ ವ್ಯವಸ್ಥೆ ಜಾರಿಗೆ ಬಂದಲ್ಲಿ ಅನುಕೂಲವಾಗಬಹುದು ಎಂದರು.

ನಂತರ ನೈಸರ್ಗಿಕ ಕೃಷಿ ಕುರಿತು ವಿಜ್ಞಾನಿಗಳು ಹಾಗೂ ರೈತರ ನಡುವೆ ಸಂವಾದ ನಡೆಯಿತು. ಹೈದರಾಬಾದ್ ಇಕ್ರಿಸ್ಯಾಟ್ ನಿವೃತ್ತ ಉಪಮಹಾನಿರ್ದೇಶಕ ಡಾ.ಸಿ.ಎಲ್.ಲಕ್ಷ್ಮಿಪತಿಗೌಡ, ಕಳೆ ಸಂಶೋಧನಾ ನಿರ್ದೇಶನಾಲಯದ ನಿವೃತ್ತ ನಿರ್ದೇಶಕ ಡಾ.ಎನ್.ಟಿ.ಯದುರಾಜು, ನಾಗನಹಳ್ಳಿ ಸಾವಯವ ಕೃಷಿ ಸಂಶೋಧನಾ ಕೇಂದ್ರದ ಮುಖ್ಯಸ್ಥ ಡಾ.ಸಿ.ರಾಮಚಂದ್ರ, ಸುತ್ತೂರು ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥ ಡಾ.ಬಿ.ಎನ್.ಜ್ಞಾನೇಶ್, ಬೆಂಗಳೂರು ಕೃಷಿ ವಿವಿ ಸಮಗ್ರ ಕೃಷಿ ಪದ್ಧತಿ ಮುಖ್ಯಸ್ಥ ಡಾ.ಎಂ.ಟಿ.ಸಂಜಯ್, ಹುಣಸೂರು ಕೇಂದ್ರೀಯ ತಂಬಾಕು ಸಂಶೋಧನಾ ಕೇಂದ್ರದ ನಿವೃತ್ತ ಪ್ರಧಾನ ವಿಜ್ಞಾನಿ ಡಾ.ಎಂ.ಮಹದೇವಸ್ವಾಮಿ, ತೋಟಗಾರಿಕೆ ಮಹಾವಿದ್ಯಾಲಯದ ಮಣ್ಣು ವಿಜ್ಞಾನ ಸಹ ಪ್ರಾಧ್ಯಾಪಕ ಡಾ.ಕೆ.ಎಂ.ಶಿವಕುಮಾರ, ನೈಸರ್ಗಿಕ ಕೃಷಿಕರಾದ ಗೆಜ್ಜಯ್ಯನ ವಡ್ಡರಗುಂಡಿಯ ಬಿ.ಅಖಿಲ್, ವರಕೋಡು ಗೇಟ್‌ನ ಡಿ.ವಿ.ಪೃಥ್ವಿರಾಜ್ ಮತ್ತಿತರರಿದ್ದರು.

ಮಾಲಾರ್ಪಣೆ



ಡಾ.ವಿಷ್ಣುವರ್ಧನ್ ಅವರ ಸ್ಮರಣಾರ್ಥ ಉದ್ಬೂರು ಗೇಟ್ ಬಳಿ ವಿಷ್ಣು ಸ್ಮಾರಕದಲ್ಲಿ ಅವರ ಪ್ರತಿಮೆಗೆ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್‌ಖಾನ್ ಮಾಲಾ ರ್ಪಣೆ ಮಾಡಿದರು. ಪ್ರಕಾಶ್, ರಘುರಾಜೇ ಅರಸ್, ರಾಜೇಶ್, ರಂಗಸ್ವಾಮಿ, ಶಿವಲಿಂಗಯ್ಯ, ಅಜಯ್‌ಶಾಸ್ತ್ರಿ, ಗುರುರಾಜ್, ಮಹೇಂದ್ರ ಇನ್ನಿತರರಿದ್ದರು.

ಇಂದು ಗ್ರಾಹಕರ ದಿನಾಚರಣೆ

ಮೈಸೂರು,ಡಿ.23–ಅಖಿಲ ಭಾರ ತೀಯ ಗ್ರಾಹಕ ಪಂಚಾಯತ್ ಮೈಸೂರು ಘಟಕದಿಂದ ರಾಮಕೃಷ್ಣನಗರದ ಇ ಅಂಡ್ ಎಫ್ ಬ್ಲಾಕ್‌ನಲ್ಲಿರುವ ಹಿರಿಯರ ನಾಗರಿಕರ ಹಗಲು ಯೋಗಕ್ಷೇಮ ಕೇಂದ್ರದಲ್ಲಿ ನಾಳೆ(ಡಿ.24) ಬೆಳಗ್ಗೆ 11 ಗಂಟೆಗೆ ಗ್ರಾಹಕರ ದಿನಾಚರಣೆ ಏರ್ಪಡಿಸಲಾಗಿದೆ. ಮುಖ್ಯ ಅತಿಥಿಗಳಾಗಿ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಹಿರಿಯ ಸಮಾಜ ಸೇವಕ ಕೆ.ರಘುರಾಂ ವಾಜಪಾಯಿ, ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಮೈಸೂರು ಘಟಕದ ಅಧ್ಯಕ್ಷ ಸಿ.ಎಸ್. ಚಂದ್ರಶೇಖರ್, ಚಾಮುಂಡೇಶ್ವರಿ ನಗರ ಮಂಡಲದ ಬಿಜೆಪಿ ಅಧ್ಯಕ್ಷ ರಾಕೇಶ್ ಭಟ್ ಹಾಗೂ ಇನ್ನಿತರರು ಭಾಗವಹಿಸಲಿದ್ದಾರೆ.

ಮೈಸೂರು ಕೆ.ಆರ್.ಆಸ್ಪತ್ರೆ ಆವರಣದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ವರ್ಣಚಿತ್ರ ಅನಾವರಣ

ಮೈಸೂರು,ಡಿ.23(ಜಿಎ)–ಮೈಸೂರಿನ ಕೆ.ಆರ್.ಆಸ್ಪತ್ರೆ ಸಂಸ್ಥಾಪಕರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ವರ್ಣಚಿತ್ರವನ್ನು ಅನಾವರಣಗೊಳಿಸಲಾಯಿತು.

ವರ್ಣಚಿತ್ರವು 8 ಅಡಿ ಉದ್ದ ಹಾಗೂ 6 ಅಡಿ ಅಗಲದಿಂದ ಕೂಡಿದ್ದು, ಸುತ್ತಲೂ ಎಲ್‌ಇಡಿ ಲೈಟ್ ಅಳವಡಿಸಿರುವ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ವರ್ಣ ಚಿತ್ರವನ್ನು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಮಂಗಳವಾರ ಅನಾವರಣಗೊಳಿಸಿದರು.



ಮೈಸೂರಿನ ಕೆ.ಆರ್. ಆಸ್ಪತ್ರೆಯ ಸಂಸ್ಥಾಪಕರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ವರ್ಣಚಿತ್ರವನ್ನು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಮಂಗಳವಾರ ಅನಾವರಣಗೊಳಿಸಿದರು. ಶಾಸಕ ಕೆ.ಹರೀಶ್‌ಗೌಡ, ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಎಂಎಂಸಿ & ಆರ್‌ಐ ಡಾ.ಕೆ.ಆರ್.ದಾಕ್ಷಾಯಣಿ, ವೈದ್ಯಕೀಯ ಅಧೀಕ್ಷಕಿ ಡಾ.ಹೆಚ್.ಪಿ.ಶೋಭ ಇನ್ನಿತರರಿದ್ದರು.

ನಂತರ ಮಾತನಾಡಿದ ಅವರು, ಇತ್ತೀಚೆಗೆ ಮೈಸೂರು ಮೆಡಿಕಲ್ ಕಾಲೇಜಿನ ಡೀನ್ ಡಾ.ಕೆ.ಆರ್.ದಾಕ್ಷಾಯಿಣಿ ಮತ್ತು ವೈದ್ಯಕೀಯ ಅಧೀಕ್ಷಕಿ ಡಾ.ಹೆಚ್.ಪಿ.ಶೋಭ ಅವರು ಆಸ್ಪತ್ರೆ ಆವರಣದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ವರ್ಣ ಚಿತ್ರವನ್ನು ಅನಾವರಣಗೊಳಿಸುವಂತೆ ಆಹ್ವಾನಿಸಿದರು. ಆಸ್ಪತ್ರೆಯೊಂದಿಗೆ ಕುಟುಂಬಕ್ಕೆ ಭಾವನಾತ್ಮ ಬಾಂಧವ್ಯ ಇರುವುದರಿಂದ ಹಾಗೂ ಪೂರ್ವಜರ ಕೆಲಸಗಳನ್ನು ಮುಂದುವರೆಸುವ ಉದ್ದೇಶದಿಂದ ಸಂತೋಷದಿಂದ ಇಂದು ಅನಾವರಣಗೊಳಿಸಿದ್ದೇನೆ ಎಂದರು.

ಮೈಸೂರು ಸೇರಿದಂತೆ ಅಕ್ಕಪಕ್ಕದ ಜಿಲ್ಲೆಗಳ ಬಡ ರೋಗಿಗಳಿಗೆ ಕೆ.ಆರ್.ಆಸ್ಪತ್ರೆಯಲ್ಲಿ ಉತ್ತಮ ಚಿಕಿತ್ಸೆ ನೀಡುತ್ತಿದ್ದಾರೆ. ಕೆಲವು ಬಾರಿ ದೂರುಗಳು ಕೇಳಿ ಬರುತ್ತಿವೆ. ಅದನ್ನು ನಿವಾರಿಸಿ, ಮತ್ತಷ್ಟು ಉತ್ತಮ ಸೇವೆ ನೀಡಿ ಎಂದ ಅವರು, ಜನಪ್ರತಿನಿಧಿಗಳು ಈ ಬಗ್ಗೆ ಗಮಹರಿಸಿ ಎಂದು ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಮತ್ತು ಶಾಸಕ ಕೆ.ಹರೀಶ್‌ಗೌಡರಿಗೆ ತಿಳಿಸಿದರು.

ಕಾರ್ಯಕ್ರಮದಲ್ಲಿ ಶಾಸಕ ಕೆ.ಹರೀಶ್ ಗೌಡ, ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಎಂಎಂಸಿ & ಆರ್‌ಐ ಡಾ.ಕೆಆರ್.ದಾಕ್ಷಾಯಿಣಿ ಮತ್ತು ವೈದ್ಯಕೀಯ ಅಧೀಕ್ಷಕಿ ಡಾ.ಹೆಚ್.ಪಿ.ಶೋಭ, ಆಡಳಿತ ಮಂಡಳಿ ಸದಸ್ಯರಾದ ಡಾ.ಕೆ.ಮಹದೇವ್, ತನುಜಾ ಮಹೇಶ್, ಡಾ.ಸುನೀಲ್, ಆಡಳಿತಾಧಿಕಾರಿ ವಿ.ಆರ್.ಮಹೇಶ್, ಪ್ರಾಂಶುಪಾಲ ಡಾ.ಕೆ.ಸತೀಶ್, ಆರ್ಥಿಕ ಸಲಹೆಗಾರರಾದ ಎನ್.ನೂತನಶ್ರೀ, ಚೆಲುವಾಂಬ ಆಸ್ಪತೆ ಅಧೀಕ್ಷಕಿ ಆರ್.ಸುಧಾ, ಆರ್‌ಎಂಓ ಡಾ.ನಯಾಜ್ ಪಾಷ ಮತ್ತಿತರರಿದ್ದರು.

ಸರ್ಕಾರಿ, ಅನುದಾನಿತ ನೌಕರರಿಗೆ ಹಳೆಯ ನಿಶ್ಚಿತ ಪಿಂಚಣಿ ಯೋಜನೆ ಜಾರಿಗೆ ಮನವಿ



ಮೈಸೂರು, ಡಿ.23–ರಾಜ್ಯ ಸರ್ಕಾರಿ ನೌಕರರ ಪೈಕಿ 2006ರಿಂದೀಚೆಗೆ ನೇಮಕಗೊಂಡ ನೌಕರರಿಗೂ ಸರ್ಕಾರದ ಸವಲತ್ತು ಸಮಾನವಾಗಿ ನೀಡುವ ಮೂಲಕ ಸಮ ಸಮಾಜದ ಪರಿಕಲ್ಪನೆಯನ್ನು ಸಾಕಾರಗೊಳಿಸಬೇಕಿದೆ ಎಂದು ನಗರಪಾಲಿಕೆ ಮಾಜಿ ಸದಸ್ಯರೂ ಆದ ಅನಿಕೇತನ ಸೇವಾ ಟ್ರಸ್ಟ್ ಅಧ್ಯಕ್ಷ ಕೆ.ವಿ.ಮಲ್ಲೇಶ್ ತಿಳಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಸರ್ಕಾರ ಈ ನಿಟ್ಟಿನಲ್ಲಿ ಸರ್ಕಾರಿ ಹಾಗೂ ಅನುದಾನಿತ ನೌಕರರಿಗೆ ಹಳೆಯ ನಿಶ್ಚಿತ ಪಿಂಚಣಿಯನ್ನು ಜಾರಿ ಗೊಳಿಸುವ ಮೂಲಕ ನೌಕರರ ಅಂತ್ಯ ಕಾಲದ ಬದುಕಿಗೆ ಭದ್ರತೆ ಒದಗಿಸಬೇಕಿದೆ. ಪ್ರಸ್ತುತ ಖಾಸಗಿ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಯವರು ನೀಡುವ ಕನಿಷ್ಠ ತಿಂಗಳ ವೇತನಕ್ಕೆ ದುಡಿದು, ಸೇವೆಯಲ್ಲಿರುವಾಗ ವೇತ ನಾನುದಾನಕ್ಕೆ ಒಳಪಟ್ಟ ಸಿಬ್ಬಂದಿ ನಿವೃತ್ತಿಯ ಕೊನೆಯ ತಿಂಗಳಿನಲ್ಲಿ ಲಕ್ಷಾಂತರ ರೂಪಾಯಿ ವೇತನ ಪಡೆಯುತ್ತಿದ್ದರೂ, ನಿವೃತ್ತಿ ನಂತರ ಸರ್ಕಾರದಿಂದ ಪಿಂಚಣಿಯ ರೂಪದಲ್ಲಿ ಬಿಡಿಗಾಸು ದೊರೆಯುವುದಿಲ್ಲವೆಂದರೆ, ಕುಟುಂಬದ ಜೀವನ ನಿರ್ವಹಣೆ ಕಷ್ಟವಾಗುತ್ತದೆ. ನಿವೃತ್ತಿಯ ದಿನಗಳಲ್ಲಿ ಸಣ್ಣಪುಟ್ಟ ಖಾಯಿಲೆಗಳಿಗೂ ಸಹ ಖರ್ಚು ಮಾಡುವಷ್ಟು ಶಕ್ತಿ ಕಳೆದುಕೊಂಡಿರುತ್ತಾರೆ. ಅನುದಾನಿತ ನೌಕರರು ಶಿಕ್ಷಕ ವೃತ್ತಿಯಲ್ಲಿ ಇದ್ದು, ಗೌರವ ಸಂಪಾದನೆ ಮಾಡಿದ್ದು, ಈಗ ಆಸ್ಪತ್ರೆ, ವಿಶ್ವವಿದ್ಯಾನಿಲಯ, ಬ್ಯಾಂಕು, ಕೈಗಾರಿಕೆ, ಮತ್ತಿತರ ಕಡೆ ಗಾರೆ ಕೆಲಸ, ವಾಚ್ ಮ್ಯಾನ್, ಸೆಕ್ಯೂರಿಟಿ ಆಗಿ ಕೆಲಸ ನಿರ್ವಹಿಸುತ್ತಿರುವುದು ನೋವಿನ ಸಂಗತಿ.

ಬಸವರಾಜ ಬೊಮ್ಮಾಯಿ ಅವರ ಸರ್ಕಾರದ ಅವಧಿಯಲ್ಲಿ ಪಿಂಚಣಿ ವಂಚಿತ ನೌಕರರು–ನಿವೃತ್ತರೆಲ್ಲ ಸೇರಿ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನದಲ್ಲಿ 141 ದಿನಗಳ ಕಾಲ ಅಹೋರಾತ್ರಿ ಧರಣಿ ಮಾಡಿದರೂ, ಬೇಡಿಕೆ ಈಡೇರದೇ ಇದ್ದಾಗ ಬಾದಾಮಿಯ ಪಟ್ಟದಕಲ್ಲು ನಿವಾಸಿ, ನಿವೃತ್ತ ನೌಕರ ಸಿದ್ದಯ್ಯ ಹಿರೇಮಠ ಅವರು ವಿಷ ಸೇವಿಸಿ ಪ್ರಾಣ ಕಳೆದುಕೊಂಡರು. ಈಗಿನ ಮುಖ್ಯಮಂತ್ರಿ ಸಿದ್ದರಾಮಯ್ಯ ನವರು ಮೃತ ಸಿದ್ದಯ್ಯ ಹಿರೇಮಠ ಅವರ ಮನೆಗೆ ಹೋಗಿ ಕುಟುಂಬದವರಿಗೆ 2 ಲಕ್ಷ ರೂ. ನೀಡಿ, ಸಾಂತ್ವನ ಹೇಳಿ, ಅನುದಾನಿತ ನೌಕರರಿಗೆ ಪಿಂಚಣಿಯನ್ನು ಜಾರಿಗೊಳಿಸಿ ಎಂದು ಅಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ ಬರೆದಿದ್ದರು. ಹೋರಾಟದ ಸಂದರ್ಭದಲ್ಲಿ ಮುಂಚೂಣಿಯಲ್ಲಿದ್ದ ಸಿದ್ದಯ್ಯ ಹಿರೇಮಠ ವಿಷ ಸೇವಿಸಿ ಪ್ರಾಣ ಕಳೆದುಕೊಂಡಾಗ, ಧರಣಿಯಲ್ಲಿ ದ್ದವರು ಬಹಳ ಆತಂಕಕ್ಕೆ ಒಳಗಾದ ನಮಗೆ ವಿಧಾನಪರಿಷತ್ ಸದಸ್ಯ ಪುಟ್ಟಣ್ಣ, ಇಂದಿನ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವೇದಿಕೆಯಲ್ಲಿ ಧರಣಿ ವಾಪಸ್ಸು ಪಡೆಯುವ ಸೂಚನೆ ಮತ್ತು ಮುಂದೆ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಾಗ ಹಳೆಯ ನಿಶ್ಚಿತ ಪಿಂಚಣಿಯನ್ನು ಜಾರಿಗೊಳಿಸಲಾಗುವ ಭರವಸೆ ನೀಡಿದ್ದು, ಅದು ಅನುಷ್ಠಾನಕ್ಕೆ ಬರಬೇಕಿದೆ ಎಂದು ಹೇಳಿದ್ದಾರೆ.

ನಾಳೆ ಖೋ–ಖೋ ತಂಡಗಳ ಆಯ್ಕೆ ಪ್ರಕ್ರಿಯೆ

ಮೈಸೂರು, ಡಿ.23– ಕರ್ನಾಟಕ ಅಮೆಚೂರು ಖೋ–ಖೋ ಸಂಸ್ಥೆ ವತಿಯಿಂದ ನಡೆಯುವ ರಾಜ್ಯ ಮಟ್ಟದ ಪಂದ್ಯಾವಳಿಗೆ ಮೈಸೂರು ಜಿಲ್ಲಾ ತಂಡ ವನ್ನು ಆಯ್ಕೆ ಮಾಡಬೇಕಾಗಿರುವು ದರಿಂದ ಪುರುಷರ ಹಾಗೂ ಮಹಿಳೆ ಯರ ಖೋ ಖೋ ತಂಡಗಳ ಆಯ್ಕೆ ಪ್ರಕ್ರಿಯೆಯನ್ನು ಡಿ.25ರಂದು ಬೆಳಗ್ಗೆ 10 ಗಂಟೆಗೆ ಬೋಗಾದಿಯಲ್ಲಿರುವ ಹರಿ ವಿದ್ಯಾಲಯ ಸಂಸ್ಥೆಯ ಆಟದ ಮೈದಾನ ದಲ್ಲಿ ನಡೆಯಲಿದೆ. ಆಸಕ್ತ ಖೋ ಖೋ ಆಟಗಾರರು ಭಾಗವಹಿಸಬಹುದು.

ಈ ಆಯ್ಕೆಯಲ್ಲಿ ಭಾಗವಹಿಸುವ ಕ್ರೀಡಾಪಟುಗಳು ತಮ್ಮ ಮೂಲ ಆಧಾರ್ ಕಾರ್ಡ್ ಪತ್ರವನ್ನು ಕಡ್ಡಾಯವಾಗಿ ತರುವುದು. ಹೆಚ್ಚಿನ ಮಾಹಿತಿಗಾಗಿ ಮಹದೇವಪ್ಪ ಮೊಬೈಲ್ ಸಂಖ್ಯೆ 8123087678 ಸಂಪರ್ಕಿಸಬಹುದು.

ಮೈಸೂರು ಬಿಷಪ್ ಫ್ರಾನ್ಸಿಸ್ ಸೆರಾವೊರ ಕ್ರಿಸ್‌ಮಸ್ ಸಂದೇಶ



ಪ್ರಭು ಯೇಸು ಬೆತ್ಲೆಹೇಮಿನಲ್ಲಿ ಗೋದಲಿಯಲ್ಲಿ ಜನಿಸಿದಾಗ, 'ಮಹೋನ್ನತದಲ್ಲಿ ದೇವರಿಗೆ ಮಹಿಮೆ, ಭುವಿಯಲ್ಲಿ ಸುಮನಸ್ಕರಿಗೆ ಶಾಂತಿ ಎಂಬ ದೇವದೂತರ ಗಾನ ಆಗಸದಲ್ಲಿ ಮೊಳಗಿತು. ಈ ಮಹೋನ್ನತ ಕ್ಷಣದಲ್ಲಿ ಗೋದಲಿಯಲ್ಲಿನ ಬಡತನ ಮತ್ತು ಅಬಲ ಶಿಶುವು ಪ್ರಕಟಿಸುವ ದೇವರ ಮಹಿಮೆಯಾದರೂ ಏನು? ಈ ದಿವ್ಯ ಘಟನೆಯ ಮೂಲಕ ಸ್ವರ್ಗವನ್ನೂ ಭುವಿಯನ್ನೂ ಸೃಜಿಸಿದ ದೇವರು ಮಾನವ ಕುಲವನ್ನು ಪಾಪ, ದುಃಖ ಮತ್ತು ಪ್ರತಿಯೊಂದು ರೀತಿಯ ದುಷ್ಟತನದಿಂದ ರಕ್ಷಿಸಲು ಮಾನವನಾಗಿ ಜನಿಸಿದರು. ದೇವರ ಮಹಿಮೆ ಭುವಿಯಲ್ಲಿ ಬೆಳಗಿದೆ. ದೇವರೊಂದಿಗೆ ಆತ್ಮೀಯತೆಯ ಭಾವ ಮೂಡಿಸಿ, ಒಳ್ಳೆಯತನ, ಮೃದುತ್ವ ಮತ್ತು ಕರುಣೆಯನ್ನು ಆಂತರಿಕವಾಗಿ ಸವಿಯುವುದರಿಂದ ಉಂಟಾಗುವ ನೆಮ್ಮದಿಯ ಭಾವನೆ ಕ್ರಿಸ್ತ ಜಯಂತಿಯಾಗಿದೆ.

ಕ್ರಿಸ್ತ ಜಯಂತಿ ನಾವನುಭವಿಸುವ ಆಂತರಿಕ ಸ್ವಾತಂತ್ರ್ಯ ಮತ್ತು ಅನಿರ್ವಚನೀಯ ಸಂತೋಷದ ಭಾವನೆ. ಕ್ರಿಸ್ತ ಜಯಂತಿ ಪ್ರತಿಯೊಂದು ರೀತಿಯ ಬಂಧನದಿಂದ ವಿಮೋಚನೆಗೊಂಡ, ಪ್ರತಿ ಗಾಯದಿಂದ ಗುಣಮುಖರಾದ, ಒಡೆದ ಸಂಬಂಧಗಳಿಂದ ಚೇತರಿಸಿಕೊ೦ಡ ಆಳವಾದ ಭಾವನೆಯಾಗಿದೆ. ನಮ್ಮ ಸ್ವಾರ್ಥ, ಅಹಂಕಾರ ಸತ್ತಾಗ ಮತ್ತು ಸಂಪೂರ್ಣವಾಗಿ ದೇವರಿಗಾಗಿ ಮತ್ತು ಪರರಿಗಾಗಿ ಬದುಕಲು ಕಲಿತಾಗ ನಾವು ಅನುಭವಿಸುವ ರೂಪಾಂತರವೇ–ಕ್ರಿಸ್ಮಸ್. ಈ ರೂಪಾಂತರವು ನಿಜವಾಗಿಯೂ ದೇವರ ಮಹಿಮೆಯಾಗಿದೆ ಮತ್ತು ಸಹೋದರತ್ವ ಮತ್ತು ಶಾಂತಿಯ ಅನುಭವವನ್ನು ನೀಡುತ್ತದೆ.

'ಎಲ್ಲಿ ಮನಸ್ಸು ಭಯವಿಲ್ಲದಿರುವುದೋ ಮತ್ತು ತಲೆ ಎತ್ತಿ ನಿಲ್ಲುವುದೋ, ಜ್ಞಾನವು ಮುಕ್ತವಾಗಿದೆಯೋ ಮತ್ತು ವಿಶ್ವವು ಕಿರಿದಾದ ದೇಶೀಯ ಗೋಡೆಗಳಿಂದ ತುಂಡುಗಳಾಗಿ ಒಡೆಯದಿರುವುದೋ' ಎಂಬ ರವೀಂದ್ರನಾಥ ಠಾಗೋರ್ ನುಡಿದ ಮಾತುಗಳು ಕ್ರಿಸ್‌ಮಸ್‌ನ ನಿಜವಾದ ಸಂದೇಶಕ್ಕೆ ಸನಿಹವಾಗಿವೆ. ಭೂಮಿಯ ಮೇಲೆ ಕ್ರಿಸ್ತನು ಸ್ಥಾಪಿಸಲು ಬಂದದ್ದು ಇದೇ ಪ್ರೀತಿಯ ದೈವೀ ಸಾಮ್ರಾಜ್ಯವನ್ನು. ಆದ್ದರಿಂದ, ಕ್ರಿಸ್‌ಮಸ್ ನೈಜ ಕ್ರಿಸ್‌ಮಸ್ ಆಗ ಬೇಕಾದರೆ, ನಾವು ಕೇವಲ ವ್ಯಾಪಾರೀ ಕರಣ, ವಾಣಿಜ್ಯೀಕರಣ, ಆಕರ್ಷಕ ಬಾಹ್ಯತೆ, ನಿಷ್ಪ್ರಯೋಜಕ ವಿಧಿವಿಧಾನಗಳು, ಭಾವನಾ ಶೂನ್ಯ ಕಾನೂನು ಬದ್ಧತೆ ಮತ್ತು ಕಠಿಣ ಮತಾಂಧತೆಯನ್ನು ಮೀರಿ ನೋಡಬೇಕು. ಬೆತ್ಲೆಹೆಮಿನ ಪುಟ್ಟಕಂದ ಹೊರಸೂಸುವ ಶುದ್ಧ ಪ್ರೀತಿ, ಕಲ್ಮಶವಿಲ್ಲದ ಸಂತೋಷ, ನಿಷ್ಕಪಟ ಮುಗ್ಧತೆ, ಅಪಾರ ಮೃದು ಭಾವನೆ, ಹೇರಳವಾದ ಆತ್ಮೀಯತೆ ಮತ್ತು ಆಳವಾದ ಶಾಂತಿಯಿಂದ ನಮ್ಮ ಹೃದಯಗಳಲ್ಲಿ ಸ್ಪರ್ಶಿಸಲ್ಪಡಲು ಹಾತೊರೆಯಬೇಕು. ಆಗ ನಿಜವಾಗಿಯೂ ಒಡೆದ ಸಂಬಂಧಗಳ, ಗಾಯಗೊಂಡ ಪ್ರಪಂಚವು ಶಾಂತಿ, ಸ್ವಾತಂತ್ರ್ಯ, ಸತ್ಯ, ನ್ಯಾಯ, ಸಮಾನತೆ ಮತ್ತು ಸಹೋದರತ್ವದ ತಾಣವಾಗುವುದು. ಆಗ ನಿಜವಾದ ಕ್ರಿಸ್ತ ಜಯಂತಿಯಾಗುವುದು ಮತ್ತು ಈ ನೈಜ ಕ್ರಿಸ್ತ ಜಯಂತಿಯ ಸಂಭ್ರಮ ಶಾಶ್ವತವಾಗಿರುವುದು.

ಧರ್ಮವನ್ನು ದುರುದ್ದೇಶಪೂರಿತವಾಗಿ, ನಾಜೂಕು ಮತ್ತು ಬೆದರಿಕೆಯಿಂದ ವಿಭಜನೆಗಳನ್ನು ಸೃಷ್ಟಿಸಲು ಮತ್ತು ದ್ವೇಷವನ್ನು ಹರಡಲು ಬಳಸಲಾಗುತ್ತಿದೆ. ಹಿಂಸೆ, ಗುಂಪು ಹಲ್ಲೆ, ಅಮಾನುಷೀಕರಣ ಮತ್ತು ವಿನಾಶಕ್ಕೆ ಕಾರಣ ವಾಗುತ್ತಿರುವ ಪ್ರಸ್ತುತ ಪರಿಸ್ಥಿತಿಯಲ್ಲಿ ಕ್ರಿಸ್ತ ಜಯಂತಿಯ ಭಾಂದವ್ಯ, ಭ್ರಾತೃತ್ವ ನಮಗಿಂದು ಅವಶ್ಯಕವಾಗಿದೆ, ಈ ಕ್ರಿಸ್ತ ಜಯಂತಿಯ ಸಂಭ್ರಮದಲ್ಲಿ, ಕ್ರಿಸ್ತನು ಪ್ರತಿಯೊಂದು ಹೃದಯದಲ್ಲಿ ಮತ್ತು ಪ್ರತಿಯೊಂದು ಮನೆಯಲ್ಲಿ ಮತ್ತೆ ಜನಿಸಲಿ ಎಂಬುದು ನನ್ನ ಆಶಯ ಹಾಗೂ ಹೆಬ್ಬಯಕೆ. ಕ್ರಿಸ್‌ಮಸ್ ತರುವ ಶಾಂತಿ, ಸಂತೋಷ ಮತ್ತು ಪ್ರೀತಿಯು ಪ್ರತಿಯೊಬ್ಬರನ್ನು ಆಲಂಗಿಸಿ ಹೊಸ ವರ್ಷದ ಪ್ರತಿ ಕ್ಷಣದಲ್ಲೂ ಜೀವನದಲ್ಲಿ ಆವರಿಸಲಿ. ಕ್ರಿಸ್ತಸೌರಭದ ಕಂಪು ನಿಮ್ಮ ಮನ ಮನೆಗಳನ್ನು ಆವರಿಸಲಿ.

ಫ್ರಾನ್ಸಿಸ್ ಸೆರಾವೊ SJ

ಧರ್ಮಾಧ್ಯಕ್ಷರು, ಮೈಸೂರು ಧರ್ಮಕ್ಷೇತ್ರ.

ಮೈಸೂರು ಮಿತ್ರ

ಬುಧವಾರ 24 ಡಿಸೆಂಬರ್ 2025

ಹಿಂದೂ ಯುವಕನ ಹತ್ಯೆ ಖಂಡಿಸಿ ಪಂಜಿನ ಮೆರವಣಿಗೆ



ಹಿಂದೂ ಯುವಕನ ಹತ್ಯೆ ಖಂಡಿಸಿ ಪ್ರತಿಭಟನೆ ನಡೆಸಲಾಯಿತು.

ಮಂಡ್ಯ, ಡಿ.23– ಬಾಂಗ್ಲಾದೇಶದಲ್ಲಿ ಹಿಂದೂ ಯುವಕನ ಹತ್ಯೆ ಖಂಡಿಸಿ ನಗರದ ಪೂರ್ವ ಪೊಲೀಸ್ ಠಾಣೆ ವ್ಯಾಪ್ತಿಯ ಅರಕೇಶ್ವರ ಬಡಾವಣೆ ಮುಖ್ಯ ರಸ್ತೆಯಲ್ಲಿ ಹಿಂದೂ ಹಿತರಕ್ಷಣಾ ವೇದಿಕೆ ಕಾರ್ಯಕರ್ತರು ಪಂಜಿನ ಮೆರವಣಿಗೆ ನಡೆಸಿದರು.

ನಗರದ ಗುತ್ತಲು ಸಮೀಪದ ಅರಕೇಶ್ವರ ಬಡಾವಣೆ ಮುಖ್ಯ ರಸ್ತೆಯಲ್ಲಿರುವ ಶ್ರೀಆಂಜನೇಯ ದೇವಾಲಯದಲ್ಲಿ ಜಮಾವಣೆಗೊಂಡ ಹಿಂದೂ ಹಿತರಕ್ಷಣಾ ವೇದಿಕೆ ಕಾರ್ಯಕರ್ತರು, ಹಿಂಸಾಚಾರ ವಿರೋಧಿಸಿ ಘೋಷಣೆ ಕೂಗಿ ಹಾಗೂ ಯುವಕನ ಹತ್ಯೆ ಮಾಡಿದ ಕಿಡಿಗೇಡಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಹಿಂದೂ ಹಿತರಕ್ಷಣಾ ವೇದಿಕೆ ಸಂಚಾಲಕ ಹಾಲಹಳ್ಳಿ ವಸಂತಕುಮಾರ್ ಮಾತನಾಡಿ, ಬಾಂಗ್ಲಾದೇಶ ಸೇರಿದಂತೆ ಮುಸ್ಲಿಂ ರಾಷ್ಟ್ರಗಳಲ್ಲಿ ಅಲ್ಪ ಸಂಖ್ಯಾತರಾಗಿರುವ ಹಿಂದೂಗಳ ಮೇಲೆ ನಿರಂತರ ಹಲ್ಲೆ, ಹಿಂಸಾಚಾರ, ಹತ್ಯೆಗಳು ನಡೆಯುತ್ತಿವೆ ಎಂದು ಕಿಡಿಕಾರಿದರು.

ಬಾಂಗ್ಲಾದೇಶದಲ್ಲಿ ಭಾರತ ವಿರೋಧಿ ಪ್ರತಿಭಟನೆಗಳ ನಡುವೆ ಇಸ್ಲಾಂ ಧರ್ಮ ಅವಮಾನಿಸಿದ ಆರೋಪದ ಮೇಲೆ ಮೈಮೆನ್ಸಿಂಗ್ ಜಿಲ್ಲೆಯ ಬಾಲುಕಾ ಉಪ ಜಿಲ್ಲಾದಲ್ಲಿ ನಡೆದ ಗುಂಪು ಸಂಘರ್ಷದಲ್ಲಿ ಹಿಂದೂ ಯುವಕನ ಹತ್ಯೆ ಮಾಡಲಾಗಿದೆ. ಅಲ್ಲದೇ 30 ವರ್ಷದ ದೀಪು ಚಂದ್ರಾಸ್ ಅವರ ಶವವನ್ನು ಸುಟ್ಟು ಹಾಕಿದ್ದಾರೆ ಎಂದು ಆರೋಪಿಸಿದರು.

ಅಲ್ಲಿನ ಹಿಂದೂಗಳ ಮೇಲೆ ಎಲ್ಲಾ ರೀತಿಯ ಹಿಂಸೆ, ಬೆದರಿಕೆ, ಬೆಂಕಿ ಹಚ್ಚುವಿಕೆ ಮತ್ತು ಆಸ್ತಿ ನಾಶವನ್ನು ಬಲವಾಗಿ ಖಂಡಿಸುತ್ತೇವೆ. ಅಲ್ಲಿನ ಸರ್ಕಾರ ಹಿಂದೂಗಳಿಗೆ ಸೂಕ್ತ ರಕ್ಷಣೆ ನೀಡಿ, ಕಿಡಿಕೇಡಿಗಳಿಗೆ ಮರಣ ದಂಡನೆ ವಿಧಿಸಬೇಕು ಎಂದು ಆಗ್ರಹಿಸಿದರು.

ಇದೇ ವೇಳೆ ಮುಖ್ಯರಸ್ತೆಯಲ್ಲಿ ಸಾಗಿದ ಪಂಜಿನ ಮೆರವಣಿಗೆ ಗುತ್ತಲು ಸರ್ಕಾರಿ ಶಾಲೆವರೆಗೆ ಸಾಗಿ, ಮಾನವ ಸರಪಳಿ ನಿರ್ಮಿಸಿ, ಸಂತಾಪ ಸೂಚಿಸಿ ಸಮಾಪ್ತಿಗೊಳಿಸಿದರು. ಈ ವೇಳೆ ಪೊಲೀಸರು ಬಿಗಿ ಬಂದೋಬಸ್ತ್ ಕೈಗೊಂಡಿದ್ದರು.

ಮೆರವಣಿಗೆಯಲ್ಲಿ ಹಿಂದೂ ಹಿತ ರಕ್ಷಣಾ ವೇದಿಕೆ ಮುಖಂಡರಾದ ಪ್ರದೀಪ್, ವಿವೇಕ್, ಹೆಚ್.ಆರ್. ಅಶೋಕ್ ಕುಮಾರ್, ಪ್ರಸನ್ನ, ಚಂದ್ರ, ಶಿವಕುಮಾರ್ ಆರಾಧ್ಯ, ಜವರೇಗೌಡ, ನಂದೀಶ್, ಯೋಗೇಶ್, ಜೀವಧಾರೆ ನಟರಾಜು ಮತ್ತಿತರರಿದ್ದರು.

ಸಮಾಜದ ನಿಸ್ವಾರ್ಥ ಕಾಯಕಯೋಗಿ ರೈತ

ಮಂಡ್ಯ, ಡಿ.23– ಸಮಾಜದಲ್ಲಿ ರೈತರು ಕಾಯಕಯೋಗಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ರೈತರು ಕೆಲಸದಲ್ಲಿ ನಿಸ್ವಾರ್ಥ ಮನೋಭಾವ ಮತ್ತು ವೃತ್ತಿ ನಿಷ್ಠೆ ತೋರುತ್ತಾ ಯಾವುದೇ ಕೀರ್ತಿ ಬಯಸದೆ ಸಮಾಜದ ಹಿತಕ್ಕಾಗಿ ಶ್ರಮಿಸುತ್ತಿದ್ದಾರೆ ಎಂದು ಜಿಲ್ಲಾಧಿಕಾರಿ ಡಾ.ಕುಮಾರ್ ತಿಳಿಸಿದರು.

ಜಿಪಂ ಕಾವೇರಿ ಸಭಾಂಗಣದಲ್ಲಿ ನಡೆದ ರಾಷ್ಟ್ರೀಯ ರೈತ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ರೈತರನ್ನು ಕುಗ್ಗಿಸುವ ಕೆಲಸವಾಗುತ್ತಿದೆ. ಇದು ದೇಶದ ಹಿತಕ್ಕೆ ಮಾರಕವಾಗಿದ್ದು, ರೈತರನ್ನು ಹಿಗ್ಗಿಸುವ ಕೆಲಸವಾಗಬೇಕಿದೆ. ರೈತರು ಬೆಳೆದ ಬೆಳೆಗಳಿಗೆ ಸಮರ್ಪಕ ವೈಜ್ಞಾನಿಕ ಬೆಲೆ ದೊರೆತಾಗ ಮಾತ್ರ ರೈತರ ಅಭಿವೃದ್ಧಿ ಸಾಧ್ಯ ಎಂದರು.

ರೈತರಿಲ್ಲದ ಪ್ರಪಂಚ ಊಹಿಸಲು ಸಾಧ್ಯವಿಲ್ಲ. ರೈತರ ಅಭಿವೃದ್ಧಿ ಮತ್ತು ಏಳಿಗೆಗಾಗಿ ಪ್ರತಿಯೊಬ್ಬರೂ ಶ್ರಮಿಸಬೇಕು. ಅನ್ನದಾತನನ್ನು ಎಲ್ಲರೂ ಸ್ಮರಿಸಿ ಗೌರವಿಸಬೇಕು. 1930ರಲ್ಲಿ ರಾಷ್ಟ್ರಕವಿ ಕುವೆಂಪು ಅವರು ತಮ್ಮ ಕೊಳಲು ಎನ್ನುವ ಕವನ ಸಂಕಲನದಲ್ಲಿ ರೈತ ಗೀತೆ ಬರೆದಿದ್ದು, ಅದರ ಮಹತ್ವವನ್ನು ಅರ್ಥೈಸಿಕೊಳ್ಳಬೇಕು ಎಂದರು.

ಆಧುನಿಕ ಜಗತ್ತಿನಲ್ಲಿ ರೈತರಿಗೆ ದೊರೆಯಬೇಕಾದ ಮನ್ನಣೆ ದೊರೆಯುತ್ತಿಲ್ಲ ಎನ್ನುವುದು ದುಃಖಕರ ಸಂಗತಿ. ಆಧುನಿಕತೆಗೆ ರೈತರು ಹೊಂದಿಕೊಳ್ಳಲು ತಾಂತ್ರಿಕ ಮತ್ತು ವೈಜ್ಞಾನಿಕ ಉಪಕ್ರಮಗಳನ್ನು ತಮ್ಮ ಕೃಷಿ ಪದ್ಧತಿಯಲ್ಲಿ ಅಳವಡಿಸಿಕೊಳ್ಳಬೇಕು. ದೇಶದ ಆರ್ಥಿಕತೆಗೆ ರೈತರ ಕೊಡುಗೆ ಅಪಾರ ಎಂದರು.

ಮಂಡ್ಯ ಕೃಷಿ ಪ್ರಧಾನ ಜಿಲ್ಲೆ. ಜಿಲ್ಲೆಯ ರೈತರು ಸಹ ನಮ್ಮ ಆರ್ಥಿಕತೆಗೆ ತಮ್ಮದೇ ಆದ ಕೊಡುಗೆ ನೀಡುತ್ತಿದ್ದಾರೆ. ರೈತರು ವೈಜ್ಞಾನಿಕತೆಯನ್ನು ಕೃಷಿಯಲ್ಲಿ ಅಳವಡಿಸಿಕೊಂಡು ಪರ್ಯಾಯ ಬೆಳೆಗಳನ್ನು ಬೆಳೆಯಬೇಕು. ಮಣ್ಣಿನ ಗುಣಮಟ್ಟವನ್ನು ಹೆಚ್ಚಿಸಿಕೊಳ್ಳಬೇಕು. ಕಬ್ಬು, ಭತ್ತ ಬಿಟ್ಟು ವಿವಿಧ ವೈಜ್ಞಾನಿಕ ಬೆಳೆಗಳನ್ನು ಬೆಳೆಯುವ ನಿಟ್ಟಿನಲ್ಲಿ ಕೃಷಿ ಕ್ಷೇತ್ರದಲ್ಲಿ ಇನ್ನಷ್ಟು ಸಂಶೋಧನೆಗಳು ನಡೆಯಬೇಕು ಎಂದು ಅಭಿಪ್ರಾಯಪಟ್ಟರು.

ರೈತರ ಕ್ಷೇಮಾಭಿವೃದ್ಧಿಗಾಗಿ ಸರ್ಕಾರ ಅನೇಕ ಕಾರ್ಯಕ್ರಮ ರೂಪಿಸಿದೆ. ಎಲ್ಲಾ ಕಾರ್ಯಕ್ರಮಗಳನ್ನು ರೈತರು ಸಮರ್ಪಕವಾಗಿ ಸದುಪಯೋಗಪಡಿಸಿ ಕೊಂಡು ಪ್ರಗತಿ ಕಾಣಬೇಕು ಎಂದರು. ಕಾರ್ಯಕ್ರಮದಲ್ಲಿ ಕೃಷಿ ಇಲಾಖೆ ಜಂಟಿ ನಿರ್ದೇಶಕ ಅಶೋಕ್, ಜಿಲ್ಲಾ ಕೃಷಿಕರ ಸಮಾಜದ ಅಧ್ಯಕ್ಷ ಸಿ.ಎಂ. ನಾಗರಾಜು, ಕಬ್ಬಿನ ಗಾಣದ ಮಾಲೀಕರ ಸಂಘದ ಅಧ್ಯಕ್ಷ ಸೋಮಶೇಖರ್‌ಗೌಡ, ರೈತರ ಪಾಠ ಶಾಲೆಯ ಸತ್ಯಮೂರ್ತಿ ಸೇರಿದಂತೆ ಇನ್ನಿತರರಿದ್ದರು.



ಕಾರ್ಯಕ್ರಮವನ್ನು ಜಿಲ್ಲಾಧಿಕಾರಿ ಡಾ.ಕುಮಾರ್ ಉದ್ಘಾಟಿಸಿದರು.

ಪಾಲಹಳ್ಳಿಯಲ್ಲಿ ಪುಸ್ತಕ ಗೂಡು ಉದ್ಘಾಟನೆ



ಶ್ರೀರಂಗಪಟ್ಟಣ ತಾಲೂಕಿನ ಪಾಲಹಳ್ಳಿ ಬಸ್ ನಿಲ್ದಾಣದಲ್ಲಿ ಪ್ರಯಾಣಿಕರಿಗಾಗಿ ನಿರ್ಮಿಸಿರುವ ಪುಸ್ತಕ ಗೂಡನ್ನು ಗ್ರಾಪಂ ಅಧ್ಯಕ್ಷೆ ಜಯಲಕ್ಷ್ಮಿ ಬಿ.ನಾರಾಯಣ್ ಉದ್ಘಾಟಿಸಿದರು. ಈ ವೇಳೆ ಮಾಜಿ ಎಂಡಿಸಿಸಿ ಬ್ಯಾಂಕ್ ನಿರ್ದೇಶಕ ಪಿ.ಎಸ್.ಚಂದ್ರಶೇಖರ್, ಜೆಡಿಎಸ್ ಮುಖಂಡರಾದ ಪೈಲ್ವಾನ್ ಮುಕುಂದ, ರಮೇಶ್ ಬಾಬು, ಪಿಎಸಿಎಸ್ ಅಧ್ಯಕ್ಷ ಎಸ್.ಭೈರೇಶ್ವರ, ಗ್ರಾಪಂ ಸದಸ್ಯರು, ಪಿಡಿಓ ಹಾಗೂ ಕಾರ್ಯದರ್ಶಿ ಉಪಸ್ಥಿತರಿದ್ದರು.

ರೈತರು ಭೂಮಿ ಮಾರಾಟ ಮಾಡಿ ಬೀದಿ ಪಾಲಾಗಬೇಡಿ

ಸಮಗ್ರ ಕೃಷಿ ಪದ್ಧತಿ ಅಳವಡಿಸಿಕೊಳ್ಳಿ: ಡಾ.ನಿಶ್ಚಲಾನಂದನಾಥ ಸ್ವಾಮೀಜಿ

ಕೆ.ಆರ್.ಪೇಟೆ, ಡಿ.23– ರೈತರು ಭೂಮಿ ಮಾರಾಟ ಮಾಡದೇ ಉಳಿಸಿಕೊಂಡರೆ ಕೆಲವೇ ವರ್ಷಗಳಲ್ಲಿ ಬಂಗಾರಕ್ಕಿಂತಲೂ ಹೆಚ್ಚು ಬೆಲೆ ಸಿಗಲಿದೆ. ಹಾಗಾಗಿ ರೈತರು ಭೂಮಿ ಮಾರಾಟ ಮಾಡಿ ಬೀದಿ ಪಾಲಾಗಬೇಡಿ. ಕೃಷಿ ನಷ್ಟದ ಕ್ಷೇತ್ರವಲ್ಲ. ಕಷ್ಟ ಪಟ್ಟು ಸಮಗ್ರ ಕೃಷಿ ಪದ್ಧತಿ ಅಳವಡಿಸಿಕೊಂಡರೆ ನಷ್ಟವಾಗುವುದಿಲ್ಲ ಎಂದು ಕೆಂಗೇರಿ ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನ ಮಠದ ಪೀಠಾಧ್ಯಕ್ಷ ಡಾ.ನಿಶ್ಚಲಾನಂದನಾಥ ಸ್ವಾಮೀಜಿ ತಿಳಿಸಿದರು.

ತಾಲೂಕಿನ ಲಕ್ಷ್ಮೀಪುರದಲ್ಲಿ ಕೃಷಿಕ ಸಮಾಜ ಹಾಗೂ ಆಕಾಶವಾಣಿ ಮೈಸೂರು ಇವರ ಸಹಯೋಗದಲ್ಲಿ ನಡೆದ ರೈತ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಸರ್ಕಾರಗಳ ರೈತ ವಿರೋಧಿ ನೀತಿಗಳಿಂದಾಗಿ ಮುಂದಿನ ತಲೆಮಾರಿಗೆ ರೈತ ವರ್ಗವನ್ನು ಹುಡುಕುವಂತಹ ಸ್ಥಿತಿ ನಿರ್ಮಾಣವಾಗುತ್ತಿದೆ. ಕೃಷಿಗೆ ಸಾಕಷ್ಟು ಅನುದಾನ ಕೊಡಲಾಗುತ್ತಿದೆ. ಆದರೆ ಆ ಅನುದಾನ ಎಲ್ಲಿ ಹೋಗುತ್ತಿದೆ ಎಂಬುದನ್ನು ಹುಡುಕಬೇಕಾಗಿದೆ. ಇಂದು ಬಂಡವಾಳಶಾಹಿಗಳು ಯುವ ಪೀಳಿಗೆಯನ್ನು ಟೀಕಿಸುತ್ತಿದ್ದಾರೆ. ಇದರಿಂದ ಹೆಣ್ಣು ಕೊಡಲು ಯಾರು ಮುಂದೆ ಬರುತ್ತಿಲ್ಲ. ಇದನ್ನು ಅರ್ಥಮಾಡಿಕೊಂಡು ಮುಂದಿನ ದಿನಗಳಲ್ಲಿ ಜಾಗೃತಿ ಮೂಡಿಸಲು ಸಂಕಲ್ಪ ಮಾಡಿದ್ದೇವೆ ಎಂದರು.

ರಾಜ್ಯ ರೈತ ಸಂಘದ ಮಹಿಳಾ ಘಟಕದ ಅಧ್ಯಕ್ಷೆ ನಂದಿನಿ ಜಯರಾಂ ಮಾತನಾಡಿ, ಯಾವುದೇ ಕೃಷಿ ಕುಟುಂಬ ರೈತ ಮಹಿಳೆ ಇಲ್ಲದೆ ತನ್ನ ಸಂಪೂರ್ಣ ಕೃಷಿ ಬದುಕನ್ನು ನಡೆಸಲು ಸಾಧ್ಯವಿಲ್ಲ. ಕೃಷಿ ಬೆನ್ನೆಲುಬೆ ಮಹಿಳೆ. ಇಂತಹ ಕುಟುಂಬದವರು ಕೂಡ ಒಬ್ಬ ವಿದ್ಯಾವಂತ ರೈತ ಮಗನಿಗೆ ತಮ್ಮ ಮಗಳನ್ನು ಮದುವೆ ಮಾಡಿಕೊಡುವುದಿಲ್ಲ ಎಂದರೆ ನಾವೆಲ್ಲಾ ಎಂತಹ ಸಂದಿಗ್ಧತೆಯಲ್ಲಿದ್ದೇವೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ಕೃಷಿ ಬದುಕನ್ನು ನಾಶಮಾಡಲು ಹೊರಟಿರುವ ಸರ್ಕಾರಗಳು ಇಂತಹ ವಾತಾವರಣ ಸೃಷ್ಟಿಸಿವೆ ಎಂದ ಅವರು, ಪ್ರಸ್ತುತ ರೈತ ಭೂಮಿ ಕಳೆದುಕೊಂಡರೆ ಮತ್ತೆ ಭೂ ಮಾಲೀಕನಾಗಲು ಸಾಧ್ಯವಿಲ್ಲ ಆದ್ದರಿಂದ ಯಾರೊಬ್ಬರು ಜಮೀನನ್ನು ಮಾರಾಟ ಮಾಡದೆ ಉಳಿಸಿಕೊಳ್ಳಬೇಕು ಎಂದರು.

ಮಂಡ್ಯ ಜಿಲ್ಲಾ ಸಂಪೂರ್ಣ ಸಾವಯವ ಕೃಷಿ ಉತ್ಪಾದಕರ ಸಂಘದ ಅಧ್ಯಕ್ಷ ಮಹೇಶ್ ಮಾತನಾಡಿದರು. ವೇದಿಕೆ ಕಾರ್ಯಕ್ರಮಕ್ಕೂ ಮುನ್ನಾ ನೂರಾರು ರೈತರು, ರೈತ ಮಹಿಳೆಯರು ಮೆರವಣಿಗೆ ಮೂಲಕ ಆಗಮಿಸಿದರು. ಕೋಲಾಟ ಸೇರಿದಂತೆ ವಿವಿಧ ಕಲಾತಂಡಗಳು ಮೆರವಣಿಗೆಯಲ್ಲಿ ಭಾಗವಹಿಸಿದ್ದವು.

ಮೈಸೂರು ಆಕಾಶವಾಣಿ ಕಾರ್ಯಕ್ರಮ ನಿರ್ವಾಹಕ ಕೇಶವಮೂರ್ತಿ ರೈತರೊಂದಿಗೆ ಸಂವಾದ ನಡೆಸಿ ಹಲವು ಪರಿಹಾರಗಳನ್ನು ತಿಳಿಸಿಕೊಟ್ಟರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕೃಷಿಕ ಸಮಾಜದ ಅಧ್ಯಕ್ಷ ಗಂಗಾಧರ್ ವಹಿಸಿದ್ದರು. ರಾಜ್ಯ ಆರ್‌ಟಿಓ ಅಧಿಕಾರಿಗಳ ಸಂಘದ ರಾಜ್ಯಾಧ್ಯಕ್ಷ ಆರ್‌ಟಿಓ ಮಲ್ಲಿಕಾರ್ಜುನ್, ತಾಪಂ ಮಾಜಿ ಅಧ್ಯಕ್ಷ ಜಾನಕೀರಾಂ, ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಎ.ಎಸ್.ರಮೇಶ್, ಎ.ಆರ್.ರಘು, ನಾರಾಯಣಗೌಡ, ಟಿಎಪಿಸಿಎಂಎಸ್ ಮೋಹನ್, ಕರವೇ ಮಂಡ್ಯ ಜಿಲ್ಲಾಧ್ಯಕ್ಷ ವೇಣು, ಸಿ.ಬಿ.ಚೇತನ್ ಕುಮಾರ್, ರೈತ ಮುಖಂಡರಾದ ಶಂಕರ್, ಸುಬ್ಬೇಗೌಡ, ಪ್ರಮೀಳಾ, ಬಿ.ಸಿ.ಪ್ರೇಮಾ, ಗ್ಯಾರಂಟಿ ಸಮಿತಿ ಸದಸ್ಯೆ ಶಿವಮ್ಮ, ತಾಲೂಕು ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಸಂತೋಷ್‌ಕುಮಾರ್, ತಾಂತ್ರಿಕ ಅಧಿಕಾರಿ ಶ್ರೀಧರ್ ಸೇರಿದಂತೆ ರೈತರು ಉಪಸ್ಥಿತರಿದ್ದರು.



ರೈತ ದಿನಾಚರಣೆಯನ್ನು ಗಣ್ಯರು ಉದ್ಘಾಟಿಸಿದರು.

ಎಂ.ಶಿವಣ್ಣ ನಿಧನ



ಕೆ.ಆರ್.ಪೇಟೆ, ಡಿ.23– ಪಟ್ಟಣದ ಚೆಸ್ಕಾಂ ಇಲಾಖೆ ಕಿರಿಯ ಲೆಕ್ಕ ಸಹಾಯಕ ಎಂ.ಶಿವಣ್ಣ(52) ಸೋಮವಾರ ನಿಧನರಾದರು. ಮೃತರು ಪತ್ನಿ ಮಾಲಿನಿ, ಪುತ್ರರಾದ ಶಶಾಂಕ್ ಗೌಡ, ಹರ್ಷವರ್ಧನ್ ಗೌಡ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ತಾಲೂಕಿನ ಜೈನಹಳ್ಳಿಯಲ್ಲಿ ಮೃತರ ತೋಟದಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಜಯಂತಿ



ಕೆ.ಆರ್.ಪೇಟೆ, ಡಿ.23– ಪಟ್ಟಣದ ಹಿತೇಶ್ ಎಲೆಕ್ಟ್ರಿಕಲ್ಸ್ ಮಾಲೀಕ ಕೃಷ್ಣೋಜಿರಾವ್ ಅವರ ಪತ್ನಿ ಜಯಂತಿ(50) ಸೋಮವಾರ ಮುಂಜಾನೆ ನಿಧನರಾದರು. ಮೃತರು ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಹೊಸಹೊಳಲು ಚಿಕ್ಕಕೆರೆ ಬಳಿಯ ಸಾರ್ವಜನಿಕ ರುದ್ರಭೂಮಿಯಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಒಂದನೇ ಪುಟದಿಂದ

ವರ್ಗಾಯಿಸಿಕೊಂಡಿದ್ದ ಇಬ್ಬರ ಬಂಧನ

ಬಿಟ್ಟು ಅಲ್ಲಿಂದ ಕಾಲ್ಕಿತ್ತರು. ನಂತರ ಆ ಮಾರ್ಗವಾಗಿ ಬಂದ ಸಾರ್ವಜನಿಕರು ಗಾಯಾಳು ಗಣೇಶ್‌ನನ್ನು ಕಡಕೊಳ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕರೆದೊಯ್ದು ಪ್ರಥಮ ಚಿಕಿತ್ಸೆ ಕೊಡಿಸಿದ ಬಳಿಕ ಅವರ ಸಂಬಂದಿಕರಿಗೆ ದೂರವಾಣಿ ಮೂಲಕ ವಿಷಯ ಮುಟ್ಟಿಸಿದರು.

ತಕ್ಷಣ ಅಲ್ಲಿಗೆ ಬಂದ ಸಹೋದರ ಅಂಕನಾಯಕ ಅವರು ಗಣೇಶ್‌ನಿಗೆ ಹೆಚ್ಚಿನ ಚಿಕಿತ್ಸೆ ಕೊಡಿಸಿ ಬಳಿಕ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ದೂರು ನೀಡಿದರು. ಡಿ.19 ರಂದು ಪ್ರಕರಣ ದಾಖಲಿಸಿಕೊಂಡ ಜಿಲ್ಲಾ ಸೆನ್ ಠಾಣೆ ಇನ್ಸ್‌ಪೆಕ್ಟರ್ ಸುನೀಲ್ ಕುಮಾರ್ ಅವರು ಇಬ್ಬರೂ ಆರೋಪಿಗಳನ್ನು ಬಂಧಿಸಿ, 80 ಸಾವಿರ ರೂ. ನಗದು ಹಾಗೂ ಕೃತ್ಯಕ್ಕೆ ಬಳಸಿದ್ದ ಬೈಕ್‌ನ್ನು ವಶಪಡಿಸಿಕೊಂಡಿದ್ದಾರೆ. ಆರೋಪಿಗಳಿಬ್ಬರನ್ನು ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಗಿ ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಎಸ್ಪಿ ಎನ್. ವಿಷ್ಣುವರ್ಧನ ಅವರ ನಿರ್ದೇಶನದಂತೆ ಆಡಿಷನಲ್ ಎಸ್ಪಿಗಳಾದ ಸಿ. ಮಲ್ಲಿಕ್, ಎಲ್. ನಾಗೇಶ್ ಅವರ ಮಾರ್ಗದರ್ಶನದಲ್ಲಿ ಜಿಲ್ಲಾ ಸೈಬರ್ ಕ್ರೈಂ ಪೊಲೀಸ್ ಠಾಣೆ ಡಿವೈ ಎಸ್‌ಪಿ ಆರ್. ಶ್ರೀಕಾಂತ್ ನೇತೃತ್ವದಲ್ಲಿ ಇನ್ಸ್‌ಪೆಕ್ಟರ್ ಎಸ್.ಪಿ. ಸುನಿಲ್‌ಕುಮಾರ್, ಸಬ್‌ಇನ್ಸ್‌ಪೆಕ್ಟರ್ ಸುರೇಶ್ ಗೋಪಣ್ಣ ಸಿಬ್ಬಂದಿಗಳಾದ ಎಸ್. ಮಂಜುನಾಥ್, ಹೆಚ್.ವಿ. ರಂಗಸ್ವಾಮಿ, ಬಸವರಾಜು ಹಾಗೂ ಇತರರು ಪತ್ತೆ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ

ಲುಲು ಮಾಲ್, ಡಾ.ರಾಜ್‌ಕುಮಾರ್ ಭವನ, ಕಲಾವಿದರ ಸಂಘ, ಚಾಮರಾಜಪೇಟೆ ಹಾಗೂ ಬನಶಂಕರಿಯ ಸುಚಿತ್ರ ಫಿಲಂ ಸೊಸೈಟಿ ಚಿತ್ರಮಂದಿರಗಳಲ್ಲಿ ಪ್ರದರ್ಶನಗೊಳ್ಳಲಿವೆ. ಕನ್ನಡ ಮತ್ತು ಭಾರತೀಯ ಚಿತ್ರಗಳು ಸೇರಿದಂತೆ ಒಟ್ಟಾರೆ 60ಕ್ಕೂ ಹೆಚ್ಚು ದೇಶಗಳ 200 ಚಲನಚಿತ್ರಗಳ 400ಕ್ಕೂ ಹೆಚ್ಚು ಪ್ರದರ್ಶನಗಳು ಇರಲಿವೆ. ವಿಶ್ವದ ಪ್ರತಿಷ್ಠಿತ ಚಲನಚಿತ್ರೋತ್ಸವಗಳಲ್ಲಿ ಪಾಲ್ಗೊಂಡು ವಿವಿಧ ಪ್ರಶಸ್ತಿ ಪಡೆದ ಮತ್ತು ಜನಮನ್ನಣೆ ಗಳಿಸಿದ ದೇಶ–ವಿದೇಶದ ಅತ್ಯುತ್ತಮ ಚಲನಚಿತ್ರಗಳು ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಭಾಗವಹಿಸುತ್ತಿವೆ.

ಕಾನ್ಸ್ (ಫ್ರಾನ್ಸ್), ಬರ್ಲಿನ್ (ಜರ್ಮನಿ), ವೆನಿಸ್ (ಇಟಲಿ), ಕಾರ್ಲೋವಿ ವೇರಿ (ಜೆಕ್ ರಿಪಬ್ಲಿಕ್), ಲೊಕಾರ್ನೊ (ಸ್ವಿಟ್ಜರ್ ಲ್ಯಾಂಡ್), ರಾಟರ್‌ಡ್ಯಾಮ್ (ನೆದರ್ ಲ್ಯಾಂಡ್), ಬೂಸಾನ್ (ದಕ್ಷಿಣ ಕೊರಿಯಾ), ಟೊರಂಟೊ (ಕೆನಡಾ) ದೇಶಗಳ ಚಿತ್ರೋತ್ಸವದಲ್ಲಿ ಭಾಗವಹಿಸಿ ಪ್ರಶಸ್ತಿ ಮತ್ತು ಮೆಚ್ಚುಗೆ ಗಳಿಸಿದ ಚಲನಚಿತ್ರಗಳು ಬೆಂಗಳೂರು ಚಿತ್ರೋತ್ಸವದಲ್ಲಿ ಒಂದೇ ಕಡೆ ವೀಕ್ಷಿಸಲು ಸಿನಿಮಾ ಪ್ರಿಯರಿಗೆ ಲಭ್ಯವಿರುತ್ತವೆ ಎಂದರು.

ಈ ಬಾರಿ ಆಸ್ಕರ್ ಪ್ರಶಸ್ತಿಗೆ ಶಾರ್ಟ್‌ಲಿಸ್ಟ್ ಆಗಿರುವ ವಿವಿಧ ದೇಶದ ಅತ್ಯುತ್ತಮ ಚಲನಚಿತ್ರಗಳು ಚಿತ್ರೋತ್ಸವದಲ್ಲಿ ಪ್ರದರ್ಶನಗೊಳ್ಳಲಿವೆ. ಪೋಲಿಷ್ ಕಲ್ಚರಲ್ ಸೆಂಟರ್, ನವದೆಹಲಿ, ಗೋಥೆ ಇನ್ಸಿಟ್ಯೂಟ್ – ಮ್ಯಾಕ್ಸ್ ಮುಲ್ಲರ್ ಭವನ, ಬೆಂಗಳೂರು, ಅಲಿಯಾನ್ಸ್ ಫ್ರಾಂಸೇ – ಫ್ರೆಂಚ್ ಇನ್ಸಿಟ್ಯೂಟ್ ಹಾಗೂ ರಾಯಲ್ ಥೈಲ್ಯಾಂಡ್ ಕಾನ್ಸುಲೇಟ್‌ನವರು ತಮ್ಮ ದೇಶಗಳ ಅತ್ಯುತ್ತಮ ಚಲನಚಿತ್ರಗಳನ್ನು ಚಿತ್ರೋತ್ಸವದಲ್ಲಿ ಪ್ರದರ್ಶನಕ್ಕೆ ನೀಡುತ್ತಿದ್ದಾರೆ.

ಪೋಲಿಷ್ ಕಲ್ಚರಲ್ ಸೆಂಟರ್ ಸಹಯೋಗದಲ್ಲಿ ಪೋಲೆಂಡ್‌ನ ಖ್ಯಾತ ನಿರ್ದೇಶಕ ಆಂದ್ರೆ ವಾಜ್ಡಾ ಶತಮಾನೋತ್ಸವ ಸ್ಮರಣಾರ್ಥ ಅವರ ಆಯ್ದ ಚಲನಚಿತ್ರಗಳ ವಿಶೇಷ ಪುನರಾವಲೋಕನವನ್ನು ಈ ಬಾರಿಯ ಚಿತ್ರೋತ್ಸವದಲ್ಲಿ ಆಯೋಜಿಸಲಾಗಿದೆ.

ಇದರೊಂದಿಗೆ ಅಲಿಯಾನ್ಸ್ ಫ್ರಾಂಸೇ ಬೆಂಗಳೂರು ಹಾಗೂ ಫ್ರೆಂಚ್ ಇನ್ಸಿಟ್ಯೂಟ್ ಇನ್ ಇಂಡಿಯಾ ಸಹಯೋಗದಲ್ಲಿ ಆಫ್ರಿಕಾ ಸಿನಿಮಾಗಳ ಇತಿಹಾಸ ದಾಖಲಿಸುವ ವಿಶೇಷ ಚಲನಚಿತ್ರಗಳ ಸರಣಿ ಸಹಾ ಚಿತ್ರೋತ್ಸವದಲ್ಲಿ ಪ್ರದರ್ಶಿಸಲಾಗುತ್ತಿದೆ.

ಚಿತ್ರೋತ್ಸವದ ಫಿಲಂ ಅಕಾಡೆಮಿಕ್ ಕಾರ್ಯಕ್ರಮಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ನೋಂದಾಯಿತ ಪ್ರತಿನಿಧಿಗಳು ಭಾಗವಹಿಸಲು ಅನುಕೂಲವಾಗುವಂತೆ ಚಿತ್ರೋತ್ಸವದ ಪ್ರಧಾನ ಕೇಂದ್ರದಲ್ಲಿ ವಿಶೇಷ ವೇದಿಕೆ ಇರಲಿದೆ.

ವೇದಿಕೆ ಆವರಣದಲ್ಲಿ 91 ವರ್ಷಗಳ ವರ್ಣರಂಜಿತ, ಸ್ಮರಣೀಯ ಸಿನಿಮಾ ಸಂಸ್ಕೃತಿ ಇತಿಹಾಸದಲ್ಲಿ ಕನ್ನಡ ಚಿತ್ರರಂಗದ ಮೈಲಿಗಲ್ಲು ಬಿಂಬಿಸುವ ವೈವಿಧ್ಯಮಯ ಛಾಯಾಚಿತ್ರ ಪ್ರದರ್ಶನವನ್ನೂ ಏರ್ಪಡಿಸಲಾಗಿದೆ ಎಂದರು.

ಪಂದ್ಯಕ್ಕೆ ಅನುಮತಿ ನಿರಾಕರಣೆ

ಗ್ರೇಟರ್ ಬೆಂಗಳೂರು ಪ್ರಾಧಿಕಾರ ಆಯುಕ್ತ ಎಂ ಮಹೇಶ್ವರ್ ರಾವ್ ತಿಳಿಸಿದ್ದಾರೆ. ಸಮಿತಿಯ ವರದಿಯ ಆಧಾರದ ಮೇಲೆ, ಬುಧವಾರ ನಿಗದಿಯಾಗಿದ್ದ ಪಂದ್ಯಕ್ಕೆ ಅನುಮತಿ ನಿರಾಕರಿಸಲಾಗಿದೆ ಎಂದು ಅವರು ಹೇಳಿದರು. ಜೂನ್ 11 ರಂದು ಆರ್‌ಸಿಬಿ ವಿಜಯೋತ್ಸವದ ಸಂದರ್ಭದಲ್ಲಿ ಎಂ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಕಾಲ್ತುಳಿತದಲ್ಲಿ ಇಬ್ಬರು ಅಪ್ರಾಪ್ತ ವಯಸ್ಕರು ಸೇರಿದಂತೆ 11 ಜನರು ಸಾವನ್ನಪ್ಪಿದರು ಮತ್ತು ಹಲವಾರು ಜನರು ಗಾಯಗೊಂಡಿದ್ದರು. ಅನಂತರ, ಕ್ರೀಡಾಂಗಣದಲ್ಲಿ ಪಂದ್ಯಗಳನ್ನು ಸ್ಥಗಿತಗೊಳಿಸಲಾಯಿತು. ತರುವಾಯ, ನ್ಯಾಯಮೂರ್ತಿ ಮೈಕೆಲ್ ಡಿ'ಕುನ್ಹಾ ಸಮಿತಿಯು 17 ಸರಿಪಡಿಸುವ ಕ್ರಮಗಳನ್ನು ಒಳಗೊಂಡಂತೆ ಹಲವಾರು ಶಿಫಾರಸುಗಳನ್ನು ಮಾಡಿತ್ತು.

ಹಿಯರಿಂಗ್ ಹಾರಿಜಾನ್ಸ್ 2025: ಶ್ರವಣ ಆರೋಗ್ಯ ಕ್ಷೇತ್ರದಲ್ಲಿ ಪ್ರಗತಿ–ಸವಾಲುಗಳ ರಾಷ್ಟ್ರೀಯ ಚರ್ಚೆ

ಮೈಸೂರು,ಡಿ.23–ಮೈಸೂರಿನ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ, ಇಂಡಿಯನ್ ಸ್ಪೀಚ್ ಲ್ಯಾಂಗ್ವೇಜ್ ಅಂಡ್ ಹಿಯರಿಂಗ್ ಅಸೋಸಿಯೇಷನ್‌ನ ಮೈಸೂರು ಶಾಖೆ ಸಹಯೋಗದಲ್ಲಿ ಆಯಿಷ್ ಆವರಣದಲ್ಲಿ ಹಿಯರಿಂಗ್ ಹಾರಿಜಾನ್ಸ್ 2025 ಎಂಬ ಎರಡು ದಿನಗಳ ಆರ್‌ಸಿಐ ಅನುಮೋದಿತ ರಾಷ್ಟ್ರೀಯ ಸಮ್ಮೇಳನವನ್ನು ಆಯೋಜಿಸಲಾಗಿತ್ತು.

ದೇಶದ ವಿವಿಧ ಭಾಗಗಳಿಂದ ಆಗಮಿಸಿದ ಸುಮಾರು 200 ಅನುಭವಿ ವೃತ್ತಿಪರರು, 150ಕ್ಕೂ ಹೆಚ್ಚು ವಿದ್ಯಾರ್ಥಿಗಳು ಹಾಗೂ ಯುವ ಆಡಿಯಾಲಜಿಸ್ಟ್‌ಗಳು ಸಮ್ಮೇಳನದಲ್ಲಿ ಭಾಗವಹಿಸಿ, ಶ್ರವಣ ಆರೋಗ್ಯ ರಕ್ಷಣೆಯಲ್ಲಿನ ಇತ್ತೀಚಿನ ಬೆಳವಣಿಗೆಗಳು, ಸವಾಲುಗಳು ಮತ್ತು ಭವಿಷ್ಯದ ದಿಕ್ಕುಗಳ ಕುರಿತು ಗಂಭೀರ ಚರ್ಚೆ ನಡೆಸಿದರು. ಸಮ್ಮೇಳನವು ಪೂರ್ಣಾಧಿವೇಶನ ಉಪನ್ಯಾಸಗಳು, ತಯಾರಕ ಸಂಸ್ಥೆಗಳ ತಾಂತ್ರಿಕ ಅಧಿವೇಶನಗಳು, ಪ್ರಾಯೋಗಿಕ ಮಾಸ್ಟರ್ ಕ್ಲಾಸ್ ತರಬೇತಿ, ಆರು ಕೇಂದ್ರೀಕೃತ ಗುಂಪು ಚರ್ಚೆಗಳು, ಸಮಾನಾಂತರ ವೈಜ್ಞಾನಿಕ ಅಧಿವೇಶನಗಳು ಹಾಗೂ ಉದ್ಯೋಗ ಮೇಳವನ್ನು ಒಳಗೊಂಡ ಸಮೃದ್ಧ ಶೈಕ್ಷಣಿಕ ಕಾರ್ಯಕ್ರಮವಾಗಿ ಮೂಡಿಬಂದಿತು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಭಾರತದ ಮೊದಲಿನ ಖಾಸಗಿ ಆಡಿಯಾಲಜಿ ತಜ್ಞರಲ್ಲಿ ಒಬ್ಬರಾದ ಡಾ. ಕಲ್ಯಾಣಿ ಮಾಂಡ್ಕೆ ಅವರು, ದೇಶದಲ್ಲಿ ಶ್ರವಣ ಆರೈಕೆ ಕ್ಷೇತ್ರವು ಕಳೆದ ದಶಕಗಳಲ್ಲಿ ಕಂಡಿರುವ ವಿಕಸನವನ್ನು ವಿವರಿಸಿ, ನೈತಿಕತೆ ಹಾಗೂ ಸಾಕ್ಷ್ಯಾಧಾರಿತ ಚಿಕಿತ್ಸಾ ಪದ್ಧತಿಗಳನ್ನು ಕಟ್ಟುನಿಟ್ಟಾಗಿ ಅನುಸರಿಸುವ ಅಗತ್ಯವಿದೆ ಎಂದು ತಿಳಿಸಿದರು.

ವಿಶ್ವ ಆರೋಗ್ಯ ಸಂಸ್ಥೆಯ ಡಾ.ಬಿ. ಮೊಹಮ್ಮದ್ ಅಶೀಲ್ ಅವರು ಶ್ರವಣವು ಪರಿಣಾಮಕಾರಿ ಸಂವಹನದ ಮೂಲಾಧಾರವಾಗಿದ್ದು, ಮಕ್ಕಳ ಭಾಷಾ ಮತ್ತು ಮಾತು ಬೆಳವಣಿಗೆಯಿಂದ ಹಿಡಿದು ವಯಸ್ಕರು ಹಾಗೂ ಹಿರಿಯ ನಾಗರಿಕರ ಸಾಮಾಜಿಕ ಭಾಗವಹಿಸುವಿಕೆವರೆಗೆ ಶ್ರವಣ ಸಾಧನಗಳು ಜೀವನಪೂರ್ತಿ ಮಹತ್ವದ ಪಾತ್ರ ವಹಿಸುತ್ತವೆ ಎಂದು ಹೇಳಿದರು.

ಆಯಿಷ್ ನಿರ್ದೇಶಕಿ ಡಾ.ಎಂ. ಪುಷ್ಪಾವತಿ ಮಾತನಾಡಿ, ಶ್ರವಣ ಸಾಧನ ಅಳವಡಿಕೆಯೊಂದಿಗೆ ಚಿಕಿತ್ಸೆ ಪೂರ್ಣಗೊಳ್ಳುವುದಿಲ್ಲ. ವಿಶೇಷವಾಗಿ ಮಕ್ಕಳಲ್ಲಿ ಸಾಧನ ಅಳವಡಿಕೆಯ ನಂತರದ ವಾಕ್ ಭಾಷಾ ಚಿಕಿತ್ಸೆ ಮತ್ತು ವ್ಯವಸ್ಥಿತ ಶ್ರವಣ ಪುನರ್ವಸತಿ ಅತ್ಯಂತ ಅಗತ್ಯವಾಗಿದೆ. ಇದರಿಂದಲೇ ಮಕ್ಕಳಲ್ಲಿ ಪರಿಣಾಮಕಾರಿ ಭಾಷಾ, ಸಂವಹನ ಮತ್ತು ಶೈಕ್ಷಣಿಕ ಕೌಶಲಗಳ ಬೆಳವಣಿಗೆ ಸಾಧ್ಯವಾಗುತ್ತದೆ ಎಂದು ಒತ್ತಿ ಹೇಳಿದರು.

ಸಮ್ಮೇಳನದ ಸಂಯೋಜಕ ಡಾ.ಎಂ.ಸಂದೀಪ್ ಹಾಗೂ ಡಾ. ಎನ್.ದೇವಿ ಮಾತನಾಡಿ, ಶೈಕ್ಷಣಿಕ ಸಂಸ್ಥೆಗಳು ಮತ್ತು ಖಾಸಗಿ ವೃತ್ತಿಪರರ ನಡುವಿನ ಅಂತರವನ್ನು ಕಡಿಮೆ ಮಾಡುವುದು, ಪರಸ್ಪರ ಜ್ಞಾನ ವಿನಿಮಯವನ್ನು ಉತ್ತೇಜಿಸುವುದು ಹಾಗೂ ದೇಶಾದ್ಯಂತ ಏಕರೂಪದ ಉತ್ತಮ ಚಿಕಿತ್ಸಾ ಪದ್ಧತಿಗಳನ್ನು ರೂಪಿಸುವುದು ಹಿಯರಿಂಗ್ ಹಾರಿಜಾನ್ಸ್ 2025ರ ಪ್ರಮುಖ ಉದ್ದೇಶವಾಗಿದೆ ಎಂದು ತಿಳಿಸಿದರು.



ಮೈಸೂರಿನ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ, ಇಂಡಿಯನ್ ಸ್ಪೀಚ್ ಲ್ಯಾಂಗ್ವೇಜ್ ಅಂಡ್ ಹಿಯರಿಂಗ್ ಅಸೋಸಿಯೇಷನ್‌ನ ಮೈಸೂರು ಶಾಖೆ ಸಹಯೋಗದಲ್ಲಿ ಆಯಿಷ್ ಆವರಣದಲ್ಲಿ ಹಿಯರಿಂಗ್ ಹಾರಿಜಾನ್ಸ್ 2025 ಎಂಬ ಎರಡು ದಿನಗಳ ಆರ್‌ಸಿಐ ಅನುಮೋದಿತ ರಾಷ್ಟ್ರೀಯ ಸಮ್ಮೇಳನವನ್ನು ಆಯೋಜಿಸಲಾಗಿತ್ತು.

ಸಾರಿಗೆ ನಿಗಮದ ಮಹಿಳಾ ನೌಕರರಿಗೆ ಋತುಚಕ್ರದ ರಜೆಗೆ ಮಂಜೂರು

ಬೆಂಗಳೂರು, ಡಿ.23– ಕೆಎಸ್‌ಆರ್‌ಟಿಸಿ ಸೇರಿದಂತೆ ನಾಲ್ಕು ರಾಜ್ಯ ಸಾರಿಗೆ ನಿಗಮಗಳ ಮಹಿಳಾ ನೌಕರರಿಗೆ ಋತುಚಕ್ರದ ರಜೆ ನೀಡಲು ಸಾರಿಗೆ ಇಲಾಖೆ ಗ್ರೀನ್ ಸಿಗ್ನಲ್ ನೀಡಿದೆ. ಆ ಮೂಲಕ ಮಹತ್ವದ ನಿರ್ಧಾರ ಕೈಗೊಳ್ಳಲಾಗಿದೆ. ಜನವರಿ 1ರಿಂದ ಮಹಿಳಾ ಡ್ರೈವರ್, ಕಂಡಕ್ಟರ್ ಸೇರಿ ಮಹಿಳಾ ಸಿಬ್ಬಂದಿ ಋತುಚಕ್ರದ ರಜೆ ಪಡೆಯಬಹುದಾಗಿದೆ. ಕೆಎಸ್‌ಆರ್‌ಟಿಸಿ, ಬಿಎಂಟಿಸಿ, ಎನ್‌ಡಬ್ಲೂಕೆಆರ್‌ಟಿಸಿ ಮತ್ತು ಕೆಕೆಆರ್‌ಟಿಸಿ ಎಂಡಿ ಅಕ್ರಂ ಪಾಷ ಈ ಬಗ್ಗೆ ಮಂಗಳವಾರ ಆದೇಶ ಹೊರಡಿಸಿದ್ದಾರೆ.

ನಿಗಮದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಮಹಿಳಾ ನೌಕರರಿಗೆ 2026 ರ ಜನವರಿ 1 ರಿಂದ ಋತುಚಕ್ರ ರಜೆ ಸೌಲಭ್ಯ ಜಾರಿಗೆ ಬರುತ್ತಿದ್ದು, ಪ್ರತಿ ತಿಂಗಳು ಒಂದು ದಿನದಂತೆ ಋತುಚಕ್ರ ರಜೆಯ ಸೌಲಭ್ಯವನ್ನು ಪಡೆದುಕೊಳ್ಳಬಹುದಾಗಿದೆ.

ಸಾಂದರ್ಭಿಕ ರಜೆಯನ್ನು ಮಂಜೂರು ಮಾಡಲು ಸಕ್ಷಮವಾದ ಪ್ರಾಧಿಕಾರಿಯು ಋತುಚಕ್ರ ರಜೆ ಮಂಜೂರು ಮಾಡಬಹುದು. ಈ ರಜೆಯನ್ನು ಪಡೆಯಲು ಯಾವುದೇ ವೈದ್ಯಕೀಯ ಪ್ರಮಾಣ ಪತ್ರವನ್ನು ಒದಗಿಸುವ ಅಗತ್ಯವಿಲ್ಲ. ಈ ರಜೆಯನ್ನು ರಜೆ ಅಥವಾ ಹಾಜರಾತಿ ಪುಸ್ತಕದಲ್ಲಿ ಪ್ರತ್ಯೇಕವಾಗಿ ನಮೂದಿಸಬೇಕು. ಋತುಚಕ್ರ ರಜೆಯನ್ನು ಬೇರೆ ಯಾವುದೇ ರಜೆಯೊಂದಿಗೆ ಸಂಯೋಜಿಸಬಾರದು. ಸದರಿ ರಜೆಯನ್ನು ಆಯಾ ತಿಂಗಳಿನಲ್ಲಿಯೇ ಬಳಸಿಕೊಳ್ಳುವುದು ಹಾಗೂ ಮುಂದಿನ ತಿಂಗಳಿಗೆ ಅವಕಾಶವಿರುವುದಿಲ್ಲ.

ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಕೇಂದ್ರ ಸಚಿವರನ್ನು ಕೇಳಿದೆ. ಮಂಡ್ಯಕ್ಕೆ ಹೊಂದಿಕೊಂಡಂತೆ 10 ಎಕರೆ ವಿಸ್ತೀರ್ಣ ಭೂಮಿ ನೀಡಿದರೆ ಮುಂದಿನ ದಿನಗಳಲ್ಲೂ ಆಸ್ಪತ್ರೆ ಉನ್ನತೀಕರಣಕ್ಕೆ ಸಹಕಾರಿಯಾಗಲಿದೆ.

ನಾವು ಕೋರಿರುವ ಸ್ಥಳದಲ್ಲಿ ಅವಕಾಶ ಮಾಡಿಕೊಟ್ಟರೆ ನೆರೆಯ ತುಮಕೂರು, ರಾಮನಗರ ಜಿಲ್ಲೆಗಳ ರೋಗಿಗಳು ಈ ಅತ್ಯಾಧುನಿಕ ಆಸ್ಪತ್ರೆ ಸೌಲಭ್ಯ ಪಡೆಯಲು ಅವಕಾಶ ಇರಲಿದೆ ಎಂದು ಕುಮಾರಸ್ವಾಮಿ ರಾಜ್ಯ ಸರ್ಕಾರಕ್ಕೆ ತಿಳಿಸಿದ್ದಾರೆ. ಏಮ್ಸ್ ಮಾದರಿ ಆಸ್ಪತ್ರೆಯಲ್ಲಿ ದಿನದ 24 ಗಂಟೆ ತುರ್ತು ಚಿಕಿತ್ಸಾ ಘಟಕ, ಟ್ರಾಮಾ ಸೆಂಟರ್, ಮಾರಣಾಂತಿಕ ರೋಗಗಳಾದ ಕ್ಯಾನ್ಸರ್, ಹೃದಯಾಘಾತ ಸೇರಿದಂತೆ ಎಲ್ಲ ಬಗೆಯ ರೋಗಗಳಿಗೂ ಚಿಕಿತ್ಸೆ ಲಭ್ಯವಿರುತ್ತದೆ. ಇದೇ ಸಂದರ್ಭದಲ್ಲಿ 1,000 ಕೋಟಿ ರೂ. ವೆಚ್ಚದಲ್ಲಿ ಮಂಡ್ಯ ಹೊರವರ್ತುಲ ರಸ್ತೆ ನಿರ್ಮಾಣ ಯೋಜನೆ ಕೈಗೆತ್ತಿಕೊಳ್ಳಲು ಕೇಂದ್ರ ಭೂ ಸಾರಿಗೆ ಇಲಾಖೆ ನಿರ್ಧರಿಸಿದೆ.

ಚಾಮುಂಡೇಶ್ವರಿ ಕ್ಷೇತ್ರದ ಅಟಲ್ ಜೀ ಕಪ್ ಕ್ರಿಕೆಟ್

ಕಡಕೊಳ ತಂಡಕ್ಕೆ ಚಾಂಪಿಯನ್ ಕಿರೀಟ

ಮೈಸೂರು, ಡಿ.23– ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ವತಿಯಿಂದ ಮಂಗಳವಾರ ಜೆ.ಪಿ.ನಗರದ ಪುಟ್ಟರಾಜ ಗವಾಯಿ ಕ್ರೀಡಾಂಗಣದಲ್ಲಿ ಅಟಲ್ ಜೀ ಕಪ್ ಕ್ರಿಕೆಟ್ ಪಂದ್ಯಾವಳಿ ನಡೆಯಿತು. ಈ ಕ್ರೀಡಾಕೂಟದಲ್ಲಿ ಒಟ್ಟು ಎಂಟು ತಂಡಗಳು ಭಾಗವಹಿಸಿದ್ದು, ಕಡಕೊಳ, ಶ್ರೀರಾಂಪುರ, ಹಿನಕಲ್, ಜಯಪುರ, ಸಿದ್ದಲಿಂಗಪುರ, ಇಲವಾಲ, ಹೂಟಗಳ್ಳಿ ಹಾಗೂ ಬೀರಿಹುಂಡಿ ತಂಡಗಳು ಸ್ಪರ್ಧೆ ನಡೆಸಿದವು.

ಪಂದ್ಯಾವಳಿಯ ಸೆಮಿಫೈನಲ್ ಹಂತಕ್ಕೆ ಜಯಪುರ, ಇಲವಾಲ, ಕಡಕೊಳ ಹಾಗೂ ಬೀರಿಹುಂಡಿ ತಂಡಗಳು ಅರ್ಹತೆ ಪಡೆದುಕೊಂಡವು. ಕಠಿಣ ಹೋರಾಟದ ಬಳಿಕ ಫೈನಲ್ ಪಂದ್ಯಕ್ಕೆ ಜಯಪುರ ಹಾಗೂ ಕಡಕೋಳ ತಂಡಗಳು ಪ್ರವೇಶ ಪಡೆದವು.

ಫೈನಲ್ ಪಂದ್ಯದಲ್ಲಿ ಕಡಕೊಳ ತಂಡದ ನಾಯಕ ಈರಪ್ಪ ನೇತೃತ್ವದಲ್ಲಿ ಜಯ ಸಾಧಿಸಿ ಚಾಂಪಿಯನ್ ಪಟ್ಟವನ್ನು ತನ್ನದಾಗಿಸಿಕೊಂಡರೆ, ಜಯಪುರ ತಂಡ ರನ್ನರ್–ಅಪ್ ಸ್ಥಾನವನ್ನು ಪಡೆಯಿತು. ಗೆದ್ದ ತಂಡಗಳು ಹಾಗೂ ಆಟಗಾರರಿಗೆ, ದೇಶದ ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ ಜನ್ಮದಿನವಾದ ಡಿಸೆಂಬರ್ 25ರಂದು ಪಕ್ಷದ ಕಚೇರಿಯಲ್ಲಿ ಬಹುಮಾನ ಹಾಗೂ ಟ್ರೋಫಿಗಳನ್ನು ವಿತರಿಸಲಾಗುವುದು ಎಂದು ತಿಳಿಸಲಾಯಿತು.

ಪಂದ್ಯಾವಳಿಯಲ್ಲಿ ಗೆದ್ದ ತಂಡಗಳನ್ನು ಹಾಗೂ ಭಾಗವಹಿಸಿದ ಎಲ್ಲಾ ಆಟಗಾರರನ್ನು ಬಿಜೆಪಿ ಮೈಸೂರು ನಗರ ಅಧ್ಯಕ್ಷ ಎಲ್.ನಾಗೇಂದ್ರ ಅವರು ಹಾಗೂ ಚಾಮುಂಡೇಶ್ವರಿ ಕ್ಷೇತ್ರದ ಅಧ್ಯಕ್ಷ ಟಿ. ರವಿ ಅಭಿನಂದಿಸಿದರು.

ಪ್ರಧಾನ ಕಾರ್ಯದರ್ಶಿ ಬಿ.ಎಂ. ರಘು, ನಿಕಟಪೂರ್ವ ಅಧ್ಯಕ್ಷ ಗೆಜ್ಜಗಳ್ಳಿ ಮಹೇಶ್, ಗೋಪಾಲ್ ರಾವ್, ಹಿನಕಲ್ ಶ್ರೀನಿವಾಸ್, ಗೋಪಾಲ್ ಗೌಡ, ಅರುಣ್ ಕುಮಾರ್ ಗೌಡ, ಮರಿಸ್ವಾಮಿ, ನಂದೀಶ್ ಬೋಗಾದಿ, ಪರಶುರಾಮಪ್ಪ, ರಾಜಕುಮಾರ್ ಗಣೇಶ್, ಕೂರ್ಗಳ್ಳಿ ರೇವಣ್ಣ, ಈರಪ್ಪ, ಶಿವಕುಮಾರ್ ಚಿಕ್ಕಾನ್ಯ, ಹೇಮಂತ್ ಗೌಡ, ಸುನೀಲ್ ಕುಮಾರ್, ಮಹಾದೇವಸ್ವಾಮಿ ಆಲನಹಳ್ಳಿ, ಶರತ್, ನಾರಾಯಣ್, ಹುಯಿಲಾಳು ಪ್ರಶಾಂತ್, ಕಡಕೊಳ ಪ್ರದೀಪ್ ರಾಜೇಶ್ ಸೇರಿದಂತೆ ಅನೇಕ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.



ಚಾಮುಂಡೇಶ್ವರಿ ಕ್ಷೇತ್ರದ ಅಟಲ್ ಜೀ ಕಪ್ ಕ್ರಿಕೆಟ್‌ನ ವಿಜೇತ ಕಡಕೊಳ ತಂಡದೊಂದಿಗೆ ಗಣ್ಯರು.

ಬಿಜೆಪಿ ಜನರನ್ನು ದಾರಿ ತಪ್ಪಿಸುವಂತ ಕೆಲಸ ಮಾಡುತ್ತಿದೆ



ಬಿಜೆಪಿ ಮುಖಂಡ ಮೇಚಿರ ಸುಭಾಶ್ ನಾಣಯ್ಯ ನೇತೃತ್ವದಲ್ಲಿ ಬಿಜೆಪಿ ಕಾರ್ಯಕರ್ತರು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಗೊಂಡರು

ವಿರಾಜಪೇಟೆ, ಡಿ.23–ನಮ್ಮ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ನಂತರ 20 ವರ್ಷಗಳಿಂದ ಆಗದಂತ ಅಭಿವೃದ್ಧಿ ಕಾರ್ಯಗಳನ್ನು ಮಾಡುತ್ತಿದೆ. ಆದರೆ ಬಿಜೆಪಿಯ ಕೆಲವರು ಇಲ್ಲದಿರುವುದನ್ನು ಸೃಷ್ಟಿಮಾಡಿ ಜನರನ್ನು ದಾರಿ ತಪ್ಪಿಸುವಂತ ಕೆಲಸ ಮಾಡುತ್ತಿದ್ದಾರೆ ಎಂದು ಶಾಸಕ ಎ.ಎಸ್.ಪೊನ್ನಣ್ಣ ದೂರಿದ್ದಾರೆ.

ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆ ಕಾರ್ಯಕ್ರಮ ದಲ್ಲಿ ಮಾತನಾಡಿ, ವಿರಾಜಪೇಟೆ, ಗೋಣಿ ಕೊಪ್ಪ, ಪೊನ್ನಂಪೇಟೆ, ಭಾಗ ಮಂಡಲ ಇತರೆಡೆಗಳಲ್ಲಿ ಬಡ ಜನರ ಆರೋಗ್ಯ ಕ್ಕಾಗಿ ನೂತನ ಆಸ್ಪತ್ರೆ ಮತ್ತು ಮೇಲ್ದರ್ಜೆ ಗೇರಿಸಲು ಕೋಟಿಗಟ್ಟಲೆ ಅನುದಾನ, ಹಾಗೂ ಲೋಕೋಪಯೋಗಿ ಇಲಾಖೆಯ ರಸ್ತೆಗಳ ಅಭಿವೃದ್ಧಿಗೆ ರೂ.140 ಕೋಟಿ ಅನುದಾನ, ಸೇರಿದಂತೆ ಮುಖ್ಯವಾಗಿ ಕೊಡಗಿನ ಜಮ್ಮಬಾಣೆ ಸಮಸ್ಯೆಯನ್ನು ಬಗೆಹರಿಸಲಾಗಿದೆ. 20 ವರ್ಷಗಳಿಂದ ಆಗದಂತ ಅಭಿವೃದ್ಧಿ ಕಾಮಗಾರಿಗಳನ್ನು ನಾವು ಎರಡು ವರ್ಷಗಳಲ್ಲಿ ಮಾಡಿ ತೋರಿಸಿ ದ್ದೇವೆ. ಕೊಡಗಿನ ಆಚಾರ ವಿಚಾರ ಪರಂಪರೆ ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದೇವೆ ಎಂದು ಹೇಳಿದರು.

ಕಾಂಗ್ರೆಸ್ ಪಕ್ಷದ ಜಿಲ್ಲಾ ಅಧ್ಯಕ್ಷ ಧರ್ಮಜ ಉತ್ತಪ್ಪ ಅವರು ಮಾತನಾಡಿ ಕೊಡಗಿನ ಜಮ್ಮಬಾಣೆ ಸಮಸ್ಯೆಯನ್ನು ಶಾಸಕ ಪೊನ್ನಣ್ಣ ಅವರು ಬಗೆ ಹರಿಸಿದ್ದಾರೆ ಮುಂದಿನ ದಿನದಲ್ಲಿ ಗ್ರಾಮ ಪಂಚಾಯಿತಿ ಜಿಲ್ಲಾ ಮತ್ತು ತಾಲೂಕು ಪಂಚಾಯಿತಿಗಳ ಚುನಾವಣೆ ಹತ್ತಿರ ಬರುತ್ತಿದ್ದು ಕಾರ್ಯ ಕರ್ತರು ಹಿಂದುಳಿದ ನಾಯಕರನ್ನು ಒಗ್ಗೂಡಿಸಿಕೊಂಡು ತಳಮಟ್ಟದಿಂದ ಪಕ್ಷವನ್ನು ಸಂಘಟಿಸಬೇಕು. ನಮ್ಮ ಗೆಲುವಿಗೆ ಕಾಂಗ್ರೆಸ್ ಸರಕಾರ ಬಡ ಜನರ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡುತ್ತಿರುವುದೆ ಸಾಕ್ಷಿಯಾಗಿದೆ ಎಂದರು. ಕ್ರೀಡಾ ಪ್ರಾಧಿಕಾರದ ಉಪಾಧ್ಯಕ್ಷ ಚೆಪ್ಪುಡಿರ ಅರುಣ್ ಮಾಚಯ್ಯ, ಮಾತನಾಡಿದರು.

ಕಾಂಗ್ರೆಸ್ ಪಕ್ಷಕ್ಕೆ ನೂರಕ್ಕೂ ಹೆಚ್ಚು ಮಂದಿ ಸೇರ್ಪಡೆಗೊಂಡವರ ನೇತೃತ್ವ ವಹಿಸಿದ್ದ ಬಿಜೆಪಿ ಮುಖಂಡ ಸುಭಾಶ್ ನಾಣಯ್ಯ ಮಾತನಾಡಿ, ಜನರ ಕಷ್ಟವನ್ನು ಆಲಿಸಿ ಸಮಸ್ಯೆಯನ್ನು ಬಗೆಹರಿಸುವಂತ ಶಾಸಕರ ಕಾರ್ಯವನ್ನು ಮೆಚ್ಚಿ ಕಾಂಗ್ರೆಸ್‌ಗೆ ಸೇರ್ಪಡೆಗೊಂಡಿರುವುದಾಗಿ ತಿಳಿಸಿದರು. ವೇದಿಕೆಯಲ್ಲಿ ಉಪಸ್ಥಿತರಿದ್ದ ಜಿಲ್ಲಾ ಪ್ರಚಾರ ಸಮಿತಿ ಅಧ್ಯಕ್ಷ ಟಿ.ಪಿ.ರಮೇಶ್, ವಿಧಾನಪರಿಷತ್ ಮಾಜಿ ಸದಸ್ಯ ವೀಣಾ ಅಚ್ಚಯ್ಯ ಮಾತ ನಾಡಿದರು.

ವೇದಿಕೆಯಲ್ಲಿ ಪಕ್ಷದ ಮುಖಂಡರುಗಳಾದ ಕೊಡಗು ಹೆಗ್ಗಡೆ ಸಮಾಜದ ಪಿ.ಜಿ.ಅಯ್ಯಪ್ಪ, ಕೊಡವ ತಕ್ಕ ಜನಾಂಗ ಒಕ್ಕೂಟದ ಸರಚಂಗಪ್ಪ, ಅಲ್ಪ ಸಂಖ್ಯಾತ ಘಟಕದ ಜಿಲ್ಲಾ ಅಧ್ಯಕ್ಷ ಹನೀಫ್, ಜಿಲ್ಲಾ ಕಾಂಗ್ರೆಸ್ ಮಾಜಿ ಉಪಾಧ್ಯಕ್ಷ ಪಿ.ಕೆ.ಪೊನ್ನಪ್ಪ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪಿ.ರಂಜಿ ಪೂಣಚ್ಚ, ನಾಪೋಕ್ಲು ಅಬ್ದುಲ್ ರೆಹಮನ್ ಮತ್ತು ಇಸ್ಮಾಹಿಲ್, ದಲಿತ ಸಮಿತಿ ಜಿಲ್ಲಾ ಸಂಚಾಲಕ ದಿವಕರ್ ಹಾಗೂ ಪಕ್ಷದ ಪ್ರಮುಖರು ಉಪಸ್ಥಿತರಿದ್ದರು.

ಪ್ರದೇಶ ಕಾಂಗ್ರೆಸ್ ಕಮಿಟಿಯು ಕೆ.ಎಂ.ಬಾಲಕೃಷ್ಣ ಸ್ವಾಗತಿದರು. ಪ.ಜಾತಿ, ಪಂಗಡದ ಪ್ರಧಾನ ಕಾರ್ಯದರ್ಶಿ ವಿ.ಕೆ.ಸತೀಶ್ ವಂದಿಸಿದರು.

ಡಿ.26, ಮರಗೋಡು ರಸ್ತೆ ದುರಸ್ತಿಗೆ ಆಗ್ರಹಿಸಿ ರಸ್ತೆ ತಡೆ



ಮರಗೋಡು ಗ್ರಾಮವನ್ನು ಸಂಪರ್ಕಿಸುವ ರಸ್ತೆಯ ದುಸ್ಥಿತಿ

ಮಡಿಕೇರಿ, ಡಿ.23–ತಾಲೂಕಿನ ಮರಗೋಡು ಗ್ರಾಮವನ್ನು ಸಂಪರ್ಕಿಸುವ ರಸ್ತೆಗಳ ವ್ಯವಸ್ಥಿತ ನಿರ್ವಹಣೆಗೆ ಆಗ್ರಹಿಸಿ ಡಿ.26ರಂದು ಮರಗೋಡಿನಲ್ಲಿ ರಸ್ತೆ ತಡೆ ನಡೆಸುವುದಾಗಿ ಗ್ರಾಮಸ್ಥರು ಹಾಗೂ ಮರಗೋಡು ಆಟೋ ಚಾಲಕರ ಸಂಘದ ಪದಾಧಿಕಾರಿಗಳು ತಿಳಿಸಿದ್ದಾರೆ.

ಮರಗೋಡು ಗ್ರಾಮವನ್ನು ಜಿಲ್ಲಾ ಕೇಂದ್ರಕ್ಕೆ ಬೆಸೆಯುವ ಮಡಿಕೇರಿ–ಕತ್ತಲೆಕಾಡು–ಹುಲಿತಾಳ–ಮರಗೋಡು–ಕಟ್ಟೆಮಾಡು ರಸ್ತೆ ಹಾಗೂ ಮರಗೋಡು–ಅರೆಕಾಡು–ಸಿದ್ದಾಪುರ ರಸ್ತೆ ಕನಿಷ್ಟ ದುರಸ್ತಿ ಕಾರ್ಯವನ್ನು ಕಾಣದೆ ಹೊಂಡಗುಂಡಿಗಳಿಂದ ಕೂಡಿದೆ. ವಾಹನ ಹಾಗೂ ಜನ ಸಂಚಾರಕ್ಕೆ ಅಯೋಗ್ಯವಾಗಿ ಪರಿಣಮಿಸಿದೆ ಎಂದು ಆಟೋ ಚಾಲಕರ ಸಂಘದ ಅಧ್ಯಕ್ಷ ಪಿ.ಟಿ.ನಂದಕುಮಾರ್ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು. ಸುಮಾರು 15 ವರ್ಷಗಳಿಂದ ಮರಗೋಡು ಗ್ರಾಮ ಸಂಪರ್ಕ ರಸ್ತೆಗಳನ್ನು ದುರಸ್ತಿಪಡಿಸುವಂತೆ ಸಂಬಂಧಪಟ್ಟ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳನ್ನು ಆಗ್ರಹಿಸುತ್ತಾ ಬಂದಿದ್ದೇವೆ. ಆಯಾ ಸಂದರ್ಭಗಳಲ್ಲಿ ಭರವಸೆ ಮಾತ್ರವೇ ದೊರಕುತ್ತಿದೆ. ಆದರೆ ಇಂದಿಗೂ ರಸ್ತೆ ದುರಸ್ತಿಪಡಿಸುವ ಯಾವ ಕಾರ್ಯವು ನಡೆದಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಕೇವಲ 5 ಕಿ.ಮೀ. ದುರಸ್ತಿ: ಪ್ರಸಕ್ತ ಸಾಲಿನಲ್ಲಿಯೂ ರಸ್ತೆ ದುರಸ್ತಿ ಬಗ್ಗೆ ಸಂಬಂಧಪಟ್ಟವರನ್ನು ಒತ್ತಾಯಿಸಿದ್ದೆವು. ಆಗ ಮಡಿಕೇರಿ–ಕಟ್ಟೆಮಾಡು ನಡುವಿನ ಸುಮಾರು 23 ಕಿ.ಮೀ. ಹದಗೆಟ್ಟ ರಸ್ತೆಯಲ್ಲಿ ಕೇವಲ 5 ಕಿ.ಮೀ. ವ್ಯಾಪ್ತಿಯನ್ನು ಮಾತ್ರ ದುರಸ್ತಿಪಡಿಸುವುದಾಗಿ ಇಲಾಖೆಯವರು ಹೇಳುವುದರಲ್ಲಿ ಅರ್ಥವೇನಿದೆ ಎಂದು ಅವರು ಪ್ರಶ್ನಿಸಿದರು. ಹುಲಿತಾಳದಿಂದ ಮರಗೋಡಿಗೆ ಸಂಪರ್ಕಿಸುವ ರಸ್ತೆ ತೀವ್ರ ಸ್ವರೂಪದಲ್ಲಿ ಹದಗೆಟ್ಟಿರುವುದರಿಂದ ಹುಲಿತಾಳದಿಂದ ಮರಗೋಡಿಗೆ ಬರುವವರು ಪ್ರಸ್ತುತ ಹಾಕತ್ತೂರು ಗ್ರಾಮಕ್ಕಾಗಿ ಸುಮಾರು 8 ಕಿ.ಮೀ. ಬಳಸು ಹಾದಿಯಲ್ಲಿ ಬರುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಸರ್ಕಾರಿ ಬಸ್ ಸಂಕಷ್ಟ: ಪ್ರಸ್ತುತ ಬೆಳಗ್ಗಿನ ಬಸ್ ಬಿಟ್ಟರೆ, ಸಂಜೆ ಮಡಿಕೇರಿಯಿಂದ ಬರುವ ಸರ್ಕಾರಿ ಬಸ್ ಹುಲಿತಾಳದಿಂದ ಮರಳಿ ಹೋಗುತ್ತಿರುವುದರಿಂದ ವಿದ್ಯಾರ್ಥಿಗಳು, ಸಾರ್ವಜನಿಕರು ಸಂಕಷ್ಟಕ್ಕೆ ಸಿಲುಕಿರುವುದಾಗಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಗ್ರಾಮಸ್ಥರಾದ ತೊಂಡೀರ ಕೌಶಿಕ್, ಈಶ್ವರ್ ಹೆಚ್.ಎನ್., ಆಟೋ ಚಾಲಕರ ಸಂಘದ ಉಪಾಧ್ಯಕ್ಷ ಬಡುವಂಡ ಪ್ರದೀಪ್, ಕಾರ್ಯದರ್ಶಿ ಇಟ್ಟಣಿಕೆ ನವನೀತ್, ಖಜಾಂಚಿ ಬಿ.ಎಂ. ರಂಜು ಮಹೇಶ್ ಉಪಸ್ಥಿತರಿದ್ದರು.

ಅಪಘಾತದಲ್ಲಿ ತೀವ್ರ ಗಾಯಗೊಂಡಿದ್ದ ಕರುವನ್ನು ಸಲಹಿ ಮಾನವೀಯತೆ



ಕುಶಾಲನಗರ, ಡಿ.23– ಇಲ್ಲಿನ ಸರ್ಕಾರಿ ಮಾದರಿ ಪ್ರಾಥಮಿಕ ಶಾಲಾ ಮುಂಭಾಗ ಸೋಮವಾರ ರಾತ್ರಿ ಅಪರಿಚಿತ ವಾಹನ ಡಿಕ್ಕಿಯಾಗಿ ಕರುವೊಂದು ಗಂಭೀರವಾಗಿ ಗಾಯಗೊಂಡಿತ್ತು. ಬೆಳಗ್ಗೆ ಕರುವನ್ನು ಗಮನಿಸಿದ ಸ್ಥಳೀಯರು, ಕೊಡಗು ಅಭಿವೃದ್ಧಿ ಸಮಿತಿಯ ದಾವುದ್ ಮತ್ತಿತರರ ಪ್ರಮುಖರು ಪೌರ ಕಾರ್ಮಿಕರೊಡಗೂಡಿ ಸ್ವಂತ ವಾಹನದಲ್ಲಿ ಪಶು ವೈದ್ಯಕೀಯ ಕೇಂದ್ರಕ್ಕೆ ಸಾಗಿಸಿ ಚಿಕಿತ್ಸೆ ಕೊಡಿಸಿ ಜೀವ ಉಳಿಸಿ ಮಾನವೀಯತೆ ಮೆರೆದಿದ್ದಾರೆ.

ಇಂತಹ ಪ್ರಕರಣ ಸಂದರ್ಭ ಮೂಕ ಪ್ರಾಣಿಗಳ ಚಿಕಿತ್ಸೆಗೆ ಪಶು ವೈದ್ಯರ ಸಹಕಾರ ಅತಿ ಮುಖ್ಯ. ಸಕಾಲದಲ್ಲಿ ಚಿಕಿತ್ಸೆ ದೊರೆತರೆ ಜೀವ ಉಳಿಸಬಹುದು. ಇದಕ್ಕೆ ಸೂಕ್ತ ರೀತಿಯಲ್ಲಿ ವ್ಯವಸ್ಥೆ ಕಲ್ಪಿಸುವಂತೆ ಕೊಡಗು ಅಭಿವೃದ್ಧಿ ಸಮಿತಿ ಶಾಸಕರನ್ನು ಆಗ್ರಹಿಸಿದೆ.

ಇಂದು ಪೆರಾಜೆಯಲ್ಲಿ ಅರೆಭಾಷೆ ಕೂಡ್‌ಕಟ್ಟ್ ಕಾರ್ಯಕ್ರಮ

ಮಡಿಕೇರಿ, ಡಿ.23– ಅರೆಭಾಷೆ ಕೂಡ್‌ಕಟ್ಟ್ ಕಾರ್ಯಕ್ರಮವು ಡಿ. 24ರ ಬೆಳಿಗ್ಗೆ 10 ಗಂಟೆಗೆ ಪೆರಾಜೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಸಭಾಂಗಣದಲ್ಲಿ ನಡೆಯಲಿದೆ.

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಸದಾನಂದ ಮಾವಜಿ, ಪೆರಾಜೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ನಾಗೇಶ ಕುಂದಲ್ಪಾಡಿ, ಅರೆಭಾಷೆ ಸಾಹಿತಿ ಭವಾನಿ ಶಂಕರ ಹೊದ್ದೆಟ್ಟಿ, ಪೆರಾಜೆ ಗ್ರಾ.ಪಂ. ಮಟ್ಟದ ಸಂಜೀವಿನಿ ಒಕ್ಕೂಟದ ಅಧ್ಯಕ್ಷ ಭವಾನಿ ಕೊಳಂಗಾಯ, ಪೆರಾಜೆ ಗ್ರಾಮ ಗೌಡ ಸಮಿತಿ ಅಧ್ಯಕ್ಷ ಕೆ.ಕೆ.ಪದ್ಮಯ್ಯ, ಪೆರಾಜೆ ಗ್ರಾ.ಪಂ. ಅಧ್ಯಕ್ಷ ಚಂದ್ರಕಲಾ ಬಾಲಚಂದ್ರ ಬಳ್ಳಡ್ಕ, ಗ್ಯಾರಂಟಿ ಅನುಷ್ಠಾನ ಸಮಿತಿ ಸದಸ್ಯ ಮನು ಪೆರುಮುಂಡ ಇತರರು ಪಾಲ್ಗೊಳ್ಳಲಿದ್ದಾರೆ.

ಬೆಳಗ್ಗೆ 11.30 ಗಂಟೆಯಿಂದ ವಿಚಾರ ಗೋಷ್ಠಿ–ಸಂವಾದ ಕಾರ್ಯಕ್ರಮ ನಡೆಯಲಿದೆ. ಸುಳ್ಯ ಬರಹಗಾರ ಲೋಕೇಶ್ ಕುಂಚಡ್ಕ ಅರೆಭಾಷೆ ಇಂದು ನಾಳೆ, ಸುಳ್ಯ ನೆಹರೂ ಮೆಮೋರಿಯಲ್ ಕಾಲೇಜಿನ ಕನ್ನಡ ವಿಭಾಗದ ನಿವೃತ್ತ ಸಹಾಯಕ ಪ್ರಾಧ್ಯಾಪಕ ಸಂಜೀವ ಕುದ್ಪಾಜೆ ಅರೆ ಭಾಷೆ ಗೌಡ್ರಲ್ಲಿ ಬದಲಾದ ಮದುವೆ ಕ್ರಮಗಳು ಎಂಬ ವಿಷಯದ ಬಗ್ಗೆ ಮಾತನಾಡಲಿದ್ದಾರೆ.

ಬಳಿಕ ಮಧ್ಯಾಹ್ನ 2 ಗಂಟೆಯಿಂದ ಸೋಬಾನೆ ಪದ ಮತ್ತು ಕವನ ವಾಚನ, ನಂತರ ಮಧ್ಯಾಹ್ನ 3.30 ಗಂಟೆಗೆ ಸಮಾರೋಪ ಸಮಾರಂಭ ಮತ್ತು ಬಹುಮಾನ ವಿತರಣೆ ಕಾರ್ಯಕ್ರಮ ನಡೆಯಲಿದೆ.

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಸದಾನಂದ ಮಾವಜಿ, ಪೆರಾಜೆ ಶ್ರೀ ಶಾಸ್ತಾವು ದೇವ ಸ್ಥಾನದ ಮೊಕ್ತೇಸರ ಜಿತೇಂದ್ರ ನಿಡ್ಯಮಲೆ, ಸಂಪಾಜೆ ಹೋಬಳಿ ಆರೋಗ್ಯ ರಕ್ಷಾ ಸಮಿತಿ ಸದಸ್ಯ ಚಿದಾನಂದ ಪೀಚೆಮನೆ, ಅರೆಭಾಷೆ ಸಂಸ್ಕೃತಿ, ಸಾಹಿತ್ಯ ಅಕಾಡೆಮಿ ಮಾಜಿ ಸದಸ್ಯ ಸಂಗೀತ ರವಿರಾಜ್, ಚಿಗುರು ಯುವಕ ಮಂಡಲದ ಅಧ್ಯಕ್ಷ ರಮೇಶ ಮಜಿಕೋಡಿ ಪಾಲ್ಗೊಳ್ಳಲಿದ್ದಾರೆ.

ಜಿಲ್ಲಾಡಳಿತ ಮುಂಭಾಗದ ತಡೆಗೋಡೆ ಕಾಮಗಾರಿ ಪರಿಶೀಲಿಸಿದ ಲೋಕಾಯುಕ್ತ



ಮಡಿಕೇರಿ, ಡಿ.23– ಜಿಲ್ಲಾಡಳಿತ ಭವನದ ಮುಂಭಾಗದ ತಡೆಗೋಡೆಯ 2ನೇ ಹಂತದ ಕಾಮಗಾರಿ 3.45 ಕೋಟಿ ರೂ ವೆಚ್ಚದಲ್ಲಿ ಪೂರ್ಣಗೊಂಡಿದ್ದು, ಲೋಕಾಯುಕ್ತ ಮುಖ್ಯ ಇಂಜಿನಿಯರ್ ಮತ್ತು ಅಧಿಕಾರಿಗಳ ತಂಡ ಕಾಮ ಗಾರಿ ಪರಿಶೀಲನೆ ನಡೆಸಿತು.

ಲೋಕಾಯುಕ್ತ ಮುಖ್ಯ ಇಂಜಿನಿಯರ್ ರಮೇಶ್, ಲೋಕೋಪಯೋಗಿ ಇಲಾಖೆ ಇಂಜಿನಿಯರ್‌ಗಳಿಂದ ಮಾಹಿತಿ ಪಡೆದರು. ದ್ವಿತೀಯ ಹಂತದ ಕಾಮಗಾರಿಯ ವಿನ್ಯಾಸ, ಬಳಸಲಾದ ತಂತ್ರಜ್ಞಾನ, ಕಾಮಗಾರಿ ಮುಕ್ತಾಯಗೊಂಡ ಅವಧಿ, ಕಾಮಗಾರಿಯಲ್ಲಿ ಬಳಸಲಾದ ವಸ್ತುಗಳ ಗುಣಮಟ್ಟ ಸೇರಿದಂತೆ ವಿವಿಧ ಮಾಹಿತಿಗಳನ್ನು ಇಂಜಿನಿಯರ್‌ಗಳಿಂದ ಪಡೆದುಕೊಂಡರು.

ಲೋಕಾಯುಕ್ತ ಇಇ ಅರವಿಂದ್, ಪಿಡಬ್ಲ್ಯೂಡಿ ಇಇ ಇಬ್ರಾಹಿಂ, ಎಇಇ ಸತೀಶ್, ಗಿರೀಶ್ ಹಾಜರಿದ್ದರು.

ಸೂಲಗಿತ್ತಿ ಅಮ್ಮಣಿಗೆ ಜಾನಪದ ಅಕಾಡೆಮಿ ವಾರ್ಷಿಕ ಗೌರವ ಪ್ರಶಸ್ತಿ



ಮಡಿಕೇರಿ, ಡಿ.23–ಕರ್ನಾಟಕ ಜಾನಪದ ಅಕಾಡೆಮಿ ಕೊಡಮಾಡುವ ವಾರ್ಷಿಕ ಗೌರವ ಪ್ರಶಸ್ತಿಗೆ ಕೊಡಗಿನ ಹಿರಿಯ ಜಾನಪದ ಕಲಾವಿದರಾದ ಕುಡಿಯ ಸಮೂಹದ ಅಮ್ಮಣಿ ಆಯ್ಕೆಯಾಗಿದ್ದಾರೆ ಎಂದು ಅಕಾಡೆಮಿ ಅಧ್ಯಕ್ಷ ಗೊಲ್ಲಹಳ್ಳಿ ಶಿವಪ್ರಸಾದ್ ಮತ್ತು ರಿಜಿಸ್ಟ್ರಾರ್ ಎನ್. ನಮ್ರತ ಘೋಷಿಸಿದ್ದಾರೆ. ವಿರಾಜಪೇಟೆ ತಾಲೂಕಿನ ಹೆಗ್ಗಳ ಸಮೀಪದ ತೋರ ಗ್ರಾಮದ ಅಮ್ಮಣಿ ಕುಡಿಯ ಜನಾಂಗದ ಹಾಡುಗಾರಿಕೆ ಮತ್ತು ಸೂಲಗಿತ್ತಿ ವಿಭಾಗಕ್ಕೆ ಸಂಬಂಧಿಸಿದಂತೆ ಪ್ರಶಸ್ತಿಯನ್ನು ತಮ್ಮ ಮುಡಿಗೇರಿಸಿಕೊಂಡಿದ್ದಾರೆ. ಕೊಡಗಿನ ಕುಡಿಯ ಸಮಾಜಕ್ಕೆ ಸೇರಿದ ಅಮ್ಮಣಿ ಅವರು ಪತಿ ಭೀಮಯ್ಯ ಅವರೊಂದಿಗೆ ತೋರದಲ್ಲಿ ಕೃಷಿ ಚಟುವಟಿಕೆಗಳನ್ನು ನಡೆಸಿಕೊಂಡು ಬದುಕು ಕಟ್ಟಿಕೊಂಡಿದ್ದಾರೆ. ಕಳೆದ ಮೂರು ನಾಲ್ಕು ದಶಕಗಳಿಂದ ಕುಡಿಯ ಸಮೂ ಹದ ವಿಶಿಷ್ಟ ಸಂಸ್ಕೃತಿಯ ಜಾನಪದ ಹಾಡು ಮತ್ತು ಕುಣಿತವನ್ನು ರಕ್ತಗತ ಮಾಡಿಕೊಂಡಿರುವುದಲ್ಲದೆ, ಅದನ್ನು ಯುವ ಸಮೂಹಕ್ಕೆ ತಲುಪಿಸುವ ಮಹತ್ತರ ಕಾರ್ಯವನ್ನು ಮಾಡುತ್ತಿದ್ದಾರೆ.

ಮಿಲಿಯನೇರ್ ಫಾರ್ಮರ್ ಆಫ್ ಇಂಡಿಯಾ ಪ್ರಶಸ್ತಿ



ಕೃಷಿಕ ಚೀಯಕಪೂವಂಡ ಮಿಥುನ್ ಚಂಗಪ್ಪ, ಕೇಂದ್ರ ಮಾಜಿ ಸಚಿವ ಅಜಯ್ ಮಿಶ್ರಾರಿಂದ ಪ್ರಶಸ್ತಿ ಸ್ವೀಕರಿಸಿದರು.

ನಾಪೋಕ್ಲು, ಡಿ.23 (ದುಗ್ಗಳ)–ಇಲ್ಲಿಗೆ ಸಮೀಪದ ಬಲ್ಲಮಾವಟಿ ಗ್ರಾಮದ ಕೃಷಿಕ ಚೀಯಕಪೂವಂಡ ಮಿಥುನ್ ಚಂಗಪ್ಪ ಅವರ ಕೃಷಿ ಚಟುವಟಿಕೆಯನ್ನು ಗುರುತಿಸಿ ಕೃಷಿ ಜಾಗರಣ್ ವತಿಯಿಂದ ಮಿಲಿಯನೇರ್ ಫಾರ್ಮರ್ ಆಫ್ ಇಂಡಿಯಾ ಪ್ರಶಸ್ತಿ–2025 ಅನ್ನು ನೀಡಿ ಗೌರವಿಸಲಾಯಿತು.

ದೆಹಲಿಯಲ್ಲಿ ಇತ್ತೀಚೆಗೆ ನಡೆದ ಸಮಾರಂಭದಲ್ಲಿ ಮಿಥುನ್ ಚಂಗಪ್ಪ ಕೇಂದ್ರ ಮಾಜಿ ಸಚಿವ ಅಜಯ್ ಮಿಶ್ರಾ ಅವರಿಂದ ಪ್ರಶಸ್ತಿಯನ್ನು ಸ್ವೀಕರಿಸಿದರು. ನಾಪೋಕ್ಲುವಿನ ಫಾರ್ಮರ್ ಪ್ರೊಡ್ಯೂಸರ್ ಆರ್ಗನೈಸೇಷನ್ ಮಿಥುನ್ ಅವರ ಹೆಸರನ್ನು ಪ್ರಶಸ್ತಿಗೆ ಶಿಫಾರಸ್ಸು ಮಾಡಿತ್ತು.

ಜ.9ರಿಂದ ರಾಷ್ಟ್ರೀಯ ಮಟ್ಟದ ಫುಟ್ಬಾಲ್ ಪಂದ್ಯಾವಳಿ

ಸಿದ್ದಾಪುರ,ಡಿ.23–ಯಂಗ್ ಇಂಡಿಯಾ ಯೂಥ್ ಕ್ಲಬ್‌ನ 55ನೇ ಸುವರ್ಣ ಮಹೋತ್ಸವದ ಸಂಭ್ರಮಕ್ಕಾಗಿ ರಾಷ್ಟ್ರೀಯ ಮಟ್ಟದ ಮುಕ್ತ 5 ಫುಟ್ಬಾಲ್ ಪಂದ್ಯಾವಳಿ ಜ. 9ರಿಂದ 11 ರವರೆಗೆ ಪಾಲಿಬೆಟ್ಟ ಮೈದಾನದಲ್ಲಿ ನಡೆಯಲಿದೆ ಎಂದು ಯಂಗ್ ಇಂಡಿಯಾ ಯೂಥ್ ಕ್ಲಬ್ ಅಧ್ಯಕ್ಷ ಪಿ.ಎ ಸಲೀಂ ತಿಳಿಸಿದ್ದಾರೆ. ಕರ್ನಾಟಕ, ಕೇರಳ, ತಮಿಳುನಾಡು ಸೇರಿದಂತೆ ವಿವಿಧ ರಾಜ್ಯಗಳ 30ಕ್ಕೂ ಹೆಚ್ಚು ತಂಡಗಳು ಭಾಗವಹಿಸಲಿದ್ದು, ತಂಡಗಳ ನೋಂದಾವಣೆ ಕಾರ್ಯ ನಡೆಯುತ್ತಿದೆ ಎಂದರು.

ಯುವಕರು ಕೃಷಿಯಲ್ಲಿ ತೊಡಗಿ ಸ್ವಾವಲಂಬಿಗಳಾಗಿ



ಯುವ ರೈತ ಯೋಗೀಶ್ ಅವರನ್ನು ಸನ್ಮಾನಿಸಲಾಯಿತು.

ಚಾಮರಾಜನಗರ, ಡಿ.23– ಯುವಕರು ಸರ್ಕಾರಿ ಕೆಲಸ ಅವಲಂಬಿಸದೆ ಕೃಷಿಯಲ್ಲಿ ತೊಡಗಿ ಸ್ವಾವಲಂಬಿಗಳಾಗಿ ಸಮಾಜಕ್ಕೆ ಮಾದರಿಯಾಗಿ ಬದುಕಬೇಕು ಎಂದು ಎಪಿಎಂಸಿ ಮಾಜಿ ಅಧ್ಯಕ್ಷ ಬಿ.ಕೆ.ರವಿಕುಮಾರ್ ತಿಳಿಸಿದರು.

ವಿಶ್ವ ರೈತ ದಿನಾಚರಣೆ ಅಂಗವಾಗಿ ತಾಲೂಕಿನ ವಿ.ಸಿ.ಹೊಸೂರು ಗ್ರಾಮದ ಯುವ ರೈತ ಯೋಗೀಶ್ ಅವರನ್ನು ಸನ್ಮಾನಿಸಿ ಮಾತನಾಡಿದ ಅವರು, ಇಂದು ಯುವಕರು ಸರ್ಕಾರಿ ಕೆಲಸದ ಬೆನ್ನು ಹತ್ತಿದ್ದು, ಎಲ್ಲರಿಗೂ ಉದ್ಯೋಗ ದೊರಕದೆ ಪರಿತಪಿಸುತ್ತಿದ್ದಾರೆ. ಆದರೆ ತಮ್ಮ ಪೂರ್ವಿಕರು ಹಾಕಿ ಕೊಟ್ಟ ಮಾರ್ಗದಲ್ಲಿ ಅಂದರೆ ಕೃಷಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳ ಬೇಕು. ದುಡಿದು ಶ್ರಮಪಟ್ಟು ಕೃಷಿ ಮಾಡಿದರೆ ಯಶಸ್ಸು ಸಿಗುತ್ತದೆ. ಆರ್ಥಿಕ ಪರಿಸ್ಥಿತಿ ಉತ್ತಮವಾಗಿ ಸ್ವಾವಲಂಬಿಯಾಗಿ ನೆಮ್ಮದಿಯ ಬದುಕನ್ನು ನಡೆಸಬಹುದು ಎಂದರು.

ವಿ.ಸಿ.ಹೊಸೂರಿನ ಯುವ ರೈತ ನಾಗೇಶ್ ಇಂಜಿನಿಯರ್ ಆಗಿ ಲಕ್ಷಾಂತರ ಸಂಬಳ ಬರುತ್ತಿದ್ದು, ವಿದೇಶದಲ್ಲಿದ್ದರು. ಆದರೆ ಆ ವೃತ್ತಿ ತೊರೆದು ಇಂದು ಸ್ವಗ್ರಾಮಕ್ಕೆ ಆಗಮಿಸಿ ಕೃಷಿ ಅವಲಂಬಿಸಿ ಸಾವಯವ ಕೃಷಿ ಮೂಲಕ ಆಧುನಿಕ ಪದ್ಧತಿ ಅಳವಡಿಸಿಕೊಂಡು ಸ್ವಾವಲಂಬಿ ಬದುಕು ಕಟ್ಟಿಕೊಂಡಿದ್ದಾರೆ. ಆ ಮೂಲಕ ಇತರ ಯುವಕರಿಗೆ ಮಾದರಿಯಾಗಿದ್ದಾರೆ ಎಂದರು.

ಯುವ ರೈತ ಯೋಗೀಶ್ ಮಾತನಾಡಿ, ಕೃಷಿ ಕ್ಷೇತ್ರದಲ್ಲಿರುವ ನೆಮ್ಮದಿ ಲಕ್ಷ ಲಕ್ಷ ಸಂಬಳ ಬರುವ ಕೆಲಸದಲ್ಲಿ ಸಿಗುವುದಿಲ್ಲ. ಯೋಜನಾ ಬದ್ಧವಾಗಿ ವ್ಯವಸಾಯ ಮಾಡಿದರೆ ಕೃಷಿ ಲಾಭದಾಯಕ ಎಂದರು. ಮಾಜಿ ಎಪಿಎಂಸಿ ಅಧ್ಯಕ್ಷ ಸೋಮೇಶ್, ಮಾಜಿ ಗ್ರಾಪಂ ಸದಸ್ಯ ನಾಗೇಂದ್ರಸ್ವಾಮಿ, ಮುಖಂಡ ರವಿ ಹಾಜರಿದ್ದರು.

ಕಾಡು ಪ್ರಾಣಿಗಳ ಹಾವಳಿ ತಡೆಗೆ ತುರ್ತು ಕ್ರಮ ವಹಿಸಿ

ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಸೂಚನೆ



ಚಾಮರಾಜನಗರದಲ್ಲಿ ನಡೆದ ಸಭೆಯಲ್ಲಿ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಮಾತನಾಡಿದರು.

ಚಾಮರಾಜನಗರ, ಡಿ.23– ಜಿಲ್ಲೆಯಲ್ಲಿ ಕಾಡು ಪ್ರಾಣಿಗಳ ಹಾವಳಿ ಹೆಚ್ಚಾಗಿದ್ದು, ಅದನ್ನು ಪರಿಣಾಮಕಾರಿಯಾಗಿ ತಡೆಯಲು ಅಗತ್ಯವಿರುವ ಎಲ್ಲಾ ಕ್ರಮಗಳನ್ನು ತುರ್ತಾಗಿ ತೆಗೆದುಕೊಳ್ಳುವಂತೆ ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಸೂಚಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಕಂದಾಯ, ಅರಣ್ಯ, ಕುಡಿಯುವ ನೀರು ಹಾಗೂ ಇನ್ನಿತರ ಪ್ರಮುಖ ವಿಷಯಗಳಿಗೆ ಸಂಬಂಧಿಸಿದಂತೆ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕಾಡು ಪ್ರಾಣಿಗಳು ಪದೇ ಪದೇ ಅರಣ್ಯದಿಂದ ಹೊರ ಬಂದು ಜನವಸತಿ, ಜಮೀನು ಪ್ರದೇಶಗಳ ಬಳಿ ಕಾಣಿಸಿಕೊಳ್ಳುತ್ತಿದೆ. ಇದರಿಂದ ಜನರು ಭಯಬೀತರಾಗಿದ್ದಾರೆ. ಗ್ರಾಮಸ್ಥರ ಜಾನುವಾರುಗಳಿಗೆ ರಕ್ಷಣೆ ನೀಡಬೇಕಿದೆ. ಜನರ ಜೀವಕ್ಕೆ ಯಾವುದೇ ತೊಂದರೆಯಾಗದಂತೆ ಕೂಡಲೇ ಅಗತ್ಯವಿರುವ ಎಲ್ಲಾ ಮುಂಜಾಗ್ರತಾ ಕ್ರಮಗಳನ್ನು ತಕ್ಷಣ ಕೈಗೊಳ್ಳಬೇಕು. ಆ ಮೂಲಕ ಜನರ ಆತಂಕ ದೂರ ಮಾಡಬೇಕೆಂದು ತಿಳಿಸಿದರು.

ಇದೇ ವೇಳೆ ಪ್ರಾಣಿಗಳ ಚಲನವಲನದ ಮೇಲೆ ನಿಗಾ ಇಡಲು ಜಿಲ್ಲೆಯ ಪ್ರತಿ ವನ್ಯಜೀವಿ ವಿಭಾಗಕ್ಕೆ ಪ್ರತ್ಯೇಕ ಅತ್ಯಾಧುನಿಕ ಥರ್ಮಲ್ ಡ್ರೋನ್ ಅವಶ್ಯಕತೆ ಇದೆ. ಜಿಲ್ಲೆಗೆ ಪ್ರತ್ಯೇಕ ಚಿರತೆ ಟಾಸ್ಕ್ ಪೋರ್ಸ್ ಸಮಿತಿ ರಚನೆಯಾಗಬೇಕಿದೆ. ಇಂತಹ ಕ್ರಮಗಳಿಂದ ಪರಿಣಾಮಕಾರಿಯಾಗಿ ನಿಗಾ ವಹಿಸಲು ಸಾಧ್ಯವಾಗುತ್ತದೆ ಎಂದು ಅರಣ್ಯ ಅಧಿಕಾರಿಗಳು ಸಭೆಯ ಗಮನಕ್ಕೆ ತಂದರು.

ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾ ಉಸ್ತುವಾರಿ ಸಚಿವರು ಥರ್ಮಲ್ ಡ್ರೋನ್ ಖರೀದಿಸಲು ಅಧಿಕಾರಿಗಳಿಗೆ ಸೂಚಿಸಿದರು. ಜೊತೆಗೆ ಪ್ರತ್ಯೇಕ ಚಿರತೆ ಟಾಸ್ಕ್ ಪೋರ್ಸ್ ಸಮಿತಿ ರಚನೆಗೆ ಕೂಡಲೇ ಪ್ರಸ್ತಾವನೆ ಸಲ್ಲಿಸಲು ನಿರ್ದೇಶನ ನೀಡಿದರು.

> ಕಾಡಿಗೆ ಸಮೀಪದ ಗ್ರಾಮೀಣ ಪ್ರದೇಶಗಳಲ್ಲಿ ಕಾಡುಪ್ರಾಣಿಗಳ ಹಾವಳಿ ಬಗ್ಗೆ ಇತ್ತೀಚೆಗೆ ಹೆಚ್ಚು ವರದಿಯಾಗುತ್ತಿದೆ. ಯಾವುದೇ ಭಾಗದಲ್ಲಿ ಸಮಸ್ಯೆ ಬಂದರೆ ಕೂಡಲೇ ಅಧಿಕಾರಿಗಳು ಧಾವಿಸಬೇಕು. ವಿದ್ಯುತ್, ಕುಡಿಯುವ ನೀರು ಕಾಮಗಾರಿಗೆ ವಿಳಂಬ ಧೋರಣೆ ಅನುಸರಿಸಬಾರದು. – ಸಿ.ಪುಟ್ಟರಂಗಶೆಟ್ಟಿ, ಶಾಸಕ.

ಕಾಡು ಪ್ರಾಣಿಗಳಿಂದ ಆಗಿರುವ ಬೆಳೆ ಹಾನಿ ಹಾಗೂ ಇನ್ನಿತರ ನಷ್ಟಗಳಿಗೆ ಇದುವರೆಗೆ ನೀಡಲಾಗಿರುವ ಪರಿಹಾರದ ಬಗ್ಗೆ ಮಾಹಿತಿ ಪಡೆದ ಸಚಿವರು ಕಾಡಂಚಿನ ಗ್ರಾಮಗಳ ಜನರಿಗೆ ಒದಗಿಸಬೇಕಿರುವ ಸೌಲಭ್ಯಗಳಿಗೆ ವಿಳಂಬ ಮಾಡಬಾರದು. ಅರಣ್ಯಕ್ಕೆ ಹೊಂದಿಕೊಂಡಿರುವ ಗ್ರಾಮಗಳಿಗೆ ಅರಣ್ಯ ಅಧಿಕಾರಿಗಳು ಹೆಚ್ಚು ಭೇಟಿ ನೀಡಿ ಅವರ ಸಮಸ್ಯೆಗಳನ್ನು ಆಲಿಸಬೇಕು. ಜನರಿಗೆ ಧೈರ್ಯ ತುಂಬಬೇಕು. ಜಾಗೃತಿ ಮೂಡಿಸಬೇಕು. ಪ್ರಾಣಿಗಳು ಜನವಸತಿ, ಜಮೀನುಗಳಿಗೆ ಬಾರದಂತೆ ನೋಡಿಕೊಳ್ಳಲು ಕಣ್ಗಾವಲು ಇರಬೇಕು ಎಂದರು.

ಕುಡಿಯುವ ನೀರಿಗೆ ಎಲ್ಲಿಯೂ ಕೊರತೆಯಾಗಬಾರದು. ಅರಣ್ಯ ಪ್ರದೇಶಗಳಲ್ಲಿ ಇರುವ ಜನರಿಗೆ ಮೂಲ ಸೌಕರ್ಯಗಳಿಗೆ ಯಾವುದೇ ಅಡ್ಡಿ ಮಾಡಬಾರದು. ನೀರು, ವಿದ್ಯುತ್‌ನಂತಹ ಅಗತ್ಯ ಅವಶ್ಯಕತೆಗಳನ್ನು ಒದಗಿಸಬೇಕು. ಈಗಾಗಲೇ ಆರಂಭವಾಗಿರುವ ಕಾಮಗಾರಿಗೆ ಯಾವುದೇ ತಡೆ ನೀಡದೇ ಜನರ ಸಮಸ್ಯೆಗಳಿಗೆ ಪರಿಹಾರ ನೀಡಬೇಕು ಎಂದು ಸಚಿವರು ತಿಳಿಸಿದರು.

ಶಾಸಕ ಎ.ಆರ್.ಕೃಷ್ಣಮೂರ್ತಿ ಮಾತನಾಡಿ, ಬಿಳಿಗಿರಿರಂಗನಬೆಟ್ಟ ವ್ಯಾಪ್ತಿ ಹೆಚ್ಚು ಮೊತ್ತದ ಕುಡಿಯುವ ನೀರಿನ ಯೋಜನೆಗೆ ತಡೆ ನೀಡಲಾಗಿದೆ. ಜನರಿಗೆ ನೀರು ಒದಗಿಸುವ ಯೋಜನೆ ಅನುದಾನ ಬಳಕೆಯಾಗದಿದ್ದರೆ ಹೇಗೆ? ಆಕ್ಷೇಪಣೆಗಳಿದ್ದರೆ ಆರಂಭದಲ್ಲಿಯೇ ಅರಣ್ಯ ಇಲಾಖೆ ತಿಳಿಸಬೇಕಿತ್ತು. ಪ್ರಸ್ತುತ ಯೋಜನೆಗೆ ಇರುವ ತೊಡಕು ನಿವಾರಿಸಿ ಕುಡಿಯುವ ನೀರಿನ ಯೋಜನೆ ಕಾರ್ಯಗತಗೊಳಿಸಿ ಎಂದರು.

ಅರಣ್ಯ, ಕಂದಾಯ ಅಧಿಕಾರಿಗಳು ನಡೆಸಬೇಕಾದ ಜಂಟಿ ಸರ್ವೆ ಇನ್ನಿತರ ವಿಷಯಗಳ ಕುರಿತು ಸಭೆಯಲ್ಲಿ ವಿವರವಾಗಿ ಚರ್ಚಿಸಲಾಯಿತು.

ಸಭೆಯಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಹೆಚ್.ವಿ. ಚಂದ್ರು, ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ, ಚೂಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್ ಮುನ್ನಾ, ಜಿಲ್ಲಾಧಿಕಾರಿ ಶಿಲ್ಪಾನಾಗ್, ಜಿಪಂ ಸಿಇಓ ಮೋನಾರೋತ್, ಎಸ್ಪಿ ಡಾ.ಬಿ.ಟಿ. ಕವಿತಾ, ಎಸಿ ದಿನೇಶ್ ಕುಮಾರ್ ಮೀನಾ, ಮಲೆ ಮಹದೇಶ್ವರ ವನ್ಯಜೀವಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಭಾಸ್ಕರ್, ಕಾವೇರಿ ವನ್ಯಜೀವಿ ವಿಭಾಗದ ಉಪ ಸಂರಕ್ಷಣಾಧಿಕಾರಿ ಸುರೇಂದ್ರ ಇನ್ನಿತರ ವಿಭಾಗದ ಅರಣ್ಯ ಅಧಿಕಾರಿಗಳು, ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ನಂಜೇದೇವನಪುರ, ಉಡಿಗಾಲ ಬಳಿ ಬೀಡುಬಿಟ್ಟ ಹುಲಿಗಳು

ಅರಣ್ಯ ಇಲಾಖೆ ಅಧಿಕಾರಿಗಳಿಗೆ ಸವಾಲಾದ ಹುಲಿ ಸೆರೆ ಕಾರ್ಯಾಚರಣೆ



ಕಾರ್ಯಾಚರಣೆಯಲ್ಲಿ ಸಾಕಾನೆಯೊಂದಿಗೆ ಅರಣ್ಯ ಇಲಾಖೆ ಅಧಿಕಾರಿಗಳು ಭಾಗವಹಿಸಿರುವುದು.

ಚಾಮರಾಜನಗರ, ಡಿ.23– ತಾಲೂಕಿನ ನಂಜೇದೇವನಪುರ ಹಾಗೂ ಉಡಿಗಾಲ ಗ್ರಾಮದ ನಡುವಿನ ಕಲ್ಲು ಕ್ವಾರೆ ಹಾಗೂ ಜಮೀನುಗಳಲ್ಲಿ 5 ಹುಲಿಗಳು ಬೀಡು ಬಿಟ್ಟಿದ್ದು, ಅವುಗಳನ್ನು ಒಂದೇ ಬಾರಿಗೆ ಸೆರೆ ಹಿಡಿಯುವುದು ಅರಣ್ಯ ಇಲಾಖೆ ಸವಾಲಾಗಿ ಪರಿಣಮಿಸಿದೆ.

ಹುಲಿಗಳನ್ನು ಸೆರೆ ಹಿಡಿಯಲು ಸಾಕಷ್ಟು ಪಶು ವೈದ್ಯರಿಲ್ಲದೆ ಕಳೆದ 4 ದಿನಗಳಿಂದ ಅರಣ್ಯ ಇಲಾಖೆ ಅಧಿಕಾರಿಗಳು ಹುಲಿಗಳ ಪತ್ತೆ ಕಾರ್ಯಾಚರಣೆಯಲ್ಲೇ ದಿನ ದೂಡುತ್ತಿದ್ದಾರೆ ಎಂಬ ಆರೋಪ ಕೇಳಿ ಬರುತ್ತಿದೆ.

ಹುಲಿಗಳ ಹೆಜ್ಜೆ ಗುರುತು ಪತ್ತೆ: ನಂಜೇದೇವನಪುರ, ಉಡಿಗಾಲ ನಡುವಿನ ಕಾಲು ದಾರಿ ಸಮೀಪದ ಪೊದೆಯೊಂದರಲ್ಲಿ ಹುಲಿಗಳು ಇರುವುದು ಭಾನುವಾರ ಡ್ರೋನ್ ಕ್ಯಾಮರಾದಲ್ಲಿ ಸೆರೆಯಾಗಿತ್ತು. ಸೋಮವಾರ ಆನೆ ಮಡುವಿನ ಕೆರೆಯ ರಸ್ತೆಯಲ್ಲಿ ಹುಲಿಗಳ ಹೆಜ್ಜೆಯ ಗುರುತು ಕಂಡುಬಂದಿವೆ. ಅಲ್ಲದೇ ತೋಟವೊಂದರ ಸಿಸಿ ಕ್ಯಾಮರಾದಲ್ಲಿಯೂ ಹುಲಿ ಸಂಚಾರದ ದೃಶ್ಯ ಸೆರೆಯಾಗಿದ್ದು, ಗ್ರಾಮಸ್ಥರಲ್ಲಿ ಮತ್ತಷ್ಟು ಆತಂಕ ಹೆಚ್ಚಾಗಿದೆ ಎನ್ನಲಾಗಿದೆ.

ಹಿರಿಯ ಅಧಿಕಾರಿಗಳೊಂದಿಗೆ ಚರ್ಚೆ: ಐದೂ ಹುಲಿಗಳನ್ನು ಸೆರೆ ಹಿಡಿಯುವುದೇ ದೊಡ್ಡ ಸವಾಲಾಗಿದೆ. ಈ ಎಲ್ಲಾ ಹುಲಿಗಳಿಗೆ ಒಮ್ಮೆಗೆ ಅರವಳಿಕೆ ಚುಚ್ಚು ಮದ್ದು ನೀಡುವುದು ಸುಲಭದ ಮಾತಲ್ಲ. ಹೀಗಾಗಿ ಕಾರ್ಯಾಚರಣೆ ಯಾವ ಸ್ವರೂಪದಲ್ಲಿರಬೇಕೆಂಬುದರ ಬಗ್ಗೆ ವನ್ಯಜೀವಿ ತಜ್ಞರು ಹಾಗೂ ಹಿರಿಯ ಅರಣ್ಯಾಧಿಕಾರಿಗಳ ಸಲಹೆಯನ್ನು ಅರಣ್ಯ ಇಲಾಖೆ ಅಧಿಕಾರಿಗಳು ಪಡೆಯುತ್ತಿದ್ದಾರೆ.

> ಹುಲಿಗಳ ಸೆರೆ ಕಾರ್ಯಾಚರಣೆ ಸಂಬಂಧ ವನ್ಯಜೀವಿ ತಜ್ಞರು ಹಾಗೂ ಟೈಗರ್ ಪ್ರಾಜೆಕ್ಟ್ ಅಧಿಕಾರಿಗಳೊಂದಿಗೆ ಈಗಾಗಲೇ ಸಭೆ ನಡೆಸಲಾಗಿದೆ. ಹುಲಿಗಳ ಸೆರೆಗೆ ಹಿರಿಯ ಅಧಿಕಾರಿಗಳ ಅನುಮತಿಗಾಗಿ ಕಾಯುತ್ತಿದ್ದೇವೆ. ರಾತ್ರಿ ವೇಳೆ ಥರ್ಮಲ್ ಡ್ರೋನ್, ಬೆಳಗ್ಗೆ ನಾರ್ಮಲ್ ಡ್ರೋನ್ ಬಳಕೆ ಮಾಡುವ ಮೂಲಕ ಹುಲಿಗಳ ಚಲನವಲಗಳ ಮೇಲೆ ನಿಗಾ ವಹಿಸಲಾಗುತ್ತಿದೆ –ಶ್ರೀಪತಿ, ಡಿಸಿಎಫ್, ಬಿಳಿಗಿರಿರಂಗನ ಬೆಟ್ಟ ಹುಲಿ ಸಂರಕ್ಷಿತಾರಣ್ಯ ಪ್ರದೇಶ.

ಹುಲಿಗಳ ಸೆರೆಗೆ 8 ತಂಡ ರಚನೆ: ಹುಲಿಗಳ ಸೆರೆ ಕಾರ್ಯಾಚರಣೆಗಾಗಿ ಈಗಾಗಲೇ 8 ತಂಡಗಳನ್ನು ರಚನೆ ಮಾಡಲಾಗಿದ್ದು, ಇದರೊಂದಿಗೆ ಮೂರು ಡ್ರೋನ್ ತಂಡಗಳು ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿವೆ ಎಂದು ಬಿಳಿಗಿರಿರಂಗನಬೆಟ್ಟ ಹುಲಿ ಸಂರಕ್ಷಿತಾರಣ್ಯ ಪ್ರದೇಶದ ಡಿಸಿಎಫ್ ಶ್ರೀಪತಿ ತಿಳಿಸಿದರು. ಗ್ರಾಮದಲ್ಲಿ ಒಂದು ತಾಯಿ ಹುಲಿ ಹಾಗೂ ನಾಲ್ಕು ಮರಿ ಹುಲಿಗಳು ಇದ್ದು, ಹುಲಿ ಮರಿಗಳು ಕೂಡ ದೊಡ್ಡದಾಗಿವೆ. ಹೀಗಾಗಿ ಹುಲಿಗಳ ಸೆರೆ ಕಾರ್ಯಾಚರಣೆಗೆ ಸಾಕಷ್ಟು ಸಿದ್ಧತೆ ಮಾಡಲಾಗಿದ್ದು, 100ಕ್ಕೂ ಹೆಚ್ಚು ಸಿಬ್ಬಂದಿ ಬಳಕೆ ಮಾಡಿಕೊಳ್ಳಲಾಗುತ್ತಿದೆ ಎಂದರು.

ನಿಷೇಧಿತ ಕ್ವಾರಿ ಹಾಗೂ ಕೃಷಿ ಭೂಮಿಯಲ್ಲಿ ಹುಲಿಗಳು ಬೀಡು ಬಿಟ್ಟಿದ್ದು, ಈ ಬಗ್ಗೆ ಸಿಪಿಎಫ್ ಗಮನಕ್ಕೆ ತಂದಿದ್ದೇವೆ. ಹುಲಿಗಳ ಸೆರೆ ಹಿಡಿಯುವ ಕಾರ್ಯಾಚಾರಣೆ ಯಶಸ್ವಿಯಾಗಲಿದೆ. ಸೂಕ್ತ ಸ್ಥಳದಲ್ಲಿ ಕೂಡ ಬೋನ್ ಅಳವಡಿಕೆ ಮಾಡಲಾಗಿದೆ ಎಂದು ತಿಳಿಸಿದರು.

ಬೆಂಗಳೂರಿನ ಆಕ್ವಿನ್ ಸಮಿತಿ ಪದಾಧಿಕಾರಿಗಳಿಗೆ ಸನ್ಮಾನ



ಕಾರ್ಯಕ್ರಮದಲ್ಲಿ ಬೆಂಗಳೂರಿನ ಆಕ್ವಿನ್ ಸಮಿತಿ ಪದಾಧಿಕಾರಿಗಳನ್ನು ಸನ್ಮಾನಿಸಲಾಯಿತು.

ಗುಂಡ್ಲುಪೇಟೆ, ಡಿ.23–ತಾಲೂಕಿನ ಹೊನ್ನೇಶೆಟ್ಟರ ಹುಂಡಿ ಗ್ರಾಮದ ಸರ್ಕಾರಿ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆ ವಿದ್ಯಾರ್ಥಿಗಳಿಗೆ ಉಚಿತವಾಗಿ ಬ್ಯಾಗ್ ವಿತರಿಸಿದ ಬೆಂಗಳೂರಿನ OCWEN (ಆಕ್ವಿನ್) ಸಮಿತಿ ಪದಾಧಿಕಾರಿಗಳನ್ನು ಶಾಲೆ ವತಿಯಿಂದ ಸನ್ಮಾನಿಸಲಾಯಿತು.

ಈ ಸಂಸ್ಥೆ ಪದಾಧಿಕಾರಿಗಳು 2025–26ನೇ ಸಾಲಿನಲ್ಲಿ ಸರ್ಕಾರಿ ಶಾಲೆಯಲ್ಲಿ 1 ರಿಂದ 8ನೇ ತರಗತಿವರೆಗೆ ವ್ಯಾಸಂಗ ಮಾಡುತ್ತಿರುವ 165 ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಶಾಲಾ ಬ್ಯಾಗ್ ವಿತರಣೆ ಮಾಡಿದರು.

ಈ ವೇಳೆ ಫೋಯಲ್, ಮೋಹನ್, ಅಪ್ಪಣ್ಣ, ವಿಜಯ್, ಜಂಗಲ್ ರೆಸಾರ್ಟ್ ಕೃಷ್ಣ, ಮುಖ್ಯ ಶಿಕ್ಷಕಿ ಗಾಯತ್ರಿ, ಶಿಕ್ಷಕರಾದ ಶಿವನಂಜು, ಶಿವಕುಮಾರ್, ಸಂತೋಷ್ ಕುಮಾರ್, ಮಮತ, ಮಲ್ಲೇಶ್, ಕೊಟ್ರೇಶ್, ದೇವರಾಜು, ಗ್ರಾಮಸ್ಥ ಸೋಮಣ್ಣ ಮೊದಲಾದವರು ಭಾಗ ವಹಿಸಿದ್ದರು.

ಇಂದು ವಿಶೇಷ ಲೋಕ್ ಅದಾಲತ್

ಚಾಮರಾಜನಗರ, ಡಿ.23– ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಿಂದ ರಾಷ್ಟ್ರೀಯ ನ್ಯಾಯಾಂಗ ದತ್ತಾಂಶ ಗ್ರಿಡ್‌ನಲ್ಲಿ ಬಾಕಿ ಇರುವ ಪ್ರಕರಣಗಳನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರದ ನಿರ್ದೇಶನದನ್ವಯ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಜಿಲ್ಲೆಯ ನ್ಯಾಯಾಲಯಗಳಲ್ಲಿ ಬಾಕಿ ಇರುವ ಭೂ ಸ್ವಾಧೀನ ಪ್ರಕರಣಗಳು ಹಾಗೂ ಭೂ ಸ್ವಾಧೀನ ಪ್ರಕರಣಕ್ಕೆ ಸಂಬಂಧಿಸಿದ ಅಮಲ್ಜಾರಿ ಪ್ರಕರಣಗಳನ್ನು ಇತ್ಯರ್ಥಪಡಿಸಲು ವಿಶೇಷ ಲೋಕ್ ಅದಾಲತ್ ಅನ್ನು ಜ.24 ರಂದು ಮಧ್ಯಾಹ್ನ 2.30ರಿಂದ ಸಂಜೆ 5.30ರವರೆಗೆ ಹಮ್ಮಿಕೊಳ್ಳಲಾಗಿದೆ. ಸಾರ್ವಜನಿಕರು ಸದುಪಯೋಗಪಡಿಸಿಕೊಂಡು ಬಾಕಿ ಇರುವ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳುವಂತೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಈಶ್ವರ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಿಲ್ಲೆಯಾದ್ಯಂತ ದ್ವೇಷ ಭಾಷಣ ಮಸೂದೆ ವಿರೋಧಿಸಿ ಬಿಜೆಪಿ ಪ್ರತಿಭಟನೆ

ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ, ಅಂಕಿತ ಹಾಕದಂತೆ ರಾಜ್ಯಪಾಲರಿಗೆ ಮನವಿ

ಮೈಸೂರು, ಡಿ.23– ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ ವಿಧೇಯಕ ವಿರೋಧಿಸಿ ಮೈಸೂರು ಜಿಲ್ಲೆಯ ತಿ.ನರಸೀಪುರ, ಹೆಚ್.ಡಿ.ಕೋಟೆ, ಹುಣಸೂರು, ನಂಜನಗೂಡು ಸೇರಿದಂತೆ ರಾಜ್ಯಾದ್ಯಂತ ಭಾರತೀಯ ಜನತಾ ಪಕ್ಷ ಪ್ರತಿಭಟನೆ ನಡೆಸಿದ್ದು, ಎಲ್ಲೆಡೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಹಿಂದೂ ಪರ ಹೋರಾಟಗಾರರ ಧ್ವನಿ ಅಡಗಿಸುವ ವಿಧೇಯಕ



ಬಿಜೆಪಿ ಕಾರ್ಯಕರ್ತರು ತಹಸೀಲ್ದಾರ್ ಸುರೇಶಾಚಾರ್ ಅವರಿಗೆ ಮನವಿ ಸಲ್ಲಿಸಿದರು.

ತಿ.ನರಸೀಪುರ: ರಾಜ್ಯ ಸರ್ಕಾರ ಅನುಷ್ಠಾನಕ್ಕೆ ತರುತ್ತಿರುವ ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ ಪ್ರತಿಬಂಧಕ ವಿಧೇಯಕವನ್ನು ವಿರೋಧಿಸಿ ಪಟ್ಟಣದಲ್ಲಿ ಮಂಗಳವಾರ ಬಿಜೆಪಿ ಕಾರ್ಯಕರ್ತರು ಹಾಗೂ ಮುಖಂಡರು ಪ್ರತಿಭಟನೆ ನಡೆಸಿದರು.

ಪಟ್ಟಣದ ವಿದ್ಯೋದಯ ಕಾಲೇಜು ವೃತ್ತದಲ್ಲಿ ಜಮಾವಣೆಗೊಂಡ ವರುಣ ಹಾಗೂ ನರಸೀಪುರ ವಿಧಾನಸಭಾ ಕ್ಷೇತ್ರಗಳ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು ರಾಜ್ಯದಲ್ಲಿ ಆಡಳಿತರೂಢ ಕಾಂಗ್ರೆಸ್ ಸರ್ಕಾರ ವಾಕ್ ಸ್ವಾತಂತ್ರವನ್ನು ಹರಣ ಮಾಡಲು, ಹಿಂದೂಪರ ಹೋರಾಟಗಾರರ ಧ್ವನಿಯನ್ನು ದಮನಿಸಲು ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ ಕಾಯ್ದೆ ಜಾರಿಗೆ ತರುತ್ತಿದೆ ಎಂದು ಆರೋಪಿಸಿ, ಪ್ರತಿಭಟನಾ ಮೆರವಣಿಗೆ ನಡೆಸಿದರು.

ತಾಲೂಕು ಕಚೇರಿ ಆವರಣದ ಮುಂಭಾಗ ಕೆಲ ಕಾಲ ಪ್ರತಿಭಟನಾ ಧರಣಿ ನಡೆಸಿದ ಕಾರ್ಯಕರ್ತರು ಅಧಿಕಾರ ದುರ್ಬಳಕೆ ಮಾಡಿಕೊಂಡಿರುವ ಸರ್ಕಾರ ರಾಜ್ಯದಲ್ಲಿ ಪ್ರಜಾಪ್ರಭುತ್ವದಡಿ ಸಾಂವಿಧಾನಿಕವಾಗಿ ನೀಡಿರುವ ಸಂವಹನದ ಹಕ್ಕನ್ನು ಕಸಿದುಕೊಳ್ಳಲು ಜನವಿರೋಧಿ ಕಾಯ್ದೆಯನ್ನು ಜಾರಿಗೆ ತರಲು ಹೊರಟಿದೆ ಎಂದು ಕಿಡಿಕಾರಿದರು.

ಜಿ.ಪಂ.ಮಾಜಿ ಸದಸ್ಯ ಬಿ.ಎನ್. ಸದಾನಂದ ಮಾತನಾಡಿ ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ ಪ್ರತಿಬಂಧಕ ವಿಧೇಯಕ 2025 ಜಾರಿಯಾದರೆ ನಾಗರೀಕರ ಮೂಲ ಹಕ್ಕುಗಳನ್ನು ಕಸಿದುಕೊಳ್ಳುವ ಜೊತೆಗೆ ಸಂವಿಧಾನದ 19(1) ಪರಿಚ್ಛೇದ, (2) ಪರಿಚ್ಛೇದದಡಿ ವಾಕ್ ಅಥವಾ ಅಭಿವ್ಯಕ್ತಿ ಸ್ವಾತಂತ್ರ್ಯದ ಉಲ್ಲಂಘನೆ ಕೂಡ ಆಗಲಿದೆ ಎಂದರು.

ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ನಂಜನಗೂಡು ಎನ್.ವಿ.ವಿನಯ್ ಕುಮಾರ್ ಹಿರಿಯ ಶಸ್ತ್ರ ಚಿಕಿತ್ಸಕ ಡಾ.ಎಂ.ರೇವಣ್ಣ, ಜಿಲ್ಲಾ ಮಾಧ್ಯಮ ವಕ್ತಾರ ಎಂ.ದಯಾನಂದ ಪಟೇಲ್, ವರುಣ ಕ್ಷೇತ್ರಾಧ್ಯಕ್ಷ ನಗರ್ಲೆ ಮಹದೇವಸ್ವಾಮಿ ಮಾತನಾಡಿದರು. ನಂತರ ತಹಸೀಲ್ದಾರ್ ಟಿ.ಜಿ.ಸುರೇಶಾಚಾರ್ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ಬಿಜೆಪಿ ಕ್ಷೇತ್ರಾಧ್ಯಕ್ಷ ಹಿರಿಯೂರು ಶಿವಕುಮಾರ್(ಸತ್ಯಪ್ಪ), ಪ್ರಧಾನ ಕಾರ್ಯದರ್ಶಿಗಳಾದ ಡಾ.ಟಿ.ಎಸ್. ಮಲ್ಲಿಕಾರ್ಜುಸ್ವಾಮಿ, ಆಲಗೂಡು ವೆಂಕಟರಮಣಶೆಟ್ಟಿ, ಪುರಸಭಾ ಸದಸ್ಯ ಎಸ್.ಕೆ. ಕಿರಣ್, ಟೌನ್ ಅಧ್ಯಕ್ಷ ಕೆ ನಂಜುಂಡಸ್ವಾಮಿ, ರಾಜಶೇಖರ್, ಮಾಜಿ ಪುರಸಭಾ ಎನ್. ಲೋಕೇಶ್, ಅಂಬೇಡ್ಕರ್ ಅಭಿವೃದ್ಧಿ ಸಂಘದ ಅಧ್ಯಕ್ಷ ಕರೋಹಟ್ಟಿ ಮಹದೇವಯ್ಯ, ಗ್ರಾಪಂ ಸದಸ್ಯ ಕಿರಗಸೂರು ಮಹದೇವಸ್ವಾಮಿ, ಸಿಎಂ ಮಹದೇವಯ್ಯ, ಮುಖಂಡರಾದ ಕೆಇಬಿ ಸಿದ್ದಲಿಂಗಸ್ವಾಮಿ, ನೆರೆಗ್ಯಾತನ ಹಳ್ಳಿ ಪುಟ್ಟಸ್ವಾಮಿ, ಸೋಮಶೇಖರಪ್ಪ, ಬಜ್ಜಿ ನಿಂಗಪ್ಪ, ಬಿ.ಎಂ.ವಿಜಯಕುಮಾರ್, ನಂದೀಶ್, ಕೆ.ನಂಜುಂಡಸ್ವಾಮಿ, ಕೆ.ಮಹದೇವ ಶೆಟ್ಟಿ, ವಿಜಯದ ಅಭಿಮಾನಿ ಬಳಗದ ಅಧ್ಯಕ್ಷ ಮಹೇಶ್, ಚೌಹಳ್ಳಿ ಸಿದ್ದರಾಜು, ಕುರುಬೂರು ಮಂಜುನಾಥ್ ಇದ್ದರು.

ಮಾತನಾಡುವವರನ್ನು ಜೈಲಿಗೆ ಕಳುಹಿಸಲು ಸಂಚು



ಮಸೂದೆ ವಿರೋಧಿಸಿ ತಹಸೀಲ್ದಾರ್‌ರವರಿಗೆ ಮನವಿ ಪತ್ರ ಸಲ್ಲಿಸುತ್ತಿರುವುದು.

ನಂಜನಗೂಡು: ರಾಜ್ಯ ಸರ್ಕಾರ ಅನುಷ್ಠಾನಕ್ಕೆ ತರಲುದ್ದೇಶಿಸಿರುವ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ ಪ್ರತಿಬಂಧಕ ವಿಧೇಯಕ ವಿರೋಧಿಸಿ ತಾಲೂಕು ಕಚೇರಿ ಮುಂದೆ ಬಿಜೆಪಿ ಪ್ರತಿಭಟನೆ ನಡೆಸಿತು.

ಈ ವೇಳೆ ಮಾತನಾಡಿದ ಮಾಜಿ ಶಾಸಕ ಹರ್ಷವರ್ಧನ್ ವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆ ತರುವ ಈ ಮಸೂದೆಯನ್ನು ರಾಜ್ಯಪಾಲರು ತಿರಸ್ಕರಿಸಬೇಕು. ಇದು ಸರ್ಕಾರದ ವಿರುದ್ಧ ಮಾತನಾಡುವವರನ್ನು ಜೈಲಿಗೆ ಕಳುಹಿಸುವ ಸಂಚು ಎಂದರು.

ದೇಶದ ಸಂವಿಧಾನದ ಆಶಯಕ್ಕೆ ವಿರುದ್ಧವಾಗಿ ರಾಜ್ಯದ ಕಾಂಗ್ರೆಸ್ ಸರಕಾರ ಉದ್ದೇಶಿತ ದ್ವೇಷ ಭಾಷಣದ ಮಸೂದೆ ಜಾರಿಗೆ ತಂದು ನಾಗರೀಕರಿಗೆ ವಾಕ್ ಸ್ವಾತಂತ್ರ್ಯವನ್ನು ನಿರ್ಬಂಧಿಸುವ ಕಾರ್ಯಕ್ಕೆ ಮುಂದಾಗಿದ್ದು ಜೊತೆಗೆ ಮಾಧ್ಯಮಗಳನ್ನು ಹತ್ತಿಕ್ಕುವ ಕಾರ್ಯಕ್ಕೆ ಸರಕಾರ ಮುಂದಾಗಿದೆ. ದ್ವೇಷ ಭಾಷಣ ವಿಧೇಯಕದ ಮೂಲಕ ರಾಜ್ಯ ಸರಕಾರದ ವಿರುದ್ಧ ಮಾತನಾಡುವವರನ್ನು ನಿಯಂತ್ರಿಸುವ ಯೋಜನೆ ರೂಪಿಸಲಾಗಿದೆ. ಸರಕಾರದ ಕಾರ್ಯವೈಖರಿಯನ್ನು ಟೀಕಿಸುವ ಹಾಗೂ ವ್ಯಂಗ ಮಾಡುವವರ ಮೇಲೂ ಮೊಕದ್ದಮೆ ದಾಖಲು ಮಾಡಿ ಜೈಲಿಗೆ ಕಳುಹಿಸುವ ಸಂಚು ನಡೆಸಲಾಗಿದೆ ಹೀಗಾಗಿ ಉದ್ದೇಶಿತ ಮಸೂದೆಯನ್ನು ವಿರೋಧಿಸಿ ರಾಜ್ಯವ್ಯಾಪಿ ಪ್ರತಿಭಟನೆ ನಡೆಸಲಾಗುವುದು ಎಂದು ಹೇಳಿದರು.

ಬಿಜೆಪಿ ಜಿಲ್ಲಾಧ್ಯಕ್ಷ ಕುಂಬರಳ್ಳಿ ಸುಬ್ಬಣ್ಣ ಮಾತನಾಡಿ ಪ್ರತಿಪಕ್ಷಗಳನ್ನು ಹತ್ತಿಕ್ಕುವ ಜೊತೆಗೆ ಸರಕಾರದ ವಿರುದ್ಧ ಧ್ವನಿಯೆತ್ತುವವರನ್ನು ಜೈಲಿಗೆ ಕಳುಹಿಸುವ ಸಂಚಿನೊಂದಿಗೆ ಉದ್ದೇಶಿತ ಕಾಯಿದೆಯನ್ನು ಜಾರಿಗೊಳಿಸಲು ಸರಕಾರ ಮುಂದಾಗಿದೆ ಎಂದರು.

ಪ್ರತಿಭಟನಾಕಾರರು ರಾಜ್ಯ ಸರಕಾರದ ವಿರುದ್ಧ ಘೋಷಣೆಗಳನ್ನು ಕೂಗಿ ಉದ್ದೇಶಿತ ಮಸೂದೆಯ ಪ್ರತಿಯನ್ನು ಹರಿದು ಹಾಕಿ ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನೆಯಲ್ಲಿ ರಾಜ್ಯ ಕಾಂಪೋಸ್ಟ್ ನಿಗಮದ ಮಾಜಿ ಅಧ್ಯಕ್ಷ ಎಸ್.ಮಹದೇವಯ್ಯ, ಕೃಷ್ಣಪ್ಪಗೌಡ, ಬಿಜೆಪಿ ಗ್ರಾಮಾಂತರ ಮಂಡಲ ಅಧ್ಯಕ್ಷ ಕೆಂಡಗಣ್ಣಪ್ಪ, ನಗರಾಧ್ಯಕ್ಷ ಸಿದ್ಧರಾಜು, ಸಿಂಧುವಳ್ಳಿ ಕೆಂಪಣ್ಣ ಬಿ.ಎಸ್.ಮಹದೇವಪ್ಪ, ಪ್ರೇಮಾ, ಬಿಜೆಪಿ ಪ್ರಧಾನ ಕಾರ್ಯದರ್ಶಿ ಮಹದೇವಪ್ರಸಾದ್, ಮಹೇಶ್, ಬದನವಾಳು ರಾಮು, ಕಪ್ಪಸೋಗೆ ರವೀಂದ್ರ, ಪರಶಿವಮೂರ್ತಿ ಭಾಗವಹಿಸಿದ್ದರು.

ಸಂವಿಧಾನಕ್ಕೆ ವಿರುದ್ಧವಾದ ಮಸೂದೆ ಜಾರಿ ಬೇಡ



ಮಸೂದೆ ವಿರೋಧಿಸಿ ತಹಸೀಲ್ದಾರ್ ಮಂಜುನಾಥ್ ಅವರಿಗೆ ಮನವಿ ಪತ್ರ ಸಲ್ಲಿಸಲಾಯಿತು.

ಹುಣಸೂರು: ರಾಜ್ಯ ಸರ್ಕಾರದ ಕರ್ನಾಟಕ ದ್ವೇಷ ರಾಜಕರಣ ಮತ್ತು ದ್ವೇಷ ಅಪರಾಧಗಳ ಪ್ರತಿಭಂದಕ ವಿಧೇಯಕ–2025ರ ವಿರುದ್ದ ಇಂದು ಬಿಜೆಪಿ ಪಕ್ಷದ ಪದಾಧಿಕಾರಿಗಳು ಮತ್ತು ಕಾರ್ಯಕರ್ತರು ತಾಲೂಕು ಕಛೇರಿ ಮುಂದೆ ಪ್ರತಿಭಟನೆ ನಡೆಸಿದರಲ್ಲದೆ ಸಂವಿಧಾನಕ್ಕೆ ವಿರುಧ್ಧ ವಾದ ಮಸೂದೆ ಜಾರಿ ಬೇಡ ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಉಪಾದ್ಯಕ್ಷ ಗಣೇಶ್ ಕುಮಾರಸ್ವಾಮಿ ಮಾತನಾಡಿ ರಾಜ್ಯ ಸರ್ಕಾರವು ಅನುಷ್ಠಾನಕ್ಕೆ ತರುತ್ತಿರುವ ದ್ವೇಷ ಬಾಷಣ ಮತ್ತು ದ್ವೇಷ ಅಪರಾದಗಳ ಪ್ರತಿಭಂದಕ ವಿಧೇಯಕ–2025 ಭಾರತದ ಸಂವಿದಾನಕ್ಕೆ ವಿರುದ್ದವಾಗಿದೆ. ಇದನ್ನು ರಾಜ್ಯಪಾಲರು ಜಾರಿಗೊಳಿಸಬಾರದೆಂದು ನಾವ್ರ ಒತ್ತಾಯಿಸುತ್ತಿದ್ದೇವೆ ಎಂದರು.

ರಾಜ್ಯ ಸರ್ಕಾರ ಜಾರಿಗೆ ತರಲು ಮುಂದಾಗಿರುವ ದ್ವೇಷ ರಾಜಕರಣ ಮತ್ತು ದ್ವೇಷ ಅಪರಾಧಗಳ ಪ್ರತಿಬಂಧಕ ವಿಧೇಯಕ–ನಾಗರಿಕರ ಮೂಲ ಹಕ್ಕಗಳನ್ನು ಕಸಿದುಕೊಳ್ಳುತ್ತದೆ. ಸಂವಿದಾನದಾ 19(1) ಪರಿಚ್ಚೇದ (2)ರ ಪರೊಚ್ಚೇದದಡಿ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕು ಉಲಂಘನೆಯಾಗಲಿದೆ. ಡಾ.ಬಿ.ಅರ್.ಅಂಬೇಡ್ಕರ್ ಸಂವಿದಾನದ ಮೂಲಕ ಸಾಮಾನ್ಯ ಜನರಿಗೆ ನೀಡಿದ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕಾಂಗ್ರೆಸ್ ಸರ್ಕಾರ ದ್ವೇಷ ರಾಜಕರಣ ಮತ್ತು ದ್ವೇಷ ಅಪರಾಧಗಳ ಪ್ರತಿಭಂದಕ ವಿಧೇಯಕ–2025 ಅನ್ನು ಜಾರಿಗೆ ತರುವ ಮೂಲಕ ಸಾಮಾನ್ಯ ಜನರಿಂದ ಕಿತ್ತುಕೊಳ್ಳುತ್ತಿದೆ ಎಂದರು.

ಸರ್ಕಾರ ಜಾರಿಗೆ ತರುತ್ತಿರುವ ದ್ವೇಷ ರಾಜಕರಣ ಮತ್ತು ದ್ವೇಷ ಅಪರಾಧಗಳ ಪ್ರತಿಭಂದಕ ವಿಧೇಯಕ ಸರ್ಕಾರದ ವಿರುದ್ದ ಮಾತನಾಡುವವರ ಸಾಮಾನ್ಯ ಜನರ ಬಾಯಿ ಮುಚ್ಚಿಸುವ ಸಾದನವಾಗಿದೆ ಇಂತಹ ಸಂವಿಧಾನ ವಿರೋದಿ ಕಾಂಗ್ರೇಸ್ ಸರ್ಕಾರದ ಭ್ರಷ್ಟ ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿಗಳ ಜನ ವಿರೋದಿ ನಿತಿಯೆ ಈ ಎಲ್ಲ ಭ್ರಷ್ಯತೆಗೆ ಕಾರಣವಾಗಿದೆ ಎಂದರು.

ಎಸ್.ಸಿ ಮೋರ್ಚಾದ ನಾಗರಾಜ್ ಮಲ್ಲಾಡಿ, ಜಿಲ್ಲಾ ಕಾರ್ಯದರ್ಶಿ ಹಳ್ಳದಕೊಪ್ಪಲು ನಾಗಣ್ಣ, ತಾಲೂಕು ಅಧ್ಯಕ್ಷ ನಾರಾಯಣ್, ದೇವರಹಳ್ಳಿ ಸೋಮಶೇಖರ್, ಕಾಂತರಾಜ್, ರಾಮಚಂದ್ರ ಅವರುಗಳು ಮಾತನಾಡಿದರು. ಪ್ರತಿಭಟನೆಯಲ್ಲಿ ಮಹಿಳಾ ತಾಲೂಕು ಅಧ್ಯಕ್ಷೆ ಕಮಲಮ್ಮ, ವೆಂಕಟಮ್ಮ, ಸತೀಶ್, ವೆಂಕಟೇಶ್, ಸುರೇಶ್, ರಾಘವೇಂದ್ರ, ರವಿ, ಪ್ರಸನ್ನ, ಸೂರೆಗೌಡ, ಯಾಶೋದಮ್ಮ, ಮಂಜುಳಾ, ಮಧು, ಬಸವರಾಜು, ಲಕ್ಷ್ಮಣ್, ನಟರಾಜ್, ನಾಗರಾಜಪ್ಪ ಸೇರಿದಂತೆ ಅನೇಕ ಕಾರ್ಯಕರ್ತರು ಭಾಗವಹಿಸಿದ್ದರು.

ದ್ವೇಷ ಭಾಷಣ ವಿಧೇಯಕಕ್ಕೆ ಹೆಚ್.ಡಿ.ಕೋಟೆಯಲ್ಲೂ ವಿರೋಧ



ಮಸೂದೆ ವಿರೋಧಿಸಿ ತಹಸೀಲ್ದಾರ್ ಶ್ರೀನಿವಾಸ್ ಅವರಿಗೆ ಮನವಿ ಪತ್ರ ಸಲ್ಲಿಸಲಾಯಿತು.

ಹೆಚ್.ಡಿ.ಕೋಟೆ, ಡಿ.23– ರಾಜ್ಯ ಸರ್ಕಾರ ಜಾರಿಗೆ ತರಲು ಮುಂದಾಗಿರುವ ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ ವಿಧೇಯಕ–2025 ವಿರೋಧಿಸಿ ತಾಲೂಕು ಭಾರತೀಯ ಜನತಾ ಪಾರ್ಟಿ ಪ್ರತಿಭಟನೆ ನಡೆಸಿತು.

ಪಟ್ಟಣದ ಮಿನಿ ವಿಧಾನಸೌಧದ ಆವರಣದಲ್ಲಿ ಜಮಾಯಿಸಿದ ಬಿಜೆಪಿ ಕಾರ್ಯಕರ್ತರು ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ ವಿಧೇಯಕ ಸಂವಿಧಾನಕ್ಕೆ ವಿರುದ್ಧವಾಗಿದೆ. ಅದು ಜಾರಿಗೆ ತರುವುದು ಬೇಡ ಎಂದು ಸರ್ಕಾರದ ವಿರುದ್ಧ ಘೋಷಣೆ ಕೂಗಿ ಪ್ರತಿಭಟನೆ ನಡೆಸಿದರು.

ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಸಿ.ಕೆ.ಗಿರೀಶ್ ಮಾತನಾಡಿ, ಬೆಳಗಾವಿ ಅಧಿವೇಶನದಲ್ಲಿ ಸರ್ಕಾರ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ ಪ್ರತಿಬಂಧಕ ವಿಧೇಯಕ–2025ಕ್ಕೆ ವಿರೋಧದ ನಡುವೆ ಅಂಗೀಕಾರ ನಡೆದಿದೆ. ಇದು ಅನ್ಯಾಯ ಎಂದರು.

ವಿಧೇಯಕವು ಭಾರತದ ಸಂವಿಧಾನಕ್ಕೆ ವಿರೋಧವಾಗಿದೆ, ಇದು ನಾಗರೀಕರ ಮೂಲ ಹಕ್ಕುಗಳನ್ನು ಕಸಿದುಕೊಳ್ಳುತ್ತದೆ, ಸಂವಿಧಾನದ 19 ಪರಿಚ್ಛೇದ, ಪರಿಚ್ಛೇದದಡಿ ವಾಕ್ ಅಥವಾ ಅಭಿವ್ಯಕ್ತಿ ಸ್ವಾತಂತ್ರ್ಯದ ಉಲ್ಲಂಘನೆ ಆಗಿದೆ. ಡಾ.ಬಿ.ಆರ್. ಅಂಬೇಡ್ಕರ್ ಅವರು ಸಂವಿಧಾನದಡಿ ನೀಡಿದ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕಾಂಗ್ರೆಸ್ ಸರಕಾರ ಕಿತ್ತುಕೊಳ್ಳುತ್ತಿದೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಇದು ಸರ್ಕಾರದ ವಿರುದ್ಧ ಮಾತನಾಡುವವರ ಬಾಯಿ ಮುಚ್ಚಿಸುವ ಸಾಧನವಾಗಿದೆ. ಇದರಡಿ ದ್ವೇಷ ಭಾಷಣಕ್ಕೆ ನೀಡಿರುವ ವ್ಯಾಖ್ಯಾನವೇ ಅಸ್ಪಷ್ಟವಾಗಿದೆ. ಸರ್ಕಾರದ ನೀತಿಗಳ ವಿರುದ್ಧ ಟೀಕೆ, ಸಾಮಾಜಿಕ ಚರ್ಚೆ, ವ್ಯಂಗ್ಯ ಮಾಡುವುದು ಅಥವಾ ಸತ್ಯವನ್ನು ಹೇಳುವುದನ್ನೂ ಕೂಡ ದ್ವೇಷ ಎಂದು ಪರಿಗಣಿಸುವ ಅಪಾಯವಿದೆ ಎಂದು ದೂರಿದರು.

ನಮ್ಮ ಸಂಘ–ಸಂಸ್ಥೆ, ಕನ್ನಡ ಸಂಘಟನೆಗಳನ್ನು ದಮನ ಮಾಡಲು ಸರಕಾರ ಹೊರಟಿದೆ. ಯಾವುದೇ ಕಾರಣಕ್ಕೆ ಇದರ ಅನುಷ್ಠಾನಕ್ಕೆ ಬಿಡುವುದಿಲ್ಲ. ಇದರ ವಿರುದ್ಧ ಕೇಂದ್ರ ಸಚಿವರಾದ ಕು.ಶೋಭಾ ಕರಂದ್ಲಾಜೆ ಅವರು ಈಗಾಗಲೇ ಗೌರವಾನ್ವಿತ ರಾಜ್ಯಪಾಲರಿಗೆ ಪತ್ರ ಬರೆದಿದ್ದಾರೆ. ಸಂವಿಧಾನದ ಉಲ್ಲಂಘನೆಯ ಕಾರಣಕ್ಕೆ ಇದಕ್ಕೆ ಒಪ್ಪಿಗೆ ಕೊಡದಿರಿ ಎಂದು ಕೋರಿದ್ದಾರೆ ಎಂದರು.

ನಂತರ ತಹಸೀಲ್ದಾರ್ ಶ್ರೀನಿವಾಸ್ ಅವರಿಗೆ ಮನವಿ ಪತ್ರ ನೀಡಿ ಪ್ರತಿಭಟನೆಯನ್ನು ಕೈಬಿಡಲಾಯಿತು. ಪ್ರತಿಭಟನೆಯಲ್ಲಿ ಕೋಟೆ, ಸರಗೂರು, ಬಿಜೆಪಿ ತಾಲೂಕು ಅಧ್ಯಕ್ಷರುಗಳಾದ ಶಂಬೇಗೌಡ, ಕೆ.ಪಿ.ಗುರುಸ್ವಾಮಿ, ಪ್ರಧಾನ ಕಾರ್ಯದರ್ಶಿಗಳಾದ ಗುರುಸ್ವಾಮಿ, ಬಿಡಗಲು ರಾಜು, ಮುಖಂಡರುಗಳಾದ ವೆಂಕಟಸ್ವಾಮಿ, ಶಿವಸ್ವಾಮಿ, ಚಂದ್ರಶೇಖರ್, ಚೆನ್ನಪ್ಪ, ಚಂದ್ರು, ಸುರೇಶ, ಶೇಖರ್, ಸೋಮಾಚಾರ್, ಜವರಯ್ಯ ಸುರೇಶ್, ಕೆ.ಲೋಕೇಶ್, ಪರಮೇಶ್, ಮಂಜುನಾಥ್, ಅಭಿನಂದನ್, ಚಂದ್ರಮೌಳಿಸ್ವರ, ಶ್ರೀನಾಥ್, ಸುನಿಲ್, ದಾಸ ನಾಯಕ, ಮಾದೇಗೌಡ, ಪೃಥ್ವಿಕುಮಾರ್, ಬಸವರಾಜಾಚಾರ್, ರಾಜೇಶ್, ಕುಮಾರ, ರೂಪೇಶ್, ಕೆಂಡಗಣ್ಣ ಸ್ವಾಮಿ ಗುರುಸ್ವಾಮಿ, ರಾಮಚಂದ್ರ, ಮಲ್ಲಿಕಾರ್ಜುನ, ಚಂದ್ರೇಗೌಡ, ಜವರೇಗೌಡ ಸೇರಿದಂತೆ ಇತರರು ಭಾಗವಹಿಸಿದ್ದರು.

ಉಳುಮೆ ಮಾಡುತ್ತಿದ್ದ ಟ್ರ್ಯಾಕ್ಟರ್ ಚಾಲಕನ ಮೇಲೆ ಹುಲಿ ದಾಳಿ

ಆಕ್ಸಿಲೇಟರ್ ಜಾಸ್ತಿ ಮಾಡಿ, ಅಡ್ಡಾದಿಡ್ಡಿ ಟ್ರ್ಯಾಕ್ಟರ್ ಓಡಿಸಿ ಬಚಾವಾದ ಚಾಲಕ





ನೇಗತ್ತೂರಿನಲ್ಲಿ ಹುಲಿ ದಾಳಿಯಿಂದ ಬಚಾವ್ ಆದ ಚಾಲಕ ವರ್ಷಿತ್, ದನಗಾಹಿ ಅಸ್ಲಂ. ಮತ್ತೊಂದು ಚಿತ್ರದಲ್ಲಿ ಅರಣ್ಯ ಇಲಾಖೆ ಜೀಪ್‌ಗೆ ಗಾಯಗೊಂಡ ಹಸುವನ್ನು ಕಟ್ಟಿ ಆಕ್ರೋಶ ಹೊರ ಹಾಕಿದ ರೈತರು.

ಹನಗೋಡು, ಡಿ.23–ಅರಣ್ಯದಂಚಿನ ಜಮೀನಿನಲ್ಲಿ ಉಳುಮೆ ಮಾಡುತ್ತಿದ್ದ ಟ್ರ್ಯಾಕ್ಟರ್ ಚಾಲಕ ಹಾಗೂ ಬಾಲಕ ಹುಲಿ ದಾಳಿಯಿಂದ ಬಚಾವ್ ಆಗಿರುವ ಹಾಗೂ ಹಸುವಿನ ಮೇಲೆ ಹಗಲು ವೇಳೆಯೇ ದಾಳಿ ನಡೆಸಿರುವ ಘಟನೆ ಹನಗೋಡಿಗೆ ಸಮೀಪದ ನೇಗತ್ತೂರಿನ ಶೆಟ್ಟಿಹಳ್ಳಿ ಅರಣ್ಯ ಪ್ರದೇಶದಂಚಿನಲ್ಲಿ ನಡೆದಿದೆ.

ಸಿಂಡೇನಹಳ್ಳಿಯ ವರ್ಷಿತ್ ಅರಣ್ಯದಂಚಿನ ಜಮೀರ್‌ರಿಗೆ ಸೇರಿದ ಜಮೀನಿನಲ್ಲಿ ಟ್ರ್ಯಾಕ್ಟರ್‌ನಲ್ಲಿ ಉಳುಮೆ ಮಾಡುತ್ತಿದ್ದ ವೇಳೆ ಅರಣ್ಯದಲ್ಲಿ ಕಾಣಿಸಿಕೊಂಡ ಎರಡು ಹುಲಿಗಳ ಪೈಕಿ ಒಂದು ಹುಲಿಯು ಒಮ್ಮೆಲೆ ಟ್ರ್ಯಾಕ್ಟರ್ ಮೇಲೆ ದಾಳಿ ನಡೆಸಲು ಮುಂದಾಗಿದೆ. ಗಾಬರಿಗೊಂಡ ಚಾಲಕ ವರ್ಷಿತ್ ಭಯದಿಂದ ಕೂಗುತ್ತಾ ಎಕ್ಸಿಲೇಟರ್ ಹೆಚ್ಚಿಸಿ ಹೊಲದಲ್ಲಿ ಟ್ರ್ಯಾಕ್ಟರನ್ನು ಅಡ್ಡಾದಿಡ್ಡಿ ಓಡಾಡಿಸಿ ಹುಲಿಯನ್ನು ಗಾಬರಿಗೊಳಿಸಿ ಹಿಮ್ಮೆಟ್ಟಿಸುವ ವೇಳೆ ಪಕ್ಕದ ಹಳ್ಳದಲ್ಲಿ ಜಾನುವಾರು ಮೇಯಿಸುತ್ತಿದ್ದ ದನಗಾಹಿ ಅಸ್ಲಂ ಮೇಲೆ ದಾಳಿ ಮಾಡಲು ನುಗ್ಗಿದ ಹುಲಿಯು ಪಕ್ಕದಲ್ಲೇ ಇದ್ದ ಎತ್ತಿನ ಮೇಲೆ ದಾಳಿ ನಡೆಸಿ ಕುತ್ತಿಗೆಗೆ ಗಾಯಗೊಳಿಸಿ ಪಕ್ಕದ ಕಾಡಿನೊಳಕ್ಕೆ ಪರಾರಿಯಾಗಿದೆ. ಅಸ್ಲಂ ಪಕ್ಕದ ಪಂಪ್‌ಸೆಟ್ ಮನೆ ಸೇರಿಕೊಂಡು ಪ್ರಾಣ ಉಳಿಸಿಕೊಂಡಿದ್ದಾನೆ. ಅಷ್ಟರೊಳಗೆ ಕೂಗಾಟ ಕೇಳಿ ಅಕ್ಕ ಪಕ್ಕದ ರೈತರು ಸ್ಥಳಕ್ಕಾಗಮಿಸಿದ್ದಾರೆ.

ಜೀವವೇ ಹೋಯಿತೆಂದು ಬಾವಿಸಿದ್ದ ನಾನು ಬಂಡ ಧೈರ್ಯದಿಂದಲೇ ಟ್ರ್ಯಾಕ್ಟರನ್ನು ಅಡ್ಡಾದಿಡ್ಡಿ ಓಡಿಸಿದೆ ಬೆದರಿದ ಹುಲಿ ನನ್ನನ್ನು ಬಿಟ್ಟು ಪಕ್ಕದ ಹಳ್ಳದಲ್ಲಿ ಜಾನುವಾರುಗಳನ್ನು ಮೇಯಿಸುತ್ತಿದ್ದ ಅಸ್ಲಾಂ ಮೇಲೆರಗಲು ಹೋಗುತ್ತಿದ್ದಂತೆ ಮನೆ ಸೇರಿಕೊಂಡು ಬಚಾವಾದ್ದರಿಂದ ಹಸುವಿನ ಮೇಲೆ ದಾಳಿ ನಡೆಸಿ ಸ್ವಲ್ಪ ದೂರ ಎಳೆದೊಯ್ದು ಜನರ ಕೂಗಾಟದಿಂದ ಹಸು ಬಿಟ್ಟು ಕಾಡಿನತ್ತ ಮತ್ತೊಂದು ಹುಲಿಯೊಂದಿಗೆ ಪರಾರಿಯಾಯಿತು.

ಜೀಪ್‌ಗೆ ಹಸು ಕಟ್ಟಿ ಆಕ್ರೋಶ

ಅರಣ್ಯ ಇಲಾಖೆಗೆ ಮಾಹಿತಿ ನೀಡಿದರೂ ತಡವಾಗಿ ಬಂದ ಸಿಬ್ಬಂದಿಯನ್ನು ತರಾಟೆಗೆ ತೆಗೆದುಕೊಂಡ ಗ್ರಾಮಸ್ಥರು, ಗಾಯಗೊಂಡ ಹಸುವನ್ನು ಕೊಂಡೊಯ್ದು ಬೇರೆ ಹಸುವನ್ನು ಕೊಡಿಸಬೇಕೆಂದು ಅರಣ್ಯ ಇಲಾಖೆ ಜೀಪ್‌ಗೆ ಹಸುವನ್ನು ಕಟ್ಟಿ ಹಾಕಿದ್ದರು. ಸ್ಥಳಕ್ಕೆ ಬಂದ ಆರ್‌ಎಫ್‌ಓ. ಸುಬ್ರಮಣ್ಯ ರೈತರನ್ನು ಸಮಾದಾನಪಡಿಸಿ, ಹಸುವಿಗೆ ಚಿಕಿತ್ಸೆ ಕೊಡಿಸಿ ಸಮಾಧಾನಿಸಿದ್ದಾರೆ.

ಕ್ಯಾಮರಾ ಅಳವಡಿಸಲಾಗಿದೆ: ಈಗ ಹುಲಿಗಳ ಮೇಟಿಂಗ್ ಸಮಯವಾಗಿದ್ದರಿಂದ ಇಲ್ಲಿ ಎರಡು ಹುಲಿಗಳಿರಬಹುದೆಂದು ಶಂಕಿಸಲಾಗಿದೆ. ಇದೀಗ ಸ್ಥಳದಲ್ಲಿ ನಾಲ್ಕು ಕ್ಯಾಮರಾ ಅಳವಡಿಸಲಾಗಿದೆ. ಬುಧವಾರದಿಂದಲೇ ಕೂಂಬಿಂಗ್ ಕಾರ್ಯ ನಡೆಸಲಾಗುವುದೆಂದು ಎಸಿಎಫ್ ಲಕ್ಷ್ಮಿಕಾಂತ್ ತಿಳಿಸಿದ್ದಾರೆ.

ಚರಂಡಿ ಕಾಮಗಾರಿ ಪೂರ್ಣ, ಸಂಪರ್ಕ ಪಡೆಯದ ಜನರು

ಕಾರಣ ತಿಳಿಯದು ಎಂದ ಸಚಿವ ವೆಂಕಟೇಶ್



ಪಿರಿಯಾಪಟ್ಟಣ: ಪಟ್ಟಣದಲ್ಲಿ ಹಂತ ಹಂತವಾಗಿ ಅಭಿವೃದ್ಧಿ ಕಾರ್ಯಗಳನ್ನು ಆದ್ಯತೆಯ ಮೇರೆಗೆ ಕೈಗೊಳ್ಳುವುದಾಗಿ ನುಡಿದ ಸಚಿವ ಕೆ.ವೆಂಕಟೇಶ್, ಪಟ್ಟಣದಲ್ಲಿ ಚರಂಡಿ ಕಾಮಗಾರಿ ಪೂರ್ಣಗೊಂಡಿದ್ದರೂ ಸಾರ್ವಜನಿಕರು ಚರಂಡಿ ಸಂಪರ್ಕ ಪಡೆಯಲು ಮುಂದೆ ಬರುತ್ತಿಲ್ಲ ಎಂದರು.

ಪಟ್ಟಣದ ಹಳೆಕಂತಪುರ ಭಾಗದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡುತ್ತಿದ್ದ ಅವರು, ನನ್ನ ಅವಧಿಯಲ್ಲಿ ಈಗಾಗಲೇ ಪಟ್ಟಣದಲ್ಲಿ 85 ಕೋಟಿಗೂ ಅಧಿಕ ವೆಚ್ಚದಲ್ಲಿ ಯುಜಿಡಿ ಕಾಮಗಾರಿ ಪೂರ್ಣಗೊಂಡಿದ್ದು ಜನತೆ ಮಾತ್ರ ಅದರ ಸಂಪರ್ಕ ಪಡೆಯಲು ಹಿಂದೇಟು ಹಾಕುತ್ತಿದ್ದಾರೆ ಕಾರಣ ತಿಳಿಯುತ್ತಿಲ್ಲ ಎಂದು ವಿಷಾದಿಸಿದರು.

ಇಂದಿನಿಂದಲೇ ಆದಷ್ಟು ಬೇಗ ಸಂಪರ್ಕ ಪಡೆಯದ ಪಟ್ಟಣದ ಜನತೆ ತಕ್ಷಣವೇ ಯುಜಿಡಿಯ ಸಂಪರ್ಕ ಪಡೆದು ಪಟ್ಟಣದ ಸ್ವಚ್ಛತೆಗೆ ಸಹಕರಿಸಬೇಕೆಂದು ಮನವಿ ಮಾಡಿದರು. ಪಟ್ಟಣದಲ್ಲಿ ಕುಡಿಯುವ ನೀರಿನ ಸಮಸ್ಯೆ ಹೆಚ್ಚಾಗಿರುವ ಬಗ್ಗೆ ದೂರುಗಳು ನನ್ನ ಗಮನಕ್ಕೆ ಬಂದಿದ್ದು ಕಾವೇರಿ ಕುಡಿಯುವ ನೀರಿನ ಸಂಪರ್ಕದಲ್ಲಿ ಈಗಾಗಲೇ ಸಮರ್ಪಕ ಪೂರೈಕೆಗೆ ಅಧಿಕಾರಗಳ ಬಳಿ ಚರ್ಚಿಸಿದ್ದು ಅದು ಸಹ ನೆರವೇರಲಿದೆ. ಮುಂದಿನ ಕೆಲವೇ ಕೆಲವು ದಿನಗಳಲ್ಲಿ ಪಟ್ಟಣದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸುವುದಾಗಿ ನುಡಿದರು.

ಇದೇ ಸಂದರ್ಭದಲ್ಲಿ ಪಟ್ಟಣದ ವಿಷಕಂಠಯ್ಯ ಬಡಾವಣೆ, ಗಾಂಧಿನಗರ ಒಳಕೋಟೆ, ತೋಪಿನ ಕೊಳದ ರಸ್ತೆ, ನಂಜಪ್ಪ ಬಡಾವಣೆ, ಬಾನುಕೋಟಿ, ಹಳೆ ಹೌಸಿಂಗ್ ಬೋರ್ಡ್, ಹೊಸ ಹೌಸಿಂಗ್ ಬೋರ್ಡ್, ಒಳಕೋಟೆ, ರಾಜಪುರ, ಚತ್ರದ ಬೀದಿ, ಹುಣಸೆ ಕುಪ್ಪೆ ರಸ್ತೆ, ಶಿವಪ್ಪ ಬಡಾವಣೆ, ಅಬ್ಬೂರು ಸೇರಿದಂತೆ ವಿವಿಧೆಡೆ ಒಟ್ಟು 12 ಕೋಟಿ ವೆಚ್ಚದ ಕಾಮಗಾರಿಗಳಿಗೆ ಗುದ್ದಲಿ ಪೂಜೆ ನೆರವೇರಿಸಿ ಚಾಲನೆ ನೀಡಿದರು

ಸಮಾರಂಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಡಿ.ಟಿ.ಸ್ವಾಮಿ, ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ನಿತಿನ್ ವೆಂಕಟೇಶ್ ಪುರಸಭೆ ಮಾಜಿ ಅಧ್ಯಕ್ಷ ಪಿ .ಎಸ್.ವಿಷಕಂಠಯ್ಯ ನಗರ ಘಟಕದ ಅಧ್ಯಕ್ಷ ಅಶೋಕ್ ಕುಮಾರ್ ಗೌಡ ಸೇರಿದಂತೆ ಹಲವು ಮುಖಂಡರುಗಳು ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ಬನ್ನೂರಲ್ಲಿ ಹೆಚ್‌ಡಿಕೆ ಜನ್ಮದಿನ ಆಚರಣೆ



ಬನ್ನೂರಿನ ಬಸವೇಶ್ವರ ವೃತ್ತದಲ್ಲಿ ಜೆಡಿಎಸ್ ಕಾರ್ಯಕರ್ತರಿಂದ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಹುಟ್ಟುಹಬ್ಬವನ್ನು ಆಚರಿಸಲಾಯಿತು. ಮುಖಂಡರಾದ ಚಲುವರಾಜು, ಜಯರಾಮೇಗೌಡ, ದೇವರಾಜು, ಜೆಡಿಎಸ್ ಕಾರ್ಯಕರ್ತರು ಉಪಸ್ಥಿತರಿದ್ದರು.

ಆನೆ–ಮಾನವ ಸಂಘರ್ಷ ತಡೆಗೆ ಎಐ ಕ್ಯಾಮರಾ ಅಳವಡಿಕೆ

- ಆನೆ ಕಂಡರೆ 20 ರೀತಿಯ ಸೌಂಡ್ ಮಾಡುವ ಕ್ಯಾಮರಾ
- ಶಬ್ದಕ್ಕೆ ಹೆದರಿ ಓಡಿ ಹೋಗುವ ಆನೆಗಳು
- 150 ಮೀಟರ್ ವ್ಯಾಪ್ತಿವರೆಗೆ ಕಾರ್ಯ ನಿರ್ವಹಣೆ

ಹುಣಸೂರು, ಡಿ.23(ಕೆಕೆ)–ಕಾಡಾನೆ ಮತ್ತು ಮಾನವ ಸಂಘರ್ಷ ತಡೆಯಲು ಅರಣ್ಯ ಇಲಾಖೆ ವಿನೂತನ ತಂತ್ರಜ್ಞಾನ ಅಳವಡಿಸಿದ್ದು, ಅದರಲ್ಲಿ ಯಶಸ್ವಿ ಕಂಡಿದೆ.

ಕಾಡಾನೆಗಳು ಸಾಮಾನ್ಯವಾಗಿ ಕಾಡನ್ನು ಬಿಟ್ಟು ನಾಡನ್ನು ಪ್ರವೇಶಿಸಿ ರೈತರ ಮೇಲೆ ದಾಳಿ ನಡೆಸುವುದಲ್ಲದೆ, ಕಷ್ಟಪಟ್ಟು ಬೆಳೆದ ಫಸಲನ್ನು ತಿಂದು, ತುಳಿದು ಹಾಳು ಮಾಡಲಿದೆ. ಇದನ್ನು ತಡೆಯುವ ಸಲುವಾಗಿ ಅರಣ್ಯ ಇಲಾಖೆ ನಾಗರಹೊಳೆಯಲ್ಲಿ ಎಐ (AI) ಕ್ಯಾಮರಾ ಅಳವಡಿಸಿದ್ದು, ಇದರಲ್ಲಿ ಯಶಸ್ವಿಯಾಗಿದೆ. ಈ ಕ್ಯಾಮರಾ ದಾಟಿ ಬರಲು ಆನೆಗಳಿಗೆ ಸಾಧ್ಯವಿಲ್ಲದಂತಾಗಿ, ಬಂದ ದಾರಿಗೆ ಸುಂಕವಿಲ್ಲದಂತೆ ಹಿಂತಿರುಗುತ್ತಿವೆ.

ನಾಗರಹೊಳೆ ಅರಣ್ಯ ವ್ಯಾಪ್ತಿಯ ಘಾರಂಗಾರ್ಡ್ ಎಂಬಲ್ಲಿ ಅತ್ಯಾಧುನಿಕ 'ಎಐ' ಕ್ಯಾಮರಾವನ್ನು ಪ್ರಾಯೋಗಿಕವಾಗಿ ಅಳವಡಿಸಲಾಗಿದೆ ಎಂದು ನಾಗರಹೊಳೆ ಎಸಿಎಫ್ ಲಕ್ಷ್ಮೀಕಾಂತ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ. ಎಲ್ಲಿ ಆನೆ ಕಂದಕ ನಿರ್ಮಿಸಲು ಸಾಧ್ಯವಿಲ್ಲವೋ, ತಂತಿ ಬೇಲಿ ಹಾಕಲಾಗದ ಸ್ಥಳ, ರೈಲ್ವೆ ಬ್ಯಾರಿಕೇಡ್ ಅಳವಡಿಸಲಾಗದ ಜಾಗ ಮತ್ತು ತಡೆಗೋಡೆ ನಿರ್ಮಿಸಲಾಗದ ಸ್ಥಳದಲ್ಲಿ ಈ ಕ್ಯಾಮರಾ ಅಳವಡಿಸಲಾಗಿದೆ ಎಂದು ಅವರು ವಿವರಿಸಿದರು.


ಸುಮಾರು 3–4 ತಿಂಗಳ ಹಿಂದೆ ಈ ಎಐ ತಂತ್ರಜ್ಞಾನದ ಕ್ಯಾಮರಾ ಅಳವಡಿಸಲಾಗಿದ್ದು, ಈ ಕ್ಯಾಮರಾ ದಾಟಿ ಯಾವುದೇ ಆನೆಗಳು ಆ ಪ್ರದೇಶದಿಂದ ನಾಡಿನತ್ತ ಬಂದಿಲ್ಲವಾಗಿದ್ದು, ಅರಣ್ಯ ಇಲಾಖೆಯ ಈ ಪ್ಲಾನ್ ಸಕ್ಸಸ್ ಆಗಿದೆ. ಸರ್ಕಾರ ಅನುದಾನ ಒದಗಿಸಿದರೆ ಕಾಡಂಚಿನ ಪ್ರದೇಶಗಳಲ್ಲಿ ಆನೆ ಮತ್ತು ಪ್ರಾಣಿಗಳ ಹಾವಳಿ ಇರುವೆಡೆ ಈ ಕ್ಯಾಮರಾ ಅಳವಡಿಸಿ ಆನೆ, ಪ್ರಾಣಿ ಮತ್ತು ಮಾನವ ಸಂಘರ್ಷ ತಡೆಯಬಹುದಾಗಿದೆ ಎಂದು ಅವರು ವಿವರಿಸಿದರು.

ಸುಮಾರು ಒಂದೂವರೆ ಲಕ್ಷ ರೂ. ವೆಚ್ಚದಲ್ಲಿ ಈ ಎಐ ಕ್ಯಾಮರಾ ಅಳವಡಿಸಲಾಗಿದ್ದು, ಆನೆ ಹತ್ತಿರ ಬರುತ್ತಿದ್ದಂತೆ ಕ್ಯಾಮರಾಕ್ಕೆ ಅಳವಡಿಸಲಾಗಿರುವ ಸ್ಪೀಕರ್‌ನಲ್ಲಿ ಜೇನು ಹುಳುಗಳು, ಜನರ ಕಿರುಚಾಟ ಮತ್ತು ಪಟಾಕಿ ಸಿಡಿಸುವ ಸದ್ದು ಸೇರಿ ದಂತೆ ಸುಮಾರು 20 ತರದ ಶಬ್ದಗಳನ್ನು ಮಾಡಲಿದ್ದು, ಈ ಭಾರೀ ಶಬ್ದಕ್ಕೆ ಆನೆ ಹೆದರಿ ದಿಕ್ಕಾಪಾಲಾಗಿ ಓಡಿ ಹೋಗಲಿದೆ. ಈ ಕ್ಯಾಮರಾವು ಆನೆಗಳು ವಾಪಸ್ ಓಡಿ ಹೋಗುವುದನ್ನು ಸೆರೆ ಹಿಡಿಯುವುದರೊಂದಿಗೆ ಸುಮಾರು 150 ಮೀಟರ್ ವ್ಯಾಪ್ತಿಯವರೆಗೆ ಕಾರ್ಯ ನಿರ್ವಹಿಸಲಿದೆ.



ಯಾವುದೇ ಪ್ರಾಣಿಯನ್ನಾದರೂ ಕೂಡ ಕಾಡಿನಿಂದ ನಾಡಿಗೆ ಬರದಂತೆ ಎಐ ಕ್ಯಾಮರಾದಿಂದ ಹಿಮ್ಮೆಟ್ಟಿಸಬಹುದಾಗಿದೆ. ಆ ಕ್ಯಾಮರಾಕ್ಕೆ ಯಾವ ಪ್ರಾಣಿಗಳ ಚಿತ್ರವನ್ನು ಅಪ್ಲೋಡ್ ಮಾಡಿರುತ್ತೇವೋ, ಆ ಪ್ರಾಣಿಗಳ ಕಂಡ ತಕ್ಷಣ ಶಬ್ದ ಮಾಡಿ ಹಿಮ್ಮೆಟ್ಟಿಸುತ್ತವೆ. ಸದ್ಯಕ್ಕೆ ಆನೆಗಳ ಚಿತ್ರವನ್ನು ಈ ಕ್ಯಾಮರಾಕ್ಕೆ ಅಳವಡಿಸಿ ಆನೆ ಹಾವಳಿ ತಡೆಯುತ್ತಿದ್ದೇವೆ. ಇದರಲ್ಲಿ ಯಶಸ್ವಿಯಾಗಿದ್ದೇವೆ. –ಲಕ್ಷ್ಮೀಕಾಂತ್, ಎಸಿಎಫ್, ನಾಗರಹೊಳೆ ಅಭಯಾರಣ್ಯ.

ನಾಗರಹೊಳೆಯಲ್ಲಿ ನೂತನ ತಂತ್ರಜ್ಞಾನ ಯಶಸ್ವಿ





ನಾಗರಹೊಳೆಯಲ್ಲಿ ಆನೆ ಹಾವಳಿ ತಡೆಗೆ ಅಳವಡಿಸಲಾಗಿರುವ ಎಐ ತಂತ್ರಜ್ಞಾನದ ಕ್ಯಾಮರಾ.

ಈಗಾಗಲೇ ದೇಶದಾದ್ಯಂತ ಆರ್ಟಿಫಿಸಿಯಲ್ ಇಂಟಲಿಜೆನ್ಸ್ ತಂತ್ರಜ್ಞಾನ ವೇಗವಾಗಿ ಎಲ್ಲಾ ಕ್ಷೇತ್ರಗಳನ್ನು ಆವರಿಸಿಕೊಳ್ಳುತ್ತಿದ್ದು, ಇದೀಗ ಪ್ರಾಣಿಗಳನ್ನು ಹಿಮ್ಮೆಟ್ಟಿಸುವ ಕಾರ್ಯಕ್ಕೆ ಬಳಕೆಯಾಗಿದೆ ಈ ಕ್ಯಾಮರಾವೂ ಆನೆಯ ಸ್ಪಷ್ಟ ಚಿತ್ರವನ್ನು ಸೆರೆ ಹಿಡಿಯಲಿದೆ. ಜೊತೆಗೆ ಅದು ಓಡಿ ಹೋಗುವ ಎಲ್ಲಾ ದೃಶ್ಯಗಳನ್ನು ಸೆರೆ ಹಿಡಿಯಲಿದೆ.

ಇಲಾಖೆಯಲ್ಲಿರುವ ಅಲ್ಪ ಪ್ರಮಾಣದ ಆದಾಯದ ಹಣದಲ್ಲಿ ಒಂದೂವರೆ ಲಕ್ಷ ರೂ. ಖರ್ಚು ಮಾಡಿ ಈ ಎಐ ಕ್ಯಾಮರಾ ಅಳವಡಿಸಲಾಗಿದೆ. ಇದು ಯಶಸ್ವಿಯಾಗಿರುವುದರಿಂದ ಮುಂದಿನ ದಿನಗಳಲ್ಲಿ ಕಾಡಂಚಿನ ಪ್ರದೇಶಗಳಲ್ಲಿ ಅಳವಡಿಸಿ ಪ್ರಾಣಿಗಳ ಹಾವಳಿ ತಡೆಯಲು ಚಿಂತಿಸಲಾಗಿದೆ. ಈ ಎಐ ತಂತ್ರಜ್ಞಾನದ ಕ್ಯಾಮರಾ ಕಡಿಮೆ ದರದಲ್ಲಿ ಸಿಗುವಂತಾಗಬೇಕು. ಇದಕ್ಕೆ ಸರ್ಕಾರದಿಂದ ವಿಶೇಷ ಅನುದಾನದ ನೆರವು ಬೇಕಾಗುತ್ತದೆ ಎಂದು ಎಸಿಎಫ್ ಲಕ್ಷ್ಮೀಕಾಂತ್ ತಿಳಿಸಿದ್ದಾರೆ.

ಮೈಸೂರು ಮಿತ್ರ

ಮೈಸೂರಲ್ಲಿ ವಿಶ್ವ ರೈತ ದಿನದ ಅಂಗವಾಗಿ ರೈತ ಜಾಥಾ



ವಿಶ್ವ ರೈತ ದಿನಾಚರಣೆ ಅಂಗವಾಗಿ ಕರ್ನಾಟಕ ರಾಜ್ಯ ರೈತ ಸಂಘಗಳ ಮಹಾ ಒಕ್ಕೂಟ, ಕರ್ನಾಟಕ ರಾಜ್ಯ ರೈತ ಸಂಘ, ರೈತ ಬಣದ ವತಿಯಿಂದ ರೈತ ಜಾಥಾ ನಡೆಸಲಾಯಿತು.

ಮೈಸೂರು, ಡಿ.23(ಎಂಕೆ)– ವಿಶ್ವ ರೈತ ದಿನಾಚರಣೆ ಅಂಗವಾಗಿ ಕರ್ನಾಟಕ ರಾಜ್ಯ ರೈತ ಸಂಘಗಳ ಮಹಾ ಒಕ್ಕೂಟ, ಕರ್ನಾಟಕ ರಾಜ್ಯ ರೈತ ಸಂಘ, ರೈತ ಬಣದ ವತಿಯಿಂದ ರೈತ ಜಾಥಾ ನಡೆಸಿ, ಹಿರಿಯ ರೈತರು ಹಾಗೂ ನಿವೃತ್ತ ಸೈನಿಕರನ್ನು ಮಂಗಳವಾರ ಸನ್ಮಾನಿಸಲಾಯಿತು.

ನಗರದ ಕೋಟೆ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದ ಮುಂಭಾಗದಿಂದ ಆರಂಭವಾದ ರೈತ ಜಾಥಾ ಕೆ.ಆರ್. ವೃತ್ತದ ಮಾರ್ಗವಾಗಿ ಡಿ.ದೇವರಾಜ ಅರಸು ರಸ್ತೆ ಮೂಲಕ ಜೆ.ಕೆ.ಮೈದಾನ ದವರೆಗೆ ಸಾಗಿತು. ವಿವಿಧ ಸಾಂಸ್ಕೃತಿಕ ಕಲಾತಂಡಗಳೊಂದಿಗೆ ಎತ್ತಿನ ಗಾಡಿ ಚಲಾಯಿಸಿ, ಹಸಿರು ಶಾಲುಗಳನ್ನಿಡಿದ ನೂರಾರು ರೈತರು ಜಾಥಾದಲ್ಲಿ ಜೈಕಾರ ಕೂಗುತ್ತಾ ಸಾಗಿದರು.

ಬಳಿಕ ಜೆ.ಕೆ.ಮೈದಾನದಲ್ಲಿರುವ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಅಲುಮ್ನಿ ಅಸೋಸಿಯೇಷನ್ ಸಭಾಂಗಣದಲ್ಲಿ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಹಿರಿಯ ರೈತರು ಹಾಗೂ 30ಕ್ಕೂ ಹೆಚ್ಚು ಮಂದಿ ನಿವೃತ್ತ ಸೈನಿಕರನ್ನು ಸನ್ಮಾನಿಸಿ, ರೈತರು ಹಾಗೂ ಸೈನಿಕರ ಕೊಡುಗೆಯನ್ನು ಸ್ಮರಿಸಲಾಯಿತು.

ವೇದಿಕೆ ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದ ಚನ್ನಮ್ಮನ ಕಿತ್ತೂರು ರಾಜಗುರು ಸಂಸ್ಥಾನ ಕಲ್ಮಠದ ಶ್ರೀ ಮಡಿವಾಳ ರಾಜಯೋಗೀಂದ್ರ ಸ್ವಾಮೀಜಿ, ಎಲ್ಲರಿಗೂ ಎಲ್ಲಾ ಭಾಗ್ಯಗಳನ್ನು ನೀಡಿದ ರಾಜ್ಯ ಸರ್ಕಾರ ರೈತರಿಗೆ ಮಾತ್ರ ಯಾವುದೇ ಭಾಗ್ಯ ನೀಡಿಲ್ಲ. ವರ್ಷ ಪೂರ್ತಿ ಕಷ್ಟ ಪಟ್ಟು ಬೆಳೆದ ಬೆಳೆಗೆ ಉತ್ತಮ ಬೆಲೆ ಸಿಗುತ್ತಿಲ್ಲ. ಸರ್ಕಾರ ಸಕಾಲದಲ್ಲಿ ಖರೀದಿ ಕೇಂದ್ರಗಳನ್ನು ತೆರೆದು ರೈತರ ಸಂಕಷ್ಟಕ್ಕೆ ನೆರವಾಗುವುದಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಚಾಮರಾಜನಗರ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್, ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ರೈತರ ಕಷ್ಟ ಅರ್ಥವಾಗುತ್ತಿಲ್ಲ. ಆದ್ದರಿಂದ ರೈತರ ಆತ್ಮಹತ್ಯೆಗಳು ಹೆಚ್ಚಾಗುತ್ತಿವೆ ಎಂದರಲ್ಲದೆ ವಿಶ್ವಕ್ಕೆ ಅನ್ನ ಕೊಡುವ ರೈತರ ದಿನವನ್ನು ಸರ್ಕಾರ ರಾಷ್ಟ್ರೀಯ ಹಬ್ಬವನ್ನಾಗಿ ಆಚರಣೆ ಮಾಡಬೇಕು. ವಿಶ್ವ ರೈತ ದಿನದಂದು ಸಾರ್ವಜನಿಕ ರಜೆ ಘೋಷಣೆ ಮಾಡಬೇಕು ಎಂದು ಆಗ್ರಹಿಸಿದರು.

ಸರ್ಕಾರ ಕೃಷಿ ಪಂಪಸೆಟ್ ಖಾಸಗೀಕರಣ ಕೈ ಬಿಡಬೇಕು. ಅಕ್ರಮ–ಸಕ್ರಮ ಮತ್ತೆ ಜಾರಿಗೆ ತರಬೇಕು. ಗ್ರಾಪಂ ಮಟ್ಟದಲ್ಲಿ ವರ್ಷಪೂರ್ತಿ ಭತ್ತ, ರಾಗಿ, ಮೆಕ್ಕೆಜೋಳ ಖರೀದಿ ಕೇಂದ್ರಗಳನ್ನು ತೆರೆಯಬೇಕು, ಎಂಎಸ್‌ಪಿ ಅಡಿಯಲ್ಲಿ ಬೆಂಬಲ ಬೆಲೆ ಘೋಷಿಸಬೇಕು. ಸ್ಮಾರ್ಟ್ ಮೀಟರ್ ಯೋಜನೆ ಕೈ ಬಿಡಬೇಕು. ಎಪಿಎಂಸಿ ಕಾಯಿದೆ ತಿದ್ದುಪಡಿ ರದ್ದಾಗಬೇಕು ಎಂದು ಒತ್ತಾಯಿಸಿದರು.

ರೈತ ಬಣ ಹಾಗೂ ಕರ್ನಾಟಕ ರಾಜ್ಯ ರೈತ ಸಂಘಗಳ ಮಹಾ ಒಕ್ಕೂಟದ ರಾಜ್ಯಾಧ್ಯಕ್ಷ ಇಂಗಲಗುಪ್ಪೆ ಕೃಷ್ಣೇಗೌಡ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಮಾಜಿ ಶಾಸಕ ವಿಶ್ವನಾಥ ಪಾಟೀಲ, ಕರ್ನಾಟಕ ರಾಜ್ಯ ರೈತ ಸಂಘಗಳ ಮಹಾ ಒಕ್ಕೂಟದ ಸಂಸ್ಥಾಪಕ ಅಧ್ಯಕ್ಷ ಬೀರಪ್ಪ ದೇಶನೂರ್, ಕಾರ್ಯಾಧ್ಯಕ್ಷ ಬಸನಗೌಡ ಪಾಟೀಲ, ಕಾರ್ಯದರ್ಶಿ ದಾದಾ ಮೆಹಬೂಬ ಸಾಬ ನವಲಗುಂದ, ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘದ ಜಿಲ್ಲಾಧ್ಯಕ್ಷ ದಿವಾಕರ್, ಕಾರ್ಯದರ್ಶಿ ನಟರಾಜ್, ಉಪಾಧ್ಯಕ್ಷ ನೀಲಕಂಠಶೆಟ್ಟಿ, ಖಜಾಂಚಿ ಶಂಕರಪ್ಪ, ರೈತ ಮುಖಂಡರಾದ ಸುರೇಶ್ ಮೂಲಿಮನಿ, ಮಹಾಂತೇಶ ಗೌರಿ, ಈರಣ್ಣ ಅಂಗಡಿ, ಹೇಮಾ ಕಾಜಗಾರ, ರಾಮೇಗೌಡ ಮತ್ತಿತರರಿದ್ದರು.

ರಾಜಕಾರಣಿಗಳು ಬರಲ್ಲ... ನಾವು ಕರೆಯಲ್ಲ...!

ರಾಜಕಾರಣಿಗಳು ರೈತರ ಕಾರ್ಯಕ್ರಮಕ್ಕೆ ಹೋದರೆ, ರೈತರು ಸಾಲ ಮನ್ನಾ ಮಾಡಿ ಅಂತಾರೆ, ಕೃಷಿ ಉತ್ಪನ್ನಗಳಿಗೆ ವೈಜ್ಞಾನಿಕ ಬೆಲೆ ಕೊಡಿ ಎಂದು ಕೇಳುತ್ತಾರೆ ಎಂಬ ಕಾರಣಕ್ಕೆ ರೈತರ ಕಾರ್ಯಕ್ರಮಗಳಿಗೆ ರಾಜಕಾರಣಿಗಳು ಬರುವುದಿಲ್ಲ. ನಾವು ಇನ್ನು ಮುಂದೆ ಅವರನ್ನು ಕರೆಯಲ್ಲ.


– ಇಂಗಲಗುಪ್ಪೆ ಕೃಷ್ಣೇಗೌಡ, ರಾಜ್ಯಾಧ್ಯಕ್ಷ, ರೈತ ಬಣ ಹಾಗೂ ಕರ್ನಾಟಕ ರಾಜ್ಯ ರೈತ ಸಂಘಗಳ ಮಹಾ ಒಕ್ಕೂಟ

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಪಡೆಯಪ್ಪ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಅವತಾರ್ 3ಡಿ (ಕ–1 + ಇಂ–2)	3 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಧುರಂಧರ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಡೆವಿಲ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಡೆವಿಲ್ (ಕ)	4 ಪ್ರದರ್ಶನಗಳು
ರಾಜಕಮಲ್	
ಅಖಂಡ–2 (ತೆ)	4 ಪ್ರದರ್ಶನಗಳು
ಸಂಗಂ	
ಡೆವಿಲ್ (ಕ)	3 ಪ್ರದರ್ಶನಗಳು
ಲಿಡೋ	
ಅಖಂಡ–2 (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಕಾಂತಾರ–2 (ಕ)	4 ಪ್ರದರ್ಶನಗಳು

ಕಾಂಗ್ರೆಸ್ ಕುರ್ಚಿ ಕಚ್ಚಾಟದಿಂದ ರಾಜ್ಯದ ಅಭಿವೃದ್ಧಿ ಕುಂಠಿತ

ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ಆರೋಪ



ಬೆಂಗಳೂರು, ಡಿ.23(ಕೆಎಂಶಿ)–ರಾಜ್ಯ ಕಾಂಗ್ರೆಸ್ ನಾಯಕರ ಕುರ್ಚಿ ಕಚ್ಚಾಟದಿಂದ ರಾಜ್ಯದ ಅಭಿವೃದ್ಧಿ ಕುಂಠಿತವಾಗಿದ್ದು, ಆಡಳಿತ ಪಕ್ಷದ ಶಾಸಕರೇ ದೂರುತ್ತಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಟೀಕಿಸಿದ್ದಾರೆ.

ಯಾವ ಸರ್ಕಾರದಲ್ಲಿ ಸ್ಥಿರತೆ ಇರುವುದಿಲ್ಲವೋ ಅಲ್ಲಿ ಸಹಜವಾಗಿ ಅಭಿವೃದ್ಧಿ ಕುಂಠಿತವಾಗುತ್ತದೆ. ಕಾಂಗ್ರೆಸ್‌ನಲ್ಲಿ ಹೈ ಇದೆ, ಆದರೆ, ಕಮಾಂಡ್ ಇಲ್ಲವೇ ಇಲ್ಲ. ಗೊಂದಲ ಇದೆ ಎಂಬುದರಲ್ಲಿ ಎರಡು ಮಾತಿಲ್ಲ. ಕಾಂಗ್ರೆಸ್ ಹೈಕಮಾಂಡ್ ಎರಡು ಭಾಗವಾಗಿದೆ.

ರಾಜ್ಯದಲ್ಲಿ ಉಂಟಾಗಿರುವ ಅಧಿಕಾರ ಹಂಚಿಕೆ ಗೊಂದಲದಲ್ಲಿ ಹೈಕಮಾಂಡ್ ಪಾತ್ರ ಬಹಳ ದೊಡ್ಡದಾಗಿದೆ. ಕರ್ನಾಟಕ ಕಾಂಗ್ರೆಸ್ ನಾಯಕರು ಪಳಗಿದ್ದಾರೆ ಎಲ್ಲಾ ಇಲ್ಲಿಂದಲೇ ಹೋಗುವಾಗ ಹೈಕಮಾಂಡ್ ಮಾತು ಏಕೆ ಇವರು ಕೇಳುತ್ತಾರೆ ಎಂದರು.

ದ್ವೇಷ ಭಾಷಣ ವಿರುದ್ಧದ ಕಾಯ್ದೆ ದಮನಕಾರಿ ಕಾನೂನು, ದ್ವೇಷ ಭಾಷಣ ಎಂಬ ವ್ಯಾಖ್ಯಾನ ದೊಡ್ಡಪ್ರಮಾಣದಲ್ಲಿ ಮಾಡಿದ್ದಾರೆ. ಯಾರನ್ನು ಯಾವಾಗ ಬೇಕಾದರೂ ಜೈಲಿಗೆ ಹಾಕುವ ರೀತಿ ಮಾಡಿದ್ದಾರೆ.

ಸರ್ಕಾರ ಎಲ್ಲಾ ರಂಗದಲ್ಲಿ ವಿಫಲವಾಗಿದೆ. ಅಭಿವೃದ್ಧಿ ಶೂನ್ಯವಾಗಿದೆ. ಆರ್ಥಿಕವಾಗಿ ದಿವಾಳಿಯಾಗಿದೆ. ವ್ಯಾಪಕ ಭ್ರಷ್ಟಾಚಾರ ನಡೆಯುತ್ತಿದೆ. ಇದನ್ನು ಯಾರೂ ಪ್ರಶ್ನೆ ಮಾಡಬಾರದು ಎಂಬುದಕ್ಕೆ ಈ ಕಾಯ್ದೆ ಜಾರಿಗೆ ತರುತ್ತಿದ್ದಾರೆ.


ಪ್ರಚೋದನಕಾರಿ ಭಾಷಣ ವಿರುದ್ಧ ಕ್ರಮಕ್ಕೆ ಈಗಾಗಲೇ ಬಿಎನ್‌ಎಸ್ ಕಾಯಿದೆ ನಿಯಮಗಳಿವೆ, ವಿಶೇಷ ಕಾನೂನು ತರುವ ಅಗತ್ಯವೇನಿದೆ. ವಿರೋಧ ಪಕ್ಷಗಳು ಸಣ್ಣಮಟ್ಟದಾಗಿ ಮಾತನಾಡಿದರೂ ಜೈಲಿಗೆ ಹಾಕಲು ಕಾನೂನು ತರುತ್ತಿದ್ದಾರೆ.

ತುರ್ತು ಪರಿಸ್ಥಿತಿಯಲ್ಲೂ ಹೀಗೆ ಇರಲಿಲ್ಲ, ಇದು ಅಘೋಷಿತ ಅಲ್ಲ. ಘೋಷಿತ ಎಮರ್ಜನ್ಸಿ, ರಾಜ್ಯಪಾಲರನ್ನು ನಾನು ಭೇಟಿ ಮಾಡುವೆ. ಅಗತ್ಯ ಬಿದ್ದರೆ ಕಾನೂನು ಹೋರಾಟ ಸಹಾ ಮಾಡುತ್ತೇವೆ. ಕಾನೂನು ಯಾರ ಕೈಯಲ್ಲಿ ಇದೆ ಎನ್ನುವುದು ಮುಖ್ಯ. ದ್ವೇಷ ರಾಜಕಾರಣ ಮಾಡುವವರ ಕೈಯಲ್ಲಿ ಅಧಿಕಾರ ಇದೆ, ಆದ್ದರಿಂದ ಹೊಸ ಕಾನೂನು ಆತಂಕಕಾರಿ ಎಂದರು.

ಸಿನಿಮಾ ಪೈರಸಿಗೆ ಆಂಟಿ ಪೈರಸಿ ಕಾನೂನು ಇದೆ, ಸರ್ಕಾರ ಕ್ರಮ ತೆಗೆದುಕೊಳ್ಳಬೇಕು. ಸಿನಿಮಾ ಅಷ್ಟೇ ಅಲ್ಲಾ. ಎಲ್ಲಾ ರಂಗದಲ್ಲೂ ಪೈರಸಿ ಇದೆ. ಅಮೃತಾಂಜನ್, ವಿಕ್ಸ್‌ನಿಂದ ಹಿಡಿದು ಎಲ್ಲವೂ ಡೂಪ್ಲಿಕೇಟ್ ಆಗುತ್ತಿವೆ, ಹಾಗೇ ಸಿನೇಮಾ ಪೈರೆಸಿ ತಡೆಗಟ್ಟಲು ಸರ್ಕಾರ ಕ್ರಮ ತೆಗೆದುಕೊಳ್ಳಬೇಕು ಎಂದರು.

ಬೆಳವಾಡಿಯಲ್ಲಿ ಬೀದಿ ನಾಯಿ ಹೊತ್ತೊಯ್ದ ಚಿರತೆ

ದೃಶ್ಯ ಸಿಸಿ ಕ್ಯಾಮಾರಾದಲ್ಲಿ ಸೆರೆ, ಗ್ರಾಮಸ್ಥರಲ್ಲಿ ಆತಂಕ



ನಾಯಿ ಮೇಲೆ ಚಿರತೆ ದಾಳಿ ನಡೆಸಿದ ದೃಶ್ಯ ಸಿಸಿ ಕ್ಯಾಮರದಲ್ಲಿ ಸೆರೆಯಾಗಿದೆ


ಮೈಸೂರು,ಡಿ.23(ಎಂಟಿವೈ)– ಮೈಸೂರಿನ ಹೊರವಲಯದ ಬೆಳವಾಡಿ ಗ್ರಾಮದಲ್ಲಿ ರಸ್ತೆ ಬದಿಯಲ್ಲಿ ಮಲಗಿದ್ದ ಬೀದಿನಾಯಿಗಳ ಮೇಲೆ ಚಿರತೆಯೊಂದು ಕಳೆದ ರಾತ್ರಿ ದಾಳಿ ನಡೆಸಿ, ನಾಯಿಯೊಂದನ್ನು ಹೊತ್ತೊಯ್ದಿದ್ದು ಗ್ರಾಮಸ್ಥರು ಆತಂಕಗೊಂಡಿದ್ದಾರೆ.

ಬೆಳವಾಡಿ ಗ್ರಾಮದ ರಸ್ತೆಯಲ್ಲಿ ಮನೆಯೊಂದರಲ್ಲಿ ಅಳವಡಿಸಿದ್ದ ಸಿಸಿ ಕ್ಯಾಮರಾದಲ್ಲಿ ಚಿರತೆ ದಾಳಿ ನಡೆಸಿದ ದೃಶ್ಯ ಸೆರೆಯಾಗಿದ್ದು, ಇದರಿಂದ ಚಿರತೆ ಸೆರೆ ಹಿಡಿಯುವಂತೆ ಗ್ರಾಮಸ್ಥರು ದೂರು ನೀಡಿದ್ದಾರೆ. ಸೋಮವಾರ ರಾತ್ರಿ 9.54ಕ್ಕೆ ರಸ್ತೆ ಬದಿ ಮಲಗಿದ್ದ ನಾಲ್ಕು ನಾಯಿಗಳ ಒಂದರ ಮೇಲೆ ಚಿರತೆ ದಾಳಿ ನಡೆಸಿದೆ. ಇದರಿಂದ ಜೀವ ಉಳಿಸಿಕೊಳ್ಳಲು ನಾಯಿ ಓಡಿದರೂ ಬೆಂಬಿಡದ ಚಿರತೆ ನಾಯಿ ಮೇಲೆ ಮುಗಿಬಿದ್ದಿದೆ. ಇದನ್ನು ಗಮನಿಸಿದ ಎರಡು ನಾಯಿ ಚಿರತೆ ಮೇಲೆ ದಾಳಿ ಮಾಡಲು ಪ್ರಯತ್ನಿಸಿದೆಯಾದರೂ, ಭಯದಿಂದ ವಾಪಸ್ಸಾಗಿವೆ. ಕೆಲವೇ ಸೆಕೆಂಡ್‌ಗಳಲ್ಲಿ ಚಿರತೆ ನಾಯಿಯೊಂದನ್ನು ಕೊಂದು ಎಳೆದೊಯ್ದಿರುವ ದೃಶ್ಯ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದೆ.

ಇಂದು ಬೆಳಗ್ಗೆ ಚಿರತೆ ದಾಳಿ ಮಾಡಿರುವ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿರುವ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ವಿಷಯ ತಿಳಿದು ಸ್ಥಳಕ್ಕೆ ಆಗಮಿಸಿದ ಅರಣ್ಯ ಸಿಬ್ಬಂದಿಗಳ ತಂಡ ಚಿರತೆ ದಾಳಿ ಮಾಡಿದ ಸ್ಥಳ ಪರಿಶೀಲಿಸಿದ್ದು, ಚಿರತೆಗಾಗಿ ಕೂಂಬಿಂಗ್ ನಡೆಸಿದ್ದಾರೆ. ಅಲ್ಲದೆ, ಗ್ರಾಮದ ಹೊರವಲಯದಲ್ಲಿ ಪೊದೆ ಬೆಳೆದಿರುವ ಹಳ್ಳ ಅಥವಾ ಪಾಳು ಬಿದ್ದ ಜಮೀನಿನಲ್ಲಿ ಚಿರತೆ ವಾಸವಿರುವ ಶಂಕೆ ವ್ಯಕ್ತವಾಗಿದ್ದು, ಅದನ್ನು ಸೆರೆ ಹಿಡಿಯಲು ಬೋನ್ ಇಡಲು ಅರಣ್ಯ ಇಲಾಖೆ ನಿರ್ಧರಿಸಿದ್ದಾರೆ. ರಾತ್ರಿ ವೇಳೆ ಒಬ್ಬೊಬ್ಬರೆ ಓಡಾಡದಂತೆ ಸಲಹೆ ನೀಡಲಾಗಿದೆ.

ಕೆಆರ್‌ಎಸ್‌ನಲ್ಲಿ ಕ್ರಿಸ್‌ಮಸ್, ಹೊಸ ವರ್ಷದ ಸಂಭ್ರಮಕ್ಕೆ ಚಿರತೆ ಆತಂಕ

- ಚಿರತೆ ಕಾರ್ಯಪಡೆಯಿಂದ ಕೂಂಬಿಂಗ್ ಕಾರ್ಯಾಚರಣೆ
- ಸಿಗದ ಚಿರತೆ ಸುಳಿವು, ಕಾಡು ಬೆಕ್ಕಿನ ಪಗ್ ಮಾರ್ಕ್ ಪತ್ತೆ



ಕೆಆರ್‌ಎಸ್ ಉದ್ಯಾನವನದಲ್ಲಿ ಚಿರತೆ ಕಾರ್ಯಪಡೆ ಸಿಬ್ಬಂದಿ ಕೂಂಬಿಂಗ್ ಕಾರ್ಯಾಚರಣೆ ನಡೆಸುತ್ತಿರುವುದು.

ಮೈಸೂರು,ಡಿ.23(ಎಂಟಿವೈ)– ಕ್ರಿಸ್‌ಮಸ್ ಹಾಗೂ ಹೊಸ ವರ್ಷದ ಸಂಭ್ರಮಾಚರಣೆಗೆ ಕೆಆರ್‌ಎಸ್ ಉದ್ಯಾನವನಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರ ಆಗಮನದ ನಿರೀಕ್ಷೆ ಹಿನ್ನೆಲೆಯಲ್ಲಿ ಮಂಗಳವಾರ ಕೆಆರ್‌ಎಸ್ ಉದ್ಯಾನವನದಲ್ಲಿ ಚಿರತೆ ಕಾರ್ಯಪಡೆಯಿಂದ ಕೂಂಬಿಂಗ್ ನಡೆಸಲಾಯಿತು.

ಕೆಲ ದಿನಗಳ ಹಿಂದೆ ಕೆಆರ್‌ಎಸ್ ಉದ್ಯಾನವನದಲ್ಲಿ ಚಿರತೆ ಸಂಚರಿಸಿರುವ ಮಾಹಿತಿ ಲಭ್ಯವಾಗಿದ್ದ ಹಿನ್ನೆಲೆಯಲ್ಲಿ ಉದ್ಯಾನವನ ವೀಕ್ಷಣೆಗೆ ಕ್ರಿಸ್‌ಮಸ್, ಹೊಸ ವರ್ಷದ ಸಂಭ್ರಮಾಚರಣೆಗಾಗಿ ಬರುವ ಪ್ರವಾಸಿಗರಿಗೆ ಯಾವುದೇ ತೊಂದರೆಯಾಗದಂತೆ ಕಟ್ಟೆಚ್ಚರ ವಹಿಸುವುದಕ್ಕಾಗಿ ಇಂದು ಕೂಂಬಿಂಗ್ ಕಾರ್ಯಾಚರಣೆ ನಡೆಸಲಾಯಿತು.

ಕೆಆರ್‌ಎಸ್ ಉದ್ಯಾನವನದ ಎಇಇ ಮತ್ತು ಎಇ ಅವರ ಕೋರಿಕೆ ಮೇರೆಗೆ ಶ್ರೀರಂಗಪಟ್ಟಣದ ಅರಣ್ಯ ಸಿಬ್ಬಂದಿ ಹಾಗೂ ಮೈಸೂರಿನ ಚಿರತೆ ಕಾರ್ಯಪಡೆಯ ತಂಡ ಮಂಗಳವಾರ ಬೆಳಗ್ಗೆ ಕೆಆರ್‌ಎಸ್ ಗಾರ್ಡನ್, ಕೆಇಆರ್‌ಎಸ್ ಮಾಡೆಲ್, ನಗುವನ, ಹೋಟೆಲ್ ಮಯೂರ, ರಾಯಲ್ ಆರ್ಕಿಡ್‌ನ ಹಿಂಭಾಗದಲ್ಲಿ ಕೂಂಬಿಂಗ್ ಮಾಡಲಾಯಿತು. ಸುಮಾರು ಎರಡು ಗಂಟೆಗೂ ಹೆಚ್ಚು ಸಮಯ ಅನುಮಾನ ಬಂದ ಸ್ಥಳ, ಚಿರತೆ ಆಶ್ರಯ ಪಡೆಯಬಹುದಾದ ಸಂಭವನೀಯ ಸ್ಥಳ, ಸೇತುವೆ ಕೆಳಗೆ, ನದಿ ಪಾತ್ರದ ಹಳ್ಳದಲ್ಲಿ ಚಿರತೆಗಾಗಿ ಶೋಧ ಕಾರ್ಯ ನಡೆಸಿದರು.

ಆದರೆ, ಎಲ್ಲಿಯೂ ಚಿರತೆ ಸುಳಿವಾಗಲೀ ಅಥವಾ ಚಿರತೆಯ ಹೆಜ್ಜೆ ಗುರುತಾಗಲೀ ಪತ್ತೆಯಾಗಲಿಲ್ಲ. ಕೂಂಬಿಂಗ್ ವೇಳೆ ಚಿರತೆ ಕಾರ್ಯಪಡೆಗೆ ನಾಯಿ, ಹಸು ಕಾಡು ಬೆಕ್ಕಿನ ಹೆಜ್ಜೆ ಗುರುತು ಪತ್ತೆಯಾಗಿವೆ. ಉದ್ಯಾನವನದ ಬಳಿ ಅಳವಡಿಸಿರುವ ಸಿಸಿ ಕ್ಯಾಮರಾದಲ್ಲೂ ಚಿರತೆ ಓಡಾಡಿರುವ ದೃಶ್ಯ ಸೆರೆಯಾಗಿಲ್ಲ. ಈ ಹಿನ್ನೆಲೆಯಲ್ಲಿ ಕೂಂಬಿಂಗ್‌ಗೆ ತೆರಳಿದ್ದ ಸಿಬ್ಬಂದಿ ಸ್ಥಳೀಯರಿಗೆ ಚಿರತೆಯ ಬಗ್ಗೆ ಅರಿವು ಮೂಡಿಸಿ, ವಾಪಸ್ಸಾಗಿದ್ದಾರೆ.

ನಾಗನಹಳ್ಳಿ ಕೃಷಿ ಪತ್ತಿನ ಸಹಕಾರ ಬ್ಯಾಂಕ್‌ಗೆ ಮೂವರು ನಿರ್ದೇಶಕರ ಆಯ್ಕೆ



ಉಮಾಶಂಕರ್



ನಿಂಗರಾಜು



ಲತಾ

ಮೈಸೂರು, ಡಿ.23– ಮೈಸೂರು ತಾಲೂಕು ನಾಗನಹಳ್ಳಿ ಕೃಷಿ ಪತ್ತಿನ ಸಹಕಾರ ಬ್ಯಾಂಕಿನ ನಿರ್ದೇಶಕರುಗಳಾಗಿ ಕಾಂಗ್ರೆಸ್ ಬೆಂಬಲಿತ ಮೂವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಕಾಂಗ್ರೆಸ್ ಮುಖಂಡರಾದ ಎನ್.ಯು.ಉಮಾಶಂಕರ್, ಎನ್.ಸಿ.ನಿಂಗರಾಜು ಮತ್ತು ಲತಾ ವೆಂಕಟೇಶ್ ಅವರುಗಳು ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ ಎಂದು ಸಹಕಾರ ಸಂಘದ ಪ್ರಕಟಣೆ ತಿಳಿಸಿದೆ.

ಸಂಸದ ಸುನೀಲ್ ಬೋಸ್‌ಗೆ ಸನ್ಮಾನ...



ಮೈಸೂರು ದಸರಾ ವಸ್ತುಪ್ರದರ್ಶನ ಸಾಂಸ್ಕೃತಿಕ ಸಮಿತಿಯಿಂದ ಪಿ.ಕಾಳಿಂಗರಾವ್ ಗಾನಮಂಟಪದಲ್ಲಿ ಹಮ್ಮಿಕೊಂಡಿದ್ದ ಜನಪದ ಗಾಯನ ಕಾರ್ಯಕ್ರಮದಲ್ಲಿ ಸಂಸದ ಸುನೀಲ್ ಬೋಸ್ ಅವರನ್ನು ಸನ್ಮಾನಿಸಲಾಯಿತು. ವಸ್ತು ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಸಿಇಓ ಕೆ.ರುದ್ರೇಶ್, ಸಾಂಸ್ಕೃತಿಕ ಸಮಿತಿಯ ಅಧ್ಯಕ್ಷ ಮಲ್ಲಿಕಾರ್ಜುನಸ್ವಾಮಿ, ಕಾರ್ಯಾಧ್ಯಕ್ಷ ಪ್ರಕಾಶ್ ಎಸ್, ಉಪಾಧ್ಯಕ್ಷರಾದ ಮೆಲ್ಲಹಳ್ಳಿ ರಾಜೇಶ್‌ಗೌಡ, ರಂಗಸ್ವಾಮಿ, ಡೈರಿ ವೆಂಕಟೇಶ್, ನಾಸೀರ್ ಖಾನ್, ನಿರೂಪಕ ಅಜಯ್‌ಶಾಸ್ತ್ರಿ, ಗುರುರಾಜ್ ಇನ್ನಿತರರು ಉಪಸ್ಥಿತರಿದ್ದರು.

ಚನ್ನಕೇಶವ ಪ್ರೌಢಶಾಲೆಯಲ್ಲಿ ವಾರ್ಷಿಕೋತ್ಸವ; ಸ್ನೇಹ ಸಮ್ಮಿಲನ

ಗುಣಾತ್ಮಕ ಶಿಕ್ಷಣ ನೀಡಿದರೆ ಪೋಷಕರ ಬೆಂಬಲ : ಎಚ್.ವಿ. ರಾಜೀವ್



ಚನ್ನಕೇಶವ ಪ್ರೌಢಶಾಲೆಯ ವಾರ್ಷಿಕೋತ್ಸವ, ಗುರುವಂದನೆ ಹಾಗೂ ಸ್ನೇಹಸಮ್ಮಿಲನವನ್ನು ಗಣ್ಯರು ಉದ್ಘಾಟಿಸಿದರು.

ಮೈಸೂರು, ಡಿ. 23– ಪ್ರಸ್ತುತ ದಿನಮಾನಗಳಲ್ಲಿ ಗುಣಾತ್ಮಕ ಶಿಕ್ಷಣ ನೀಡಿದರೆ ಪೋಷಕರು ಬೆಂಬಲ ನೀಡುತ್ತಾರೆ ಎಂದು ಮುಡಾ ಮಾಜಿ ಅಧ್ಯಕ್ಷ ಎಚ್.ವಿ. ರಾಜೀವ್ ಹೇಳಿದರು.

ನಗರದ ಶ್ರೀರಾಂಪುರ ಪರಸಯ್ಯಹುಂಡಿ ಶ್ರೀ ಚನ್ನಕೇಶವ ಸ್ವಾಮಿ ಪ್ರೌಢಶಾಲೆಯ ವಾರ್ಷಿಕೋತ್ಸವ, ಗುರುವಂದನೆ ಹಾಗೂ ಸ್ನೇಹಸಮ್ಮಿಲನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಹಿಂದೆ ಕಾಳಯ್ಯನವರು ಗ್ರಾಮೀಣ ಪ್ರದೇಶದ ಮಕ್ಕಳಿಗೂ ಉತ್ತಮ ಶಿಕ್ಷಣ ಸಿಗಲಿ ಎಂಬ ಸೇವಾಮನೋಭಾವದಿಂದ ಈ ಶಾಲೆಯನ್ನು ಆರಂಭಿಸಿದರು. ಯಾವುದೇ ಶುಲ್ಕ ಪಡೆಯುತ್ತಿರಲಿಲ್ಲ. ಆದರೆ ಈಗ ಪರಿಸ್ಥಿತಿ ಬದಲಾಗಿದೆ. ಬಂಡವಾಳ ಹಾಕಿ ಬಂಡವಾಳ ತೆಗೆಯುತ್ತಿದ್ದಾರೆ. ಶುಲ್ಕ ಪಡೆಯದೇ ಶಾಲೆಗಳನ್ನು ಅದರಲ್ಲೂ ಕನ್ನಡ ಮಾಧ್ಯಮ ಶಾಲೆಗಳನ್ನು ನಡೆಸಲು ಸಾಧ್ಯವೇ ಇಲ್ಲ ಎಂದರು.


ಇವತ್ತು ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕುಸಿದಿದೆ. ಆದರೆ ಖಾಸಗಿ ಶಾಲೆಗಳಲ್ಲಿ ಉತ್ತಮ ಶಿಕ್ಷಣ ನೀಡಿದರೆ ಪೋಷಕರು ಶುಲ್ಕದ ಬಗ್ಗೆ ಯೋಚನೆ ಮಾಡುವುದಿಲ್ಲ. ಆದ್ದರಿಂದ ಅತ್ಯುತ್ತಮ ಶಿಕ್ಷಕರನ್ನು ನೇಮಿಸಿಕೊಂಡು ಗುಣಾತ್ಮಕ ಶಿಕ್ಷಣ ನೀಡುವ ಮೂಲಕ ಶಾಲೆಯನ್ನು ಉಳಿಸಬೇಕು ಎಂದು ಅವರು ಕಿವಿಮಾತು ಹೇಳಿದರು.

ಕನ್ನಡ ಶಾಲೆಗಳನ್ನು ನಡೆಸುವುದು ಎಂದರೇ ಬಯಲಿನಲ್ಲಿ ದೀಪ ಹಚ್ಚಿದಂತೆ. ಗಾಳಿ ಬಂದರೆ ದೀಪ ಆರಿ ಹೋಗುತ್ತದೆ ಎಂದು ಅವರು ಮಾರ್ಮಿಕವಾಗಿ ಹೇಳಿದರು.

ಕಾಳಯ್ಯನವರು ಅಂಬೇಡ್ಕರ್ ಅವರ ಆಶಯದಂತೆ ಎಲ್ಲ ವರ್ಗದ ಜನರಿಗೂ ಶಿಕ್ಷಣ ಕಲಿಸಲು ಮುಂದಾದರು. ಇಲ್ಲಿ ಕಲಿತಿರುವ ಗೀತಾ ಪ್ರಸನ್ನ ಅವರು ಎಸ್ಪಿಯಾಗಿದ್ದಾರೆ. ಮತ್ತೊಬ್ಬರು ಡಿವೈಎಸ್ಪಿಯಾಗಿದ್ದಾರೆ. ಸುಮಾರು 150 ವಿವಿಧ ಸರ್ಕಾರಿ ಹುದ್ದೆಗಳಲ್ಲಿದ್ದಾರೆ. ಅವರ ಕಡೆಯಿಂದಲೂ ಸಹಾಯ ಪಡೆಯಿರಿ ಎಂದರು.

ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ಮಾತನಾಡಿದರು. ಸಾಲಿಗ್ರಾಮ ಎಸ್‌ಸಿಇಎಲ್ ಅಧ್ಯಕ್ಷ ಲೋಕೇಶ್ವರ ಅಧ್ಯಕ್ಷತೆ ವಹಿಸಿದ್ದರು. ನಿರ್ದೇಶಕ ಕೆ.ಆರ್. ಬಸವರಾಜು ಪ್ರಾಸ್ತಾವಿಕ ಭಾಷಣ ಮಾಡಿದರು. ಗೌ. ಕಾರ್ಯದರ್ಶಿ ಚನ್ನಮಲ್ಲಯ್ಯ, ವಸತಿ ನಿಲಯ ಪಾಲಕ ಗುರುಪ್ರಸಾದ್, ಎಸ್‌ಸಿಇಎಲ್ ನಿರ್ದೇಶಕರಾದ ಶಿವಪ್ಪ, ಎಂ.ಎಲ್. ಯುಕ್ತಶ್ರೀ, ರಂಗರಾಮು ಅತಿಥಿಗಳಾಗಿದ್ದರು.

ದ್ವೇಷ ಭಾಷಣ ಪ್ರತಿಬಂಧಕ ವಿಧೇಯಕದ ವಿರುದ್ಧ ಬಿಜೆಪಿ ಪ್ರತಿಭಟನೆ



ರಾಜ್ಯ ಸರ್ಕಾರ ಜಾರಿಗೆ ತರಲು ಮುಂದಾಗಿರುವ 'ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ ಪ್ರತಿಬಂಧಕ ವಿಧೇಯಕ 2025' ಹಿಂಪಡೆಯುವಂತೆ ಆಗ್ರಹಿಸಿ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರು,ಡಿ.23(ಎಂಟಿವೈ)– ರಾಜ್ಯ ಸರ್ಕಾರ ಜಾರಿಗೆ ತರಲು ಮುಂದಾಗಿರುವ 'ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ ಪ್ರತಿಬಂಧಕ ವಿಧೇಯಕ 2025' ಹಿಂಪಡೆಯುವಂತೆ ಆಗ್ರಹಿಸಿ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರಿನ ನಜರ್‌ಬಾದ್‌ನಲ್ಲಿರುವ ಮಿನಿ ವಿಧಾನಸೌಧದ ಮುಂದೆ ಮಂಗಳವಾರ ಬೆಳಗ್ಗೆ ಮೈಸೂರು ನಗರ ಬಿಜೆಪಿ ಘಟಕದ ಕಾರ್ಯಕರ್ತರು ಪ್ರತಿಭಟನೆ ನಡೆಸಿ, ಕರ್ನಾಟಕ ಸರ್ಕಾರ 'ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ ಪ್ರತಿಬಂಧಕ ವಿಧೇಯಕ 2025' ಮೂಲಕ ವಾಕ್ ಸ್ವಾತಂತ್ರ್ಯ ಕಸಿದುಕೊಳ್ಳುವ ಹುನ್ನಾರ ನಡೆಸಿದೆ. ಇದರಿಂದ ನಾಗರೀಕರ ಮೂಲ ಹಕ್ಕುಗಳನ್ನು ಕಸಿದುಕೊಳ್ಳುವ ಸಂಚು ನಡೆಸಲಾಗಿದೆ. ಈ ಮಸೂದೆ ಸರ್ಕಾರದ ವಿರುದ್ಧ ಮಾತನಾಡುವವರ ಬಾಯಿ ಮುಚ್ಚಿಸುವ ಸಾಧನವಾಗಿದೆ. ಇದರಡಿ ದ್ವೇಷ ಭಾಷಣಕ್ಕೆ ನೀಡಿರುವ ವ್ಯಾಖ್ಯಾನವೇ ಅಸ್ಪಷ್ಟವಾಗಿದೆ. ಸರ್ಕಾರದ ನೀತಿಗಳ ವಿರುದ್ಧ ಟೀಕೆ, ಸಾಮಾಜಿಕ ಜಾಲತಾಣಗಳಲ್ಲಿ ವ್ಯಂಗ್ಯ ಮಾಡುವುದು ಅಥವಾ ಸತ್ಯವನ್ನು ಹೇಳುವುದನ್ನೂ ಕೂಡ ದ್ವೇಷ ಎಂದು ಪರಿಗಣಿಸುವ ಅಪಾಯವಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.


ಇದೇ ವೇಳೆ ಮಾಜಿ ಶಾಸಕ, ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ಮಾತನಾಡಿ, ರಾಜ್ಯದ ಕಾಂಗ್ರೆಸ್ ಸರ್ಕಾರ 'ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ ಪ್ರತಿಬಂಧಕ ವಿಧೇಯಕ 2025' ಜಾರಿಗೊಳಿಸುವ ಮೂಲಕ ಸರ್ಕಾರದ ವಿರುದ್ಧ ಮಾತನಾಡುವವರನ್ನು ಹತ್ತಿಕ್ಕುವಂತೆ ಮಾಡುವ ಸಂಚು ನಡೆಸಿದೆ. ಸರ್ಕಾರದ ಈ ನಡೆಯಿಂದ ಜನ ಸರ್ಕಾರದ ವಿರುದ್ಧ ಮಾತನಾಡಲು ಹೆದರುವಂತಾಗುತ್ತದೆ. ಇದು ಪ್ರಜಾಪ್ರಭುತ್ವದ ಮೂಲ ತತ್ವಕ್ಕೆ ಧಕ್ಕೆಯುಂಟು ಮಾಡುತ್ತದೆ. ಪ್ರಜಾಪ್ರಭುತ್ವದ ಕತ್ತು ಹಿಸುಕುವ ಕೃತ್ಯವಾಗಲಿದೆ ಎಂದು ಕಿಡಿಕಾರಿದರು.

ಈ ವಿಧೇಯಕದಿಂದ ಸಾಮಾಜಿಕ ಕಾರ್ಯಕರ್ತರು, ಪತ್ರಕರ್ತರು, ಸಾಮಾಜಿಕ ಮಾಧ್ಯಮ ಬಳಸುವವರು ಹೆಚ್ಚು ತೊಂದರೆಗೆ ಸಿಲುಕುತ್ತಾರೆ. ಪ್ರಜಾಪ್ರಭುತ್ವದಲ್ಲಿ ಮಾಧ್ಯಮ ಮತ್ತು ಜನರ ಧ್ವನಿಯನ್ನು ಧಮನಿಸುವ ಇಂತಹ ಕಾಯಿದೆ ಯಾವ ಕಾರಣಕ್ಕೂ ಜಾರಿಯಾಗಬಾರದು ಎಂದು ಆಗ್ರಹಿಸಿದರು.

ಈ ಪ್ರತಿಭಟನೆಯಲ್ಲಿ ನಗರ ಬಿಜೆಪಿ ಪ್ರಧಾನ ಕಾರ್ಯದರ್ಶಿಗಳಾದ ಮೈ.ಪು. ರಾಜೇಶ್, ಬಿ.ಎಂ.ರಘು, ರುದ್ರಮೂರ್ತಿ, ಮಂಡಲ ಅಧ್ಯಕ್ಷ ದಿನೇಶ್‌ಗೌಡ, ಮಾಧ್ಯಮ ಸಂಚಾಲಕ ಮಹೇಶ್ ರಾಜೇ ಅರಸ್, ಪಾಲಿಕೆ ಮಾಜಿ ಸದಸ್ಯರಾದ ಪ್ರಶಾಂತ್‌ಗೌಡ, ಪ್ರಮೀಳಾ, ಮುಖಂಡರಾದ ಹೆಚ್.ಜಿ.ಗಿರಿಧರ್, ರಾಕೇಶ್ ಭಟ್, ಮೃಗಾಲಯ ಪ್ರಾಧಿಕಾರದ ಮಾಜಿ ಅಧ್ಯಕ್ಷ ಶಿವಕುಮಾರ್ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಸಿದ್ದರಾಮಯ್ಯರ ಬೆಂಬಲಿಸಲು ಅಹಿಂದ ಸಮಾವೇಶ ಮುನ್ನಲೆಗೆ

ಮೈಸೂರಲ್ಲಿ ಇಂದು ಪೂರ್ವ ಸಿದ್ಧತಾ ಸಭೆ



ಮೈಸೂರು, ಡಿ.23(ಬಿಎಲ್‌ಯು)– ಮುಖ್ಯಮಂತ್ರಿ ಸ್ಥಾನವನ್ನು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಹಸ್ತಾಂತರಿಸಬೇಕೆಂಬ ರಾಜಕೀಯ ಬೆಳವಣಿಗೆ ಗರಿಗೆದರಿರುವ ಈ ಸಂದರ್ಭದಲ್ಲಿ ಅಹಿಂದ ವರ್ಗ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪರವಾಗಿ ನಿಂದಿದೆ. ಅಹಿಂದ ಸಮಾವೇಶ ನಡೆಸುವ ಸಂಬಂಧ ನಾಳೆ (ಡಿ.24) ಮೈಸೂರಿನಲ್ಲಿ ಪೂರ್ವ ಸಿದ್ಧತಾ ಸಭೆ ನಡೆಯಲಿದೆ.

ಸಿದ್ದರಾಮಯ್ಯ ಅವರನ್ನು ಜ್ಯಾತ್ಯಾತೀತ ಜನತಾ ದಳದಿಂದ ವಜಾಗೊಳಿಸಿದಾಗ ಅಹಿಂದ ಸಿದ್ದರಾಮಯ್ಯ ಅವರ ಬೆನ್ನಿಗೆ ನಿಂತಿತು. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಸಂದರ್ಭದಲ್ಲಿ ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಲು ಅಹಿಂದ ಪ್ರಮುಖ ಪಾತ್ರ ವಹಿಸಿತು. ಸಿದ್ದರಾಮಯ್ಯ ಅವರ ಸಂಕಷ್ಟದ ಸಮಯದಲ್ಲಿ ಅಲ್ಪಸಂಖ್ಯಾತ, ಹಿಂದುಳಿದ ಹಾಗೂ ದಲಿತ ಸಮುದಾಯಗಳು ಬೆಂಬಲವಾಗಿ ನಿಂತಿವೆ. ಈಗ ಡಿ.ಕೆ.ಶಿವಕುಮಾರ್ ಅವರಿಗೆ ಅಧಿಕಾರ ಹಸ್ತಾಂತರ ಮಾಡಬೇಕೆಂಬ ರಾಜಕೀಯ ಬೆಳವಣಿಗೆ ಹಲವು ಸ್ವರೂಪ ಪಡೆದುಕೊಳ್ಳುತ್ತಿರುವ ಈ ಸಮಯದಲ್ಲಿ ಕೂಡ ಅಹಿಂದ ಸಿದ್ದರಾಮಯ್ಯ ಅವರ ಬೆಂಬಲಕ್ಕೆ ನಿಂತಿದೆ.

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ನೇತೃತ್ವದಲ್ಲಿ ಅಹಿಂದ ಸಮಾವೇಶ ನಡೆಯಲಿದ್ದು, ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ನಾಳೆ ಬೆಳಿಗ್ಗೆ 11.30 ಗಂಟೆಗೆ ನಡೆಯುವ ಪೂರ್ವ ಸಿದ್ಧತಾ ಸಭೆಯಲ್ಲಿ 'ಸಿದ್ದರಾಮಯ್ಯ ಇವತ್ತಿನ ಅನಿವಾರ್ಯ' ಎಂಬ ಘೋಷವಾಕ್ಯದೊಂದಿಗೆ ಚರ್ಚೆ ನಡೆಸಲಾಗುತ್ತಿದೆ.

ಮಾನವಶಾಸ್ತ್ರ ಅಧ್ಯಯನ ವಿಭಾಗದ ವಿದ್ಯಾರ್ಥಿಗಳು ಕ್ಷೇತ್ರಾಧ್ಯಯನಕ್ಕೆ ಹೆಚ್ಚು ಆದ್ಯತೆ ನೀಡಬೇಕು

ವಿಧಾನಪರಿಷತ್ ಸದಸ್ಯ ಕೆ.ಶಿವಕುಮಾರ್ ಕಿವಿಮಾತು



ಮಾನವ ಶಾಸ್ತ್ರ ಅಧ್ಯಯನ ವಿಭಾಗದ ವತಿಯಿಂದ ಆಯೋಜಿಸಿದ್ದ ಎರಡು ದಿನಗಳ ವಿಚಾರ ಸಂಕಿರಣದ ಸಮಾರೋಪದಲ್ಲಿ ಎಂಎಲ್‌ಸಿ ಕೆ.ಶಿವಕುಮಾರ್ ಅವರನ್ನು ಸನ್ಮಾನಿಸಲಾಯಿತು.

ಮೈಸೂರು, ಡಿ.23(ಎಸ್‌ಪಿಎನ್)– ಮಾನವಶಾಸ್ತ್ರ ಅಧ್ಯಯನ ವಿಭಾಗದ ವಿದ್ಯಾರ್ಥಿಗಳು ಹೆಚ್ಚು ಹೆಚ್ಚು ಕ್ಷೇತ್ರಾಧ್ಯಯನಕ್ಕೆ ಆದ್ಯತೆ ನೀಡಬೇಕು. ಇದರಿಂದ ವಸ್ತುನಿಷ್ಠ ವರದಿ ತಯಾರಿಸಲು ಸಾಧ್ಯ ಎಂದು ವಿಧಾನ ಪರಿಷತ್ ಸದಸ್ಯ ಕೆ.ಶಿವಕುಮಾರ್ ಕಿವಿಮಾತು ಹೇಳಿದರು.

ಮೈಸೂರು ವಿವಿ ಮಾನಸಗಂಗೋತ್ರಿ ಆವರಣದ ಮಾನವ ಶಾಸ್ತ್ರ ಅಧ್ಯಯನ ವಿಭಾಗದ ವತಿಯಿಂದ ಆಯೋಜಿಸಿದ್ದ ಎರಡು ದಿನಗಳ ವಿಚಾರಸಂಕಿರಣದ ಸಮಾರೋಪ ಸಮಾರಂಭ'ದಲ್ಲಿ ಭಾಗವಹಿಸಿ ಮಾತನಾಡಿದರು.

ಈ ವಿಭಾಗದ ಸಂಶೋಧ'ನಾ ವಿದ್ಯಾರ್ಥಿಗಳು ಹೆಚ್ಚಾಗಿ ಬುಡಕಟ್ಟು ಸಮುದಾಯದ ನಡುವೆ ಇದ್ದು, ಅಧ್ಯಯನ ನಡೆಸಬೇಕು. ಈ ಸಮುದಾಯಗಳ ಕುಂದು–ಕೊರತೆ ಹಾಗೂ ಸಾಮಾಜಿಕ ಸಮಸ್ಯೆ ಕುರಿತು ನಿವಾರಿಸಲು ಪ್ರಯತ್ನಿಸಬೇಕು ಎಂದರಲ್ಲದೆ, ನಾನು ಪತ್ರಿಕೋದ್ಯಮದ ವಿದ್ಯಾರ್ಥಿಯಾಗಿದ್ದರೂ ಸಂಶೋಧನೆಗಾಗಿ ಮಾನವ ಶಾಸ್ತ್ರ ವಿಭಾಗವನ್ನು ಆಯ್ಕೆ ಮಾಡಿಕೊಂಡು ಸನ್ನಿವೇಶವನ್ನು ತಿಳಿಸಿದರು.

ಇಲ್ಲಿನ ವಿದ್ಯಾರ್ಥಿಗಳು ಹೆಚ್ಚಿನ ಸಮಯ ಗ್ರಾಮೀಣ ಪ್ರದೇಶದಲ್ಲಿ ವಾಸ್ತವ್ಯ ಹೂಡಿ ಅಲ್ಲಿನ ಜನಜೀವನ ಕುರಿತು ವರದಿ ತಯಾರಿಸಿ ಸರ್ಕಾರಕ್ಕೆ ನೀಡುವಂತೆ ಸಲಹೆ ನೀಡಿದ ಅವರು, ಈ ವರದಿಯನ್ನು ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣಿಸಿ ಇದರ ಸಾಧಕ–ಬಾಧಕ ಪರಿಶೀಲಿಸುವ ಸಾಧ್ಯತೆಯೂ ಇದೆ. ಹಾಗಾಗಿ ಈ ವಿಭಾಗದ ವಿದ್ಯಾರ್ಥಿಗಳು ಯಾವುದೇ ಸಂಶೋಧನೆ ಕೈಗೊಂಡರೂ ವಸ್ತುನಿಷ್ಠವಾಗಿ ವರದಿ ತಯಾರಿಸುವಂತೆ ಕಿವಿಮಾತು ಹೇಳಿದರು.

ಇದಕ್ಕೂ ಮುನ್ನ ಮಾತನಾಡಿದ ಮಾನವ ಶಾಸ್ತ್ರ ಅಧ್ಯಯನ ವಿಭಾಗದ ಮುಖ್ಯಸ್ಥ ಡಾ.ಎಸ್.ಬಸವರಾಜಪ್ಪ, ಇತ್ತೀಚಿನ ವರ್ಷಗಳಲ್ಲಿ ಮಾನವ ಶಾಸ್ತ್ರವು ವಿವಿಧ ಶಾಖೆಗಳೊಡನೆ ಹರಡಿಕೊಂಡಿದೆ. ಮಾನವಶಾಸ್ತ್ರ ಕೇವಲ ಒಂದು ಕ್ಷೇತ್ರಕ್ಕೆ ಸಂಬಂಧಿಸಿರದೆ ಹಲವು ಕ್ಷೇತ್ರಗಳನ್ನು ವ್ಯಾಪ್ತಿಸಿದೆ ಎಂದರು.

ಮಾನವ ಶಾಸ್ತ್ರವು ಮಾನವ ಜನಾಂಗ, ವರ್ತನೆ, ಸಮೂಹ, ಜಾತಿ ಪದ್ಧತಿ, ಜಾತಿ ವ್ಯವಸ್ಥೆ ಆಚರಣೆ, ವ್ಯವಹಾರ ಹಂತದ ಅನೇಕ ವಿಷಯಗಳ ಬಗ್ಗೆ ವಿಸ್ತೃತ ವಿಷಯವನ್ನೊಳಗೊಂಡಿದೆ. ಪ್ರಾಚೀನ ಕಾಲದಿಂದಲೂ ಮಾನವ ಸಮಾಜ ಹೇಗೆ ನಾಗರಿಕತೆಯೊಡನೆ ಹರಡಿಕೊಂಡಿದೆ ಎಂಬುದನ್ನು ತಿಳಿಸುತ್ತದೆ. ಅಲ್ಲದೆ, ಮಾನವಶಾಸ್ತ್ರವು ಪ್ರಾಚೀನ ಸಮಾಜದ ಪರಿಕಲ್ಪನೆ, ಪ್ರಾಚೀನ ಸಮಾಜ ಮತ್ತು ಸಂಸ್ಥೆಗಳ ಅಧ್ಯಯನ, ಪ್ರಾಚೀನ ಕಲೆ, ಭಾಷೆ ಸೇರಿದಂತೆ ಅನೇಕ ಪ್ರಕಾರಗಳ ಕುರಿತು ಅಧ್ಯಯನ ನಡೆಸಬೇಕಿದೆ ಎಂದರು.

ಮಾನವಶಾಸ್ತ್ರ ಅಧ್ಯಯನ ಮಾಡುವುದರಿಂದ ವಿದ್ಯಾರ್ಥಿಗಳು ಮಾನವನ ಸಾಮಾಜಿಕ ಜೀವನದ ರಚನೆ, ಕುಟುಂಬ ಪದ್ಧತಿ, ವಿವಾಹ ಪದ್ಧತಿ, ಸಂಸ್ಕೃತಿ ಉಗಮ, ಇತಿಹಾಸ ವಿಕಾಸ ಮತ್ತು ಬೆಳವಣಿಗೆ, ಆರ್ಥಿಕ, ರಾಜಕೀಯ ಆಡಳಿತದ ಬಗ್ಗೆ ತಿಳಿದುಕೊಳ್ಳಬಹುದು ಎಂದು ಹೇಳಿದರು.

ವಿಚಾರ ಸಂಕಿರಣದಲ್ಲಿ ಡಾ.ಆರ್.ಚಂದ್ರಶೇಖರ್, ಡಾ.ಎಂ.ಎಲ್.ದೊರೆರಾಜ್, ಡಾ.ಟಿ.ಎಂ.ವಿಷಕಂಠನಾಯಕ್, ಡಾ.ಸಿ.ಆರ್.ಸತ್ಯನಾರಾಯಣ, ಡಾ.ಯು.ಸಿ.ಬಸವರಾಜು, ಎಸ್.ರಾಘವೇಂದ್ರ, ಪತ್ರಿಕೋದ್ಯಮ ವಿಭಾಗದ ಡಾ.ಸಪ್ನಾ, ಜ್ಯೋತಿ, ಬಿ.ಡಿ.ಧನುಷ್, ಎಂ.ಸಂತೋಷ್ ಕುಮಾರ್ ಸೇರಿದಂತೆ ಇತರರಿದ್ದರು.

ರಾಜ್ಯಮಟ್ಟದ ಮಾಸ್ಟರ್ಸ್ ಅಥ್ಲೆಟಿಕ್ ಕ್ರೀಡಾಕೂಟದಲ್ಲಿ ಮೈಸೂರು ಹಿರಿಯರ ಸಾಧನೆ



ಕೋಲಾರದಲ್ಲಿ ಡಿ.21ರಿಂದ 22ರಂದು ನಡೆದ 44ನೇ ರಾಜ್ಯಮಟ್ಟದ ಮಾಸ್ಟರ್ಸ್ ಅಥ್ಲೆಟಿಕ್ ಕ್ರೀಡಾಕೂಟದಲ್ಲಿ ಭಾಗವಹಿಸಿದ್ದ ಮೈಸೂರಿನ ಹಲವರು ಮಾಸ್ಟರ್ಸ್‌ನ ಅಥ್ಲೆಟಿಕ್‌ನಲ್ಲಿ ಭಾಗವಹಿಸಿ ಪದಕ ತಮ್ಮದಾಗಿಸಿಕೊಂಡಿದ್ದಾರೆ.

ಮೈಸೂರು, ಡಿ.23(ಎಸ್‌ಪಿಎನ್)– ಕೋಲಾರದಲ್ಲಿ ಡಿ.21ರಿಂದ 22ರಂದು ನಡೆದ 44ನೇ ರಾಜ್ಯಮಟ್ಟದ ಮಾಸ್ಟರ್ಸ್ ಅಥ್ಲೆಟಿಕ್ ಕ್ರೀಡಾಕೂಟದಲ್ಲಿ ಮೈಸೂರಿನ 25 ಮಂದಿ ಚಿನ್ನದ ಪದಕ, 22 ಬೆಳ್ಳಿ ಪದಕ, 13 ಕಂಚಿನ ಪದಕ ಸೇರಿದಂತೆ ಒಟ್ಟು 66 ಪದಕಗಳನ್ನು ಗೆದ್ದು, ಮೈಸೂರಿನ ಕೀರ್ತಿ ಹೆಚ್ಚಿಸಿದ್ದಾರೆ.

ಎ.ಟಿ.ಬೋಪಣ್ಣ ಡಿಸ್ಕಸ್ ಥ್ರೋನಲ್ಲಿ (ತೃ), ಡಾ.ಕೆ.ಎಸ್.ರಘುನಂದನ್ ಐದು ಕಿ.ಮೀ ನಡುಗೆಯಲ್ಲಿ (ದ್ವಿ), ಎನ್.ಮಂಜು ಹಾಮರ್ ಥ್ರೋನಲ್ಲಿ (ಪ್ರ), ಅಶೋಕ್‌ಕುಮಾರ್ ಐದು ಕಿ.ಮೀ ಓಟದಲ್ಲಿ (ದ್ವಿ), ಎಂ.ಶಶಿಧರ್ ಕುಟ್ಟಿ(ದ್ವಿ), ಎ.ಎ.ಪೆಮ್ಮಯ್ಯ(ದ್ವಿ), ಮಾದಪ್ಪಯೋಗೇಂದ್ರ (ಪ್ರ), ಬೋರೇಗೌಡ (ಪ್ರ), ಎ.ಸಿ.ಸೋಮೇಗೌಡ(ಪ್ರ), ಬಿ.ಎಸ್.ನರಸಿಂಹ ಪ್ರಸಾದ್(ದ್ವಿ), ಕೆ.ಎನ್.ಸೋಮಶೇಖರ್(ಪ್ರ), ಎಸ್.ಮಹದೇವು(ದ್ವಿ), ಜಿ.ಶ್ರೀನಿವಾಸಯ್ಯ (ಪ್ರ), ಆರ್.ಮಹದೇವ ರಾವ್ (ತೃ), ಪಿ.ಜಿ.ಚಂದ್ರಶೇಖರ್(ಪ್ರ), ಎ.ವಿ.ಆಶಾ(ದ್ವಿ), ಜಯಲಕ್ಷ್ಮಿ(ಪ್ರ), ಶರ್ಮಿಳಾ ಅರಸ್(ಪ್ರ), ಎಚ್.ಜಿ.ಸುಷ್ಮಾ(ಪ್ರ), ಟಿ.ಜಿ.ಆಶಾ(ಪ್ರ), ವಿ.ರೇಖಾ(ಪ್ರ), ಎನ್.ಆರ್.ಶೋಭಾ(ದ್ವಿ), ಟಿ.ಎಸ್.ಸುಬ್ಬಲಕ್ಷ್ಮಿ(ತೃ), ಎಚ್.ಎಂ.ಸುಜಾತ(ದ್ವಿ), ರಾಣಿ ಬಿ.ರಾಜ್(ಪ್ರ), ವಿಜಯರಮೇಶ್(ದ್ವಿ), ಬಿ.ಮಂಜಮ್ಮ(ಪ್ರ), ಎಚ್.ಎಂ.ಭಾರತಿ(ಪ್ರ), ಪಾರ್ವತಿ ಕಾಂತರಾಜ್(ದ್ವಿ) ಸೇರಿದಂತೆ ಇತರರು ಪ್ರಮಾಣ ಪತ್ರ ಪಡೆದುಕೊಂಡಿದ್ದಾರೆ ಎಂದು ಮೈಸೂರು ಜಿಲ್ಲಾ ಮಾಸ್ಟರ್ಸ್ ಅಥ್ಲೆಟಿಕ್ಸ್ ಅಸೋಸಿಯೇಷನ್ ಕಾರ್ಯದರ್ಶಿ ಬಿ.ಬಸವರಾಜು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು
ಜೆ.ಎಲ್.ಬಿ. ರಸ್ತೆ, ಮೈಸೂರು – 5700005
ದೂರವಾಣಿ/ಫ್ಯಾಕ್ಸ್: 0821–2420624
ಸಂಖ್ಯೆ: ಮೈಅಪ್ರಾ/ಅಅ/ಪಿಬಿ/ಟಿಎನ್/14/2025–26 ದಿನಾಂಕ: 20.12.2025

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

(ಕರ್ನಾಟಕ ಸರ್ಕಾರದ ಕೆಪಿಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅದ್ಯಾದೇಶ 1999–2000ರ ಪ್ರಕಾರ ಆಕ್ಟ್ 2000 ರ ನಿಯಮದಂತೆ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ನಿಯಮದನ್ವಯ ಕೆಪಿಪಿಪಿ ಪೋರ್ಟಲ್ ಮುಖಾಂತರ ರೂ. 25.00 ಲಕ್ಷದ ಅಂದಾಜು ಮೊತ್ತದ ಮೈಸೂರು ನಗರ ಡಾ। ಬಿ.ಆರ್. ಅಂಬೇಡ್ಕರ್ ಭವನದ ಮುಂದುವರೆದ ಕಾಮಗಾರಿಗೆ ಪಿ.ಎಂ.ಸಿ ಮಾಡುವ ಬಗ್ಗೆ ಕೆಪಿಪಿಪಿ ಪೋರ್ಟಲ್‌ನಲ್ಲಿ ಟೆಂಡರ್ ಆಹ್ವಾನಿಸಲಾಗಿದ್ದು, ದಿ: 22.12.2025 ರಿಂದ ಪಡೆಯಬಹುದಾಗಿದ್ದು, ಟೆಂಡರ್ ಸಲ್ಲಿಸಲು ದಿ: 26.12.2025 ರ ಸಂಜೆ 5.30 ಗಂಟೆಯವರೆಗೆ ಸಮಯವನ್ನು ನಿಗಧಿಪಡಿಸಿದ್ದು, ತಾಂತ್ರಿಕ ಮತ್ತು ಆರ್ಥಿಕ ಬಿಡ್‌ನ್ನು ಕ್ರಮವಾಗಿ ದಿ: 29.12.2025 ರ ಬೆಳಿಗ್ಗೆ 11.00 ರ ನಂತರ ತೆರೆಯಲಾಗುವುದು. ಅರ್ಹ ನೋಂದಾಯಿತ ಕನ್ಸಲ್ಟೆನ್ಸ್ ಸಂಸ್ಥೆಗಳು ಕಾಮಗಾರಿಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ http://KPPP.karnataka.gov.in ಮುಖಾಂತರ ನಿಯಮಾವಳಿಯಂತೆ ಟೆಂಡರ್ ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗೆ ಈ ಕಛೇರಿಯ ದೂರವಾಣಿ ಸಂಖ್ಯೆ 0821–2420624 ರಿಂದ ಹಾಗೂ ಪ್ರಾಧಿಕಾರದ ವೆಬ್‌ಸೈಟ್ www.mudamysore.gov.in ನಲ್ಲಿ ಪ್ರಕಟಣೆಯ ಮಾಹಿತಿಯನ್ನು ಪಡೆಯಬಹುದು.

ಟಿಪ್ಪಣಿ: ಟೆಂಡರ್ ಸಲ್ಲಿಸುವ ದಿನಾಂಕಗಳು ಬದಲಾಣೆ ಇದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಇರುವ ದಿನಾಂಕಗಳನ್ನೆ ಪರಿಗಣಿಸುವುದು. ಮತ್ತೆ ದಿನ ಪತ್ರಿಕೆಗಳಲ್ಲಿ ಪ್ರಕಟಿಸುವುದಿಲ್ಲ.

ಸಹಿ/– ಅಧೀಕ್ಷಕ ಅಭಿಯಂತರರು, ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು

DIPR/DDMYS/1402/KSMCA/801/2025-26

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತಿನ ಮಾಲೀಕರಾದ ಶ್ರೀ ಕೆ.ವಿ. ರಾಜಶೇಖರಯ್ಯ ರವರ ಪತ್ನಿ, ಶ್ರೀಮತಿ ಎಂ.ಎಸ್. ಮಂಜುಳ, ರವರು ನನ್ನ ಕಕ್ಷಿದಾರರಿಗೆ ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಅಪೇಕ್ಷಿಸಿರುತ್ತಾರೆ. ಅದರಂತೆ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆಯಲು ಸಿದ್ಧರಿರುವುದರಿಂದ ಸದರಿ ಸ್ವತ್ತಿನ ಮೇಲೆ ಬ್ಯಾಂಕ್ ಮತ್ತು ಇನ್ನಿತರ ಆರ್ಥಿಕ ಸಂಸ್ಥೆಗಳನ್ನು ಒಳಗೊಂಡಂತೆ, ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಆಕ್ಷೇಪಣೆ, ಸಿವಿಲ್ ವ್ಯಾಜ್ಯ, ತಂಟೆ–ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 7 (ಏಳು) ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ತಪ್ಪಿದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ–ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ವರುಣ ಹೋಬಳಿ, ವರುಣ ಗ್ರಾಮದಲ್ಲಿ ವಾಣಿಜ್ಯ (ಪೆಟ್ರೋಲ್ ಬಂಕ್) ಉದ್ದೇಶಕ್ಕಾಗಿ ಅನ್ಯಕ್ರಾಂತಗೊಂಡಿರುವ (ಆದೇಶ ಸಂಖ್ಯೆ. ಎ.ಎಲ್.ಆರ್(2) ಸಿಆರ್ 288/2006–07 ದಿ. 25–09–2007) ಸರ್ವೆ ನಂ. 204/1 ರಲ್ಲಿ ವಿಸ್ತೀರ್ಣ 0.33 ಗುಂಟೆ (07 ಗುಂಟೆ ರಸ್ತೆ ಮಾರ್ಜಿನ್ ಒಳಗೊಂಡಂತೆ) ಪ್ರಸ್ತುತ ವರುಣ ಗ್ರಾಮ ಪಂಚಾಯಿತಿ ವ್ಯಾಪ್ತಿಗೊಳಪಟ್ಟ ಸ್ವತ್ತಿನ ನಿರ್ಧಾರಣ ಸಂಖ್ಯೆ. 1214/984, ರ ಸ್ವತ್ತಿನ ಚಕ್ಕುಬಂದಿ ಪೂರ್ವಕ್ಕೆ – ಸರ್ವೆ ನಂ. 204/1ರ ಉಳಿಕೆ ಜಮೀನು, ಪಶ್ಚಿಮಕ್ಕೆ – ಸರ್ವೆ ನಂ. 205 ರ ಜಮೀನು, ಉತ್ತರಕ್ಕೆ – ಮೈಸೂರು – ಟಿ. ನರಸೀಪುರ ರಸ್ತೆ ಮತ್ತು ದಕ್ಷಿಣಕ್ಕೆ ಸರ್ವೆ ನಂ. 1 ರಲ್ಲಿನ ಸ್ಕೂಲ್ ಜಾಗ.

ಸಹಿ/– ಶ್ರೀಲತಾ ದೀಕ್ಷಿತ್, ವಕೀಲರು
ಎಸ್‌ಎಲ್‌ಡಿ ಲಾ ಫರ್ಮ್
ನಂ. 1416, ನಾರಾಯಣಶಾಸ್ತ್ರಿ ರಸ್ತೆ,
ಸಪ್ನ ಬುಕ್ ಹೌಸ್ ಹತ್ತಿರ, ಮೈಸೂರು.
ಮೊ: 9844640641
email: sldlawfirm2021@gmail.com

ಮೈಸೂರು ಮಿತ್ರ
46
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವು ಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು